(ಶ್ರೀ ಕಡಿದಾಳ್ ಮಂಜಪ್ಪ.)

not forget. Though in the agenda for to-day the other Bill—Tenancy (Second Amendment) Bill—is included, my Hon'ble friend exhibits his incompetence to participate in the debate.

* Sri A. BHEEMAPPA NAIK (Molakalmuru).—If the Members of the Opposition had pointed out the defect, then that would have been something. The Minister himself found that it was necessary to get some permission. I do not know whether the Members on the other side were competent enough to find out the defect in it. Therefore, the allegation from that side is not welcome.

Sri Mulka GOVINDA REDDY.—The initiative lay with the Minister.

Mr. SPEAKER.—I know under what circumstances the Board of Revenue Bill was piloted by the Hon'ble Minister; it was at the instance of the members and mostly at the instance of the members of the Opposition and the Leader of the Opposition. Therefore, just to accommodate the members, the Hon'ble the Revenue Minister piloted this Bill. He finds some constitutional difficulty. Therefore, he should be given a chance.

Sri Kadidal MANJAPPA.—Now he is competent.

Mr. SPEAKER.—Now discussion on the Mysore Tenancy (Second Amendment) Bill will continue.

MYSORE TENANCY (SECOND AMENDMENT) BILL, 1954.

Motion to consider (contd.)

*ಶ್ರೀ ಎ. ಭೀಮಪ್ಪನಾಯಕ್.—ಸ್ವಾಮಿ, ಆ ಬಿಲ್ಲನ್ನೇ ನಾನು ಈ ದಿವಸ ತಂದಿಲ್ಲ. ಆದರೆ ನನ್ನ ಸ್ನೇಹಿತರು.

[ಅಷ್ಟು ಹೊತ್ತಿಗೆ ಅಧ್ಯಕ್ಷರು ಒಂದು ಮಸೂದೆಯ ಪ್ರತಿಯನ್ನು ಮಾತನಾಡಲು ನಿಂತಿದ್ದಂಥ ಸದಸ್ಯರಿಗೆ ಕಳುಹಿಸಿಕೊಟ್ಟರು.]

ಸ್ವಾಮಿ, ನಾನು ಈ ಹಿಂದೆ ಈ ಮಸೂದೆಯ ಬಗ್ಗೆ ಈ ಸಭೆಯಲ್ಲಿ ಭಾಷಣ ಮಾಡಲು ಪ್ರಾರಂಭಿಸಿದ ಕಾಲದಲ್ಲೇ ಇದರಲ್ಲಿ ಅಡಕವಾಗಿರತಕ್ಕ ಮುಖ್ಯಾಂಶಗಳ ಹಾಗೂ ಇದರಲ್ಲಿರತಕ್ಕಂಥ ನ್ಯೂನಾತಿರಿಕ್ತಗಳ ಬಗ್ಗೆ ಅನೇಕ ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತಂದಿದ್ದೇನೆ. ಆದರೆ ಈ ದಿವಸ ಕೂಡ ನಾನು ಹೇಳುವುದೇನೆಂದರೆ ಈ ಬಿಲ್ಲನ್ನು ಸರ್ಕಾರದವರು ಯಾವ ರೀತಿಯಲ್ಲಿ ತರಬೇಕಾಗಿತ್ತೋ ಆ ರೀತಿಯಲ್ಲಿ ತಂದಿಲ್ಲ ಎಂದು ಹೇಳಬೇಕಾಗಿದೆ. ಈ ಮಸೂದೆಯಲ್ಲಿ ಟೆನೆನ್ಸಿ ಆಕ್ಟಿಗೆ ಸಂಬಂಧಪಟ್ಟಂಥ ಕೆಲವು ಅಂಶಗಳೇನೋ ನಮೂದಿಸಲ್ಪಟ್ಟಿವೆ. ಆದಾಗ್ಯೂ ಅವುಗಳಿಗೆ ಈ ಸಂದರ್ಭದಲ್ಲಿ ಈ ಸಭೆಯ ಸಹಾನುಭೂತಿಯನ್ನು ಪಡೆದುಕೊಳ್ಳಲು ಸಂಬಂಧವಿಲ್ಲವೆಂದು ನಾನು ತಿಳಿಸಬೇಕಾಗಿದೆ. ಈಗ ಈ ಮಸೂದೆಯಲ್ಲಿ ಸರ್ಕಾರದವರು ಈ ಯಾವ ಒಂದು Limitation of holdings ಅನ್ನುವುದನ್ನು ಅಡಕಮಾಡಿದ್ದಾರೋ ಅದನ್ನು ಪ್ರತ್ಯೇಕ ಮಾಡಿ, ಅದಕ್ಕೇ ಒಂದು ಪ್ರತ್ಯೇಕ ಬಿಲ್ಲು, ಈ ಗೇಣಿ ವಿಚಾರಕ್ಕೇ ಒಂದು ಪ್ರತ್ಯೇಕ ಬಿಲ್ಲು—ಹೀಗೆ ಎರಡನ್ನೂ ಬದಲಾವಣೆ ಮಾಡಿ ತರತಕ್ಕದ್ದು ಸೂಕ್ತ ಮತ್ತು ಒಳ್ಳೆಯದೆಂದು ಹೇಳುತ್ತೇನೆ. ಹಾಗೆ ನೀವು ಈ ಎರಡನ್ನೂ ಪ್ರತ್ಯೇಕಮಾಡದೆ ಹೋದರೆ ಏನಾಗುತ್ತದೆ ಎಂದರೆ, ನಾವೀಗ ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಒಪ್ಪಿಸುವುದರಿಂದ, ಈ ಬಿಲ್ಲಿನಲ್ಲಿ ಅಡಕಮಾಡಿರತಕ್ಕಂಥ Limitation of holdingsಗೂ ಒಪ್ಪಿಕೊಂಡಿದ್ದೇವೆ ಅನ್ನತಕ್ಕ ಅರ್ಥ ಬರುತ್ತದೆ. ಅದರೆ ತಾವು ಇದಕ್ಕೆ ಹೇಳಬಹುದು—ಈ ಗೇಣಿ ಮಸೂದೆಯ ತತ್ವ ಮತ್ತು Limitation of holdings ತತ್ವ ಎರಡೂ ಒಂದೇ, ಇವೆರಡಕ್ಕೂ ಹೊಂದಾವಣಿಕೆಯಿರುವುದರಿಂದ ಇವೆರಡನ್ನೂ ಒಂದರಲ್ಲೇ ಅಡಕಮಾಡಿ ತಂದಿದ್ದೇವೆ ಎಂದು. ಆದರೆ ತಾವು ಹಾಗೆ ಹೇಳಿದರೆ ಅದು ಸರಿಯಾಗಿರುವುದಿಲ್ಲ. ತಾವು ಹಿಂದೆ ಇನಾಂ ರದ್ದಿಯಾತಿ ಬಗ್ಗೆ ಒಂದೇ ಒಂದು ಮಸೂದೆಯನ್ನು ತಂದಿರಲಿಲ್ಲ. ಎಲ್ಲಾ ಇನಾಂತಿಗಳನ್ನು ರದ್ದುಪಡಿಸಬೇಕಾಗಿದ್ದಾಗ ಪರ್ಸನಲ್ ಅಂಡ್ ಮಿಸ್ಲೇನಿಯಸ್ ಇನಾಂ ಬಿಲ್ಲಾದರೇನು, ರಿಲಿಜಿಯಸ್ ಅಂಡ್ ಛಾರಿಟೆಬಲ್ ಇನಾಂ ಬಿಲ್ಲಾದರೇನು ಎಂದು ಅವುಗಳೆಲ್ಲಕ್ಕೂ ಒಂದೇ ಬಿಲ್ಲನ್ನು ತರಬಹುದಾಗಿತ್ತು. ಆದರೆ ಆ ಎರಡು ಬಿಲ್ಲುಗಳನ್ನೂ ಒಂದರಲ್ಲೇ ಅಡಕಮಾಡಿ ತರುವುದು ಸೂಕ್ತವಾದುದಲ್ಲವೆಂಬುದಾಗಿ ತಮಗೆ ವ್ಯಕ್ತಪಟ್ಟು ಕಾರಣ ತಾವು ಅವುಗಳ ಬಗ್ಗೆ ಒಂದೊಂದಕ್ಕೂ ಪ್ರತ್ಯೇಕಪ್ರತ್ಯೇಕವಾದ ಬಿಲ್ಲನ್ನು ತಂದಿದ್ದೀರಿ. ಅದೇ ರೀತಿಯಾಗಿ ಈ ಸಂದರ್ಭದಲ್ಲಿಯೂ ತಾವು ಎರಡು ಪ್ರತ್ಯೇಕ ಬಿಲ್ಲುಗಳನ್ನು ತರತಕ್ಕದ್ದು ಅವಶ್ಯಕವಾಗಿದೆ. ಕಾರಣವೇನೆಂದರೆ ತಾವು ಈ Limitation of holdings ಎಂಬ ವಿಷಯವನ್ನು ಈ ಟೆನೆನ್ಸಿ ಬಿಲ್ಲಿನಲ್ಲಿ ಅಡಕಮಾಡಿರುವುದು ಸರಿಯಾಗಿಲ್ಲ. ಈ ಲಿಮಿಟೇಷನ್ ಆಫ್ ಲ್ಯಾಂಡಿನ ವಿಚಾರದಲ್ಲಿ—ಟೆನೆಂಟ್ ಆಗಿರತಕ್ಕವನಿಗೆ ಭೂಮಿ ಲಿಮಿಟೇಷನ್ ಎಷ್ಟಿರಬೇಕು, ಲ್ಯಾಂಡ್ ಹೋಲ್ಡರ್ ಆಗಿರತಕ್ಕವನಿಗೆ ಈ ಭೂಮಿ ಲಿಮಿಟೇಷನ್ ಎಷ್ಟಿರಬೇಕು, ಸ್ವಂತ ಸಾಗುವಳಿ ಮಾಡತಕ್ಕಂಥ ರೈತರಿಗೆ ಈ ಭೂಮಿ ಪರಮಾವಧಿ ಎಷ್ಟಿರಬೇಕು ಎಂಬುದನ್ನೆಲ್ಲಾ ಇದರಲ್ಲಿಯೇ ನಿರ್ಧರ ಮಾಡಲು ತಾವೀಗ ಪ್ರಯತ್ನಪಟ್ಟಿರುವ ಹಾಗೆ ಕಾಣುತ್ತಿದೆ. ಮಾನ್ಯ ರೆವಿನ್ಯೂ ಮಿನಿಸ್ಟರವರು ಈ ಪ್ರಶ್ನೆಗಳಿಗೂ ಈ ಮಸೂದೆಗೂ ಸಂಬಂಧವಿಲ್ಲ ಎಂದು ಹೇಳಬಹುದು. ಆದರೆ ನಾವೀಗ ಈ ಬಿಲ್ಲಿನಲ್ಲಿ ಹೇಳಿರತಕ್ಕಂಥ ಹೆಡ್ ಲೈನುಗಳನ್ನು ನೋಡಿದರೂ ಕೂಡ—ತಾವೀದಿವಸ ಈ ಗುತ್ತಿಗೆದಾರನಿಗೆ ಹೇಳಿರತಕ್ಕಂಥ Limitations of land, ಈ ಗುತ್ತಿಗೇದಾರನಿಗಾಗಲಿ ಅಥವಾ ಇತರ ರೈತರಿಗೇ ಆಗಲಿ ಅನ್ವಯಿಸುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇದಕ್ಕೆ ನನ್ನ ಸಲಹೆಯೇನೆಂದರೆ, ಸರ್ಕಾರದವರು ಈಗ ಮಂಡಿಸಿರತಕ್ಕಂಥ ಈ ಬಿಲ್ಲನ್ನು ವಾಪಸ್ಸು

ತೆಗೆದುಕೊಂಡು ಈ ಎರಡು ವಿಷಯಗಳಿಗೂ ಬೇರೆ ಬೇರೆಯಾಗಿ ಬಿಲ್ಲುಗಳನ್ನು ಮಾಡಿ ತರಬೇಕೆಂದು ಹೇಳತಕ್ಕದ್ದೇ ಆಗಿದೆ. ಈ ಬಗ್ಗೆ ಮೊನ್ನೆ ತಾನೆ ನಡೆದ ಆವಡಿ ಸೆಷನ್ನಿನಲ್ಲಿ ಇಂಡಿಯಾ ಸರ್ಕಾರದವರು ಒಂದು ಹೊಸ ಪದ್ಧತಿಯನ್ನು ಜಾರಿಗೆ ತರಬೇಕೆಂದಿರುವ ಅಂಶವನ್ನು ವ್ಯಕ್ತಪಡಿಸಿರುತ್ತಾರೆ. ಅದು ದೇಶದಲ್ಲಿರತಕ್ಕಂಥ ಪ್ರತಿಯೊಬ್ಬ ರೈತನಿಗೂ ಪರಮಾವಧಿ ಜಮೀನು ಎಷ್ಟಿರಬೇಕೆಂಬುದನ್ನು ನಿರ್ಧರ ಮಾಡುವುದಕ್ಕೆ ಸಂಬಂಧಪಟ್ಟ ವಿಚಾರವಾಗಿದೆ. ಅಂಥ ಒಂದು ಪ್ರತ್ಯೇಕವಾಗಿ ಮಸೂದೆಯನ್ನು ತಂದು ಮಾಡಬೇಕಾಗಿರತಕ್ಕಂಥ ಕೆಲಸವನ್ನು ಈಗ ತಾವು ಈ ಮಸೂದೆಯಲ್ಲೇ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಈಗ ತಾವು ತಂದಿರತಕ್ಕಂಥ ಮಸೂದೆಯಲ್ಲಿ ಅಡಕವಾಗಿರುವ ಕೆಲವು ಕ್ಲಾಜುಗಳನ್ನು ತೆಗೆದು ಅವುಗಳಸ್ನು ಆ ಹೊಸ ಬಿಲ್ಲಿನಲ್ಲಿ ಅಡಕಮಾಡಿ ತರುವುದಕ್ಕೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಬರವಣಿಗೆ ಮಾಡಿ, ಬೇಕಾದರೆ ಅದನ್ನು ತಾವು ಸೆಲೆಕ್ಟ್ ಕಮಿಟಿಗೆ ಕಳುಹಿಸಿ. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ.

The House does not commit itself to the provisions relating to limitation of holdings and permissible limits.

ಈಗ ಈ ಮಸೂದೆಯಲ್ಲಿ ಅಡಕಮಾಡಿರುವಂಥ ತಿದ್ದುಪಡಿಗಳ ಬಗ್ಗೆ ಈ ಸಭೆಯು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಆಗುವುದಿಲ್ಲ. ಆದರೆ ಗೇಣೀದಾರರಿಗೆ ಸಂಬಂಧಪಟ್ಟಂಥ ತಿದ್ದುಪಡಿಗಳನ್ನು ಮಾತ್ರ ಸಲೆಕ್ಟ್ ಸಮಿತಿಯವರು ಪರಿಶೀಲನೆ ಮಾಡಬಹುದು ಎಂದು ಹೀಗೊಂದು ಸೂಚನೆ ಕೊಟ್ಟು ತಾವು ಇದನ್ನು ಸಲೆಕ್ಟ್ ಸಮಿತಿಗೆ ಕಳುಹಿಸಬಹುದು. ಹೀಗಾದರೂ ಮಾಡಿ. ಇಲ್ಲವೇ ಈಗ ಈ ಮಸೂದೆಯನ್ನು ವಾಪಸ್ಸು ತೆಗೆದುಕೊಂಡು ತಾವು ಈ ಗೇಣೀದಾರರಿಗೆ ಸಂಬಂಧಪಟ್ಟಿರತಕ್ಕಂಥ ವಿಷಯಗಳಿಗೇ ಒಂದು ಬಿಲ್ಲನ್ನೂ ಮತ್ತು ಈ ಜಮೀನಿನ ಪರಮಾವಧಿಯನ್ನು ಗೊತ್ತುಮಾಡತಕ್ಕ ಬಗ್ಗೆ ಒಂದು ಬಿಲ್ಲನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಬೇಕಾಗಿದ್ದರೂ ತರಬಹುದು. ಹಾಗಿಲ್ಲದೆ ತಾವು ಸುಮ್ಮನೆ ' ಈ ಭೂಮಿಯ ಪರಮಾವಧಿ ಗೊತ್ತುವಳಿಯನ್ನು ಈಗಾಗಲೇ ನಮ್ಮ ಅಕ್ಕಪಕ್ಕದ ಪ್ರಾಂತಗಳವರು ಜಾರಿಗೆ ತಂದಿದ್ದಾರೆ, ಅಲ್ಲೆಲ್ಲಾ ಲ್ಯಾಂಡ್ ರಿಫಾರಂಸ್ ಜಾರಿಗೆ ಬಂದಿದೆ, ಆದರೆ ಈ ವಿಷಯ ನಮ್ಮ ಮೈಸೂರು ಸಂಸ್ಥಾನದಲ್ಲಿ ಬಹಳ ದಿವಸಗಳಿಂದಲೂ ಹಿಂದೆ ಬಿದ್ದು ಬಂದಿದೆ, ಆದಕಾರಣ ಇದನ್ನು ತಂದಿದ್ದೇವೆ, ಇದನ್ನು ನೀವೆಲ್ಲರೂ ಈಗ ಒಪ್ಪಿಕೊಳ್ಳಿ ' ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಇದು ಅರ್ಥವಿಲ್ಲದ ಮಾತು. ಕೆಲವು ಕಡೆ ಭೂಸುಧಾರಣೆಯನ್ನು ಜಾರಿಗೆ ತಂದಿರಬಹುದು. ಆದರೆ ಅವರು ಈ ರೀತಿಯಾಗಿ ಅಲ್ಲಿ ತಂದಿಲ್ಲ. ಅಲ್ಲೆಲ್ಲಾ ಮಾಡಿರುವುದು ಈ ಜಮೀನು ಹಿಡುವಳಿಯ ಪರಮಾವಧಿಯನ್ನು ಕೇವಲ ಗೇಣೀದಾರನಿಗೊಬ್ಬನಿಗೆ ಮಾತ್ರವಲ್ಲದೆ ಸರ್ವರಿಗೂ ಅನ್ವಯಿಸತಕ್ಕ ರೀತಿಯಲ್ಲಿ ಮಾಡಿದ್ದಾರೆ. ತಾವೀಗ ಇಲ್ಲಿ ಈ ಜಮೀನ್ ಹಿಡುವಳಿಯ ಪರಮಾವಧಿಯನ್ನು ಗೊತ್ತುಮಾಡಲು ಹೊರಟಿರುವುದನ್ನು ನೋಡಿದರೆ—ಒಂದು ಸಂಸಾರದಲ್ಲಿ ಒಬ್ಬ ಮನುಷ್ಯನಿಗೆ ಕೇವಲ ನಾಲ್ಕು ಜನ ಮಕ್ಕಳಿರುತ್ತಾರೆ, ಆದ ಪ್ರಯುಕ್ತ ಪ್ರತಿಯೊಬ್ಬನಿಗೂ ಇಷ್ಟು ಎಕರೆಗಳಿಗಿಂತ ಜಾಸ್ತಿ ಇರಬಾರದೆಂದು ಮಾಡಲು ತಾವೀಗ ಪ್ರಯತ್ನಪಟ್ಟಿರುವ ಹಾಗೆ ಕಾಣುತ್ತಿದೆ. ಅದಕ್ಕಾಗಿ ತಾವೀಗ 25 ಎಕರೆಗಳ ಸ್ಟಾಂಡರ್ಡನ್ನು ಇಟ್ಟುಕೊಂಡಿದ್ದ ಹಾಗೆ ಕಾಣುತ್ತಿದೆ. ಆದರೆ ತಾವು ಹೀಗೆ ಒಂದು ಜಮೀನ್ ಹಿಡುವಳಿ ಕಾನೂನು ತರುವುದಕ್ಕೆ ಮುಂಚಿತವಾಗಿ ನಮ್ಮ ದೇಶದಲ್ಲಿ ಯಾರಿಗೂ ನಾಲ್ಕು ಮಕ್ಕಳ ಮೇಲೆ ಇರಬಾರದು ಎಂದು ಒಂದು ಬಿಲ್ಲನ್ನು ತಂದು ಆಮೇಲೆ ಈ ಬಿಲ್ಲನ್ನು ತರಬೇಕಾಗಿರುತ್ತದೆ. ಆದರೆ ಮಾನ್ಯ ರೆವಿನ್ಯೂ ಸಚಿವರು ಈ ಅಂಶವನ್ನು ಆಲೋಚನೆ ಮಾಡಿಲ್ಲವೆಂದು ಕಾಣುತ್ತದೆ. ಧೃತರಾಷ್ಟ್ರನಿಗೆ ನೂರೊಂದು ಜನ ಮಕ್ಕಳಿದ್ದರೆಂಬುದನ್ನು ಅವರು ಮರೆತಿರುವಂತೆ ಕಾಣುತ್ತಿದೆ. ನಾನು ಈ ಹಿಂದೆಯೇ ತಿಳಿಸಿದಂತೆ ನೂರು ಜನಗಳಿದ್ದರೂ ಕೂಡ ಅವರದೆಲ್ಲಾ ಒಂದೇ ಸಂಸಾರ, ಹತ್ತು ಜನಗಳಿದ್ದರೂ ಕೂಡ ಅದೂ ಒಂದು ಸಂಸಾರ, ಮೂರು ಜನರಿದ್ದರೆ ಅದೂ ಒಂದು ಸಂಸಾರ ಎಂದು, ಲೆಕ್ಕ ಹಾಕಿಕೊಂಡು ಅದಕ್ಕೆ ತಾವು 25 ಎಕರೆಗಳನ್ನು ಪರಮಾವಧಿಯಾಗಿ ನಿರ್ಧರ ಮಾಡಿದರೆ, ಈಗ ಒಂದು ಸಂಸಾರದಲ್ಲಿ 10 ಜನ ಮಕ್ಕಳಿದ್ದರೆ, ಯಜಮಾನನು ತನ್ನ 10 ಜನ ಮಕ್ಕಳಿಗೂ ಒಬ್ಬೊಬ್ಬರಿಗೆ ಒಂದೊಂದು ಎಕರೆಯಂತೆ ಹಂಚಿಕೊಟ್ಟಮೇಲೆ, ಅವನಿಗೆ 25 ಎಕರೆ ಎಲ್ಲಿ ಉಳಿಯಿತು ? ಈ ರೀತಿ 25 ಎಕರೆ ಉಳಿಯುವಂತೆ ತಾವೆಲ್ಲಿ ಪ್ರೊವೈಡ್ ಮಾಡಿದ್ದೀರಿ ? ಸಂಸಾರದಲ್ಲಿರತಕ್ಕವರು ವಿಭಾಗವಾಗಲೇಕೂಡದೆಂದು ಎಲ್ಲಿ ತಿಳಿಸಿದ್ದೀರಿ ? ತಾವು ಎಂದೂ ಇಲ್ಲದೆ ಇದ್ದಂಥ ತೊಂದರೆಗಳನ್ನು ತಂದು ಹಾಕಲು ಈಗ ಪ್ರಯತ್ನ ಮಾಡಿದ್ದೀರಿ. ಈ ಬಾಧಕಗಳನ್ನು ನಿವಾರಣೆ ಮಾಡತಕ್ಕದ್ದು ನ್ಯಾಯ. ಹಾಗಿಲ್ಲದೆ ಅಲ್ಲಿ ಬೊಂಬಾಯಿನಲ್ಲಿ ಈಗಾಗಲೇ ಈ ಬಿಲ್ಲನ್ನು ಪಾಸ್ ಮಾಡಿದ್ದಾರೆ, ಅಲ್ಲಿದೆ, ಇಲ್ಲಿದೆ ಎಂದು ಹೇಳುವುದು ನ್ಯಾಯವಲ್ಲ.

ಬೊಂಬಾಯಿನಲ್ಲಿ ಟೆನೆನ್ಸಿ ಆಕ್ಟಿನಲ್ಲಿ ಪರಮಾವಧಿ ಹಿಡುವಳಿಯನ್ನು ನಿಗದಿಮಾಡಿ ತಿದ್ದುಪಡಿಯನ್ನು ತಂದಿದ್ದಾರೆಂದು ಹೇಳುತ್ತಾರೆ. ಅಲ್ಲಿ ಏನು ತಿದ್ದುಪಡಿ ಮಾಡಲು ತಂದಿದ್ದಾರೆ, ಆ ಸಭೆಯಲ್ಲಿ ಏನು ಅಭಿಪ್ರಾಯ ಪಟ್ಟಿದ್ದಾರೆ ಎಂಬುದನ್ನೆಲ್ಲಾ ಈ ಸಭೆಯ ಮುಂದಿಟ್ಟಿದ್ದರೆ, ಒಪ್ಪೋಣ. ಆದರೆ ಹಾಗೆ ಮಾಡಿಲ್ಲ. Limitation of holdings ಎಲ್ಲಾ ದೇಶಗಳಲ್ಲಿಯೂ ಒಂದೇ ರೀತಿ ಇದೆ ಎಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಉದಾಹರಣೆಗೆ ತಿರುವಾಂಕೂರು-ಕೊಚಿನ್ ತೆಗೆದುಕೊಳ್ಳೋಣ. ಅಲ್ಲಿ ನಮ್ಮ ದೇಶದಲ್ಲಿ ಎಷ್ಟು ಪ್ರಜಾಸಂಖ್ಯೆ ಇದೆಯೋ ಅಷ್ಟೇ ಇದೆ. ಇನ್ನೂ ಜಾಸ್ತಿ ಇದೆಯೆಂದು ನನ್ನ ಮಿತ್ರರು ಹೇಳುತ್ತಾರೆ. ಆ ದೇಶದ ವಿಸ್ತೀರ್ಣ ಎಂಟು ಅಥವಾ ಒಂಭತ್ತು ಸಾವಿರ ಮೈಲಿ. ಮೈಸೂರು ದೇಶ ಮೂವತ್ತು ಸಹಸ್ರ ಮೈಲಿ ಇರುವ ದೇಶ. . . . .

ಅಧ್ಯಕ್ಷರು.—ಬಳ್ಳಾರಿ ಜಿಲ್ಲೆಯನ್ನು ಬಿಟ್ಟು ಹೇಳುತ್ತಿದ್ದೀರೆಂದು ಕಾಣುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ಹೌದು. ಇನ್ನೂ ಬಳ್ಳಾರಿ ಆಂಧ್ರದಲ್ಲೇ ಇದೆಯೆಂಬ ಭಾವನೆ ! ಏಕೆಂದರೆ, ಅಲ್ಲಿಗೆ ಮಾಡುವ ಸಹಾಯವನ್ನು ನೋಡಿದರೆ, ಅವರನ್ನು ಕಡೆಗಣ್ಣಿನಿಂದ ನೋಡುತ್ತಿರುವುದನ್ನು ನೋಡಿದರೆ, ನಾವೂ ಸರ್ಕಾರದವರಂತೆ ಅವರನ್ನು ಮರೆಯುತ್ತೇವೆ.

ಒಟ್ಟಿನಲ್ಲಿ ನಮ್ಮ ಸಂಸ್ಥಾನದ ವಿಸ್ತೀರ್ಣ 33 ಸಾವಿರ ಚದರ ಮೈಲಿ ; ಆದರ ವಿಸ್ತೀರ್ಣ 8 ಸಾವಿರ ಮೈಲಿ ಇದ್ದರೂ, ಅದರಲ್ಲಿಯೂ back waters, ಗುಡ್ಡಗಾಡು ಇವನ್ನೆಲ್ಲಾ ತೆಗೆದರೆ ಸುಮಾರು ಆರು ಸಾವಿರ ಚದರ ಮೈಲಿ ಎಂದಿಟ್ಟುಕೊಂಡರೂ ಕೂಡ, ಈ ರೀತಿ ಲಿಮಿಟೇಷನ್ ಇಟ್ಟುಕೊಂಡಿದ್ದಾರೆಯೆ ? ತಿರುವಾಂಕೂರು-ಕೊಚ್ಚಿಯಲ್ಲಿ ಮಾಡಿದ್ದಾರೆಂದು ಹೇಳಿದರೆ ಎಷ್ಟು ಮಟ್ಟಿಗೆ ಅದನ್ನು ಒಪ್ಪಬಹುದು ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಾದರೆ ಸೀಲಿಂಗ್ ಇಡುವುದು ಬೇಡವೆ?

ಶ್ರೀ ಎ. ಭೀಮಪ್ಪನಾಯಕ್.—ಅದಕ್ಕೆ ಬೇರೆ ಮಸೂದೆ ತನ್ನಿ, ಇದರಲ್ಲಿ ಬೇಡಿ ಎಂದು ನಾನು ಹೇಳುವುದು. ಅದನ್ನು ಈ ಟೆನೆನ್ಸಿ ಕಾನೂನಿನಲ್ಲಿ ತರುವುದು ಯಾವ ಧರ್ಮ?

Family ಎಂದರೇನು? Unit ಎಂದರೇನು? ಯಾವರೀತಿ ಇದನ್ನು ಲೆಕ್ಕ ಹಾಕಬೇಕು? ಈಗಿರತಕ್ಕ ರೀತಿಯಲ್ಲಿ ತಾನೇ ವ್ಯವಸಾಯ ಮಾಡಿಕೊಂಡು, ಸಾವಿರಾರು ಎಕರೆಗಳನ್ನಿಟ್ಟುಕೊಂಡು ಟ್ರ್ಯಾಕ್ಟರುಗಳ ಸಹಾಯದಿಂದ ಒಬ್ಬ ಮನುಷ್ಯ ವ್ಯವಸಾಯಮಾಡುತ್ತಿದ್ದರೆ ಆತನಿಗೆ ಈ ಟೆನೆನ್ಸಿ ಕಾನೂನು ಅನ್ವಯಿಸುತ್ತದೆಯೆ?

ಭಾರತದಲ್ಲಿ ಅನ್ವಯಿಸುವುದು ಹಿಂದೂ ಕಾನೂನು. ಆದಕಾರಣ ಜಮೀನು ವಿಭಾಗವಾಗುತ್ತಾ ಹೋಗುತ್ತದೆ. ಈ ಕಾನೂನು ಒಂದು ಕೊಡಲಿಯ ಸ್ವರೂಪದಲ್ಲಿದೆ. ಏಕೆಂದರೆ, ನಾಲ್ಕು ಎಕರೆ ಜಮೀನಿದ್ದರೆ, ನಾಲ್ಕು ಜನ ಮಕ್ಕಳಿದ್ದರೆ ಒಬ್ಬೊಬ್ಬನಿಗೆ ಒಂದೊಂದೆಕರೆ ಬರುತ್ತದೆ. ಒಂದು ಸಂಸಾರಕ್ಕೆ ಸಾಕಾಗುವಷ್ಟು ಆದಾಯ ಬರುವ ರೀತಿಯಲ್ಲಿ ಜಮಾನು ಉಳಿಯದೆ ವಿಭಾಗವಾಗಿ ವ್ಯವಸಾಯಕ್ಕೆ ಅನುಕೂಲವಾಗದೇಯಿರುವಷ್ಟು ಸಣ್ಣದಾಗುತ್ತಿರುವುದು ದೇಶದಲ್ಲಿ ಎಲ್ಲರಿಗೂ ಗೊತ್ತಿದೆ. ಹೀಗೆ ನಡೆಯುತ್ತಿರುವಾಗ, ಒಬ್ಬ ಜಮೀನ್ದಾರ ಜಮೀನಿಟ್ಟು ಕೊಂಡಿದ್ದರೆ ಅದನ್ನು ಲಿಮಿಟ್‌ಮಾಡಿ, ಕಡಮೆಮಾಡಿ, ಹಂಚಿ, ಅವನು ಜಾಸ್ತಿ ಇಟ್ಟುಕೊಳ್ಳಬಾರದು, ಹಾಗಿಟ್ಟುಕೊಂಡಿದ್ದರೆ ಯಾರು ಆ ಜಮೀನನ್ನು ವ್ಯವಸಾಯ ಮಾಡುತ್ತಾನೋ ಅವನಿಗೇ ನಿರ್ದಿಷ್ಟವಾದ ಬೆಲೆಗೆ ಕೊಡಬೇಕೆಂದು ನೀವು ಹೇಳಿದ್ದೀರಿ. ಇದರಲ್ಲಾದರೂ ನಿರ್ದಿಷ್ಟತೆ ಇದೆಯೆ? ಇಲ್ಲ. ಉದಾಹರಣೆಗೆ, ನಾನು ನನ್ನ ಜಮಾನನ್ನು ಮಾರಬೇಕೆಂದು ಹೇಳಿದರೆ, ರೈತ ಐದು ಸಾವಿರ ರೂಪಾಯಿ ಕೊಟ್ಟುಕೊಂಡು ಕೊಳ್ಳಬಹುದೆಂದು ನಾನು ಹೇಳಬಹುದು. ಅವನು 50 ರೂಪಾಯಿಗೆ ಕೊಂಡು ಕೊಳ್ಳುತ್ತೇನೆಂದು counter offer ಕೊಡಬಹುದು. ಹೀಗೆ offer and counter offer ಆಗುತ್ತಾ ಸ್ವಲ್ಪಕಾಲ ಕಳೆದು ಕೊನೆಗೆ ಇಬ್ಬರೂ ಒಪ್ಪದಿದ್ದರೆ ಸಬ್-ಡಿವಿಜನ್ ಆಫೀಸರು arbitrate ಮಾಡಿ ಬೆಲೆ ನಿಗದಿ ಮಾಡಬೇಕೆಂದು ಅವರಲ್ಲಿಗೆ ಕಳುಹಿಸಬೇಕು. ಒಂದು ವೇಳೆ ಅವರು ನಿಗದಿ ಮಾಡಿದರೂ ಒಪ್ಪದಿದ್ದರೆ ಡಿಸ್ಟ್ರಿಕ್ಟ್ ಕೋರ್ಟಿಗೆ ಹೋಗಬೇಕು, ಅಲ್ಲಿನ ತೀರ್ಮಾನಕ್ಕೂ ಒಪ್ಪದಿದ್ದರೆ, ಹೈಕೋರ್ಟಿಗೆ ಹೋಗಬೇಕು. ಇಷ್ಟೆಲ್ಲಾ ಲಿಟಿಗೇಷನ್ ನಡೆದು. . . .

ಒಬ್ಬ ಸದಸ್ಯರು.—ಡಿಸ್ಟ್ರಿಕ್ಟ್ ಜಡ್ಜರದೇ ಆಖೈರು ತೀರ್ಮಾನ. It will be finally settled by the District Judge ಎಂದಿದೆ.

ಶ್ರೀ ಎ. ಭೀಮಪ್ಪನಾಯಕ್.—ಹೌದು, ಇದರಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಎಂದು ಮಾಡಿದ್ದಾರೆ.

ಒಬ್ಬ ವ್ಯವಸಾಯ ಮಾಡುತ್ತಿರುವ ಮನಷ್ಯ ಇನ್ನೇನಾದರೂ ವೃತ್ತಿಯನ್ನು ಮಾಡಬೇಕೆಂದು ಇಷ್ಟಪಟ್ಟರೆ ಆಗ ಅವನು ತನ್ನ ಜಮೀನನ್ನು ಯಾರಿಗೆ ಬೇಕಾದರೂ ಮಾರಾಟ ಮಾಡಬಹುದೆ? 25 ಎಕರೆಯಷ್ಟು ಇಲ್ಲದೇಯಿರುವವನು ಮಾತ್ರ ಕೊಳ್ಳಬಹುದೆಂದು ಮಾಡಿದ್ದೀರೋ ಅಥವಾ ಯಾರು ಬೇಕಾದರೂ ಕೊಳ್ಳಬಹುದೆಂದು ಅವಕಾಶಮಾಡಿದ್ದೀರೊ? ಇದರಲ್ಲಿ ಒಬ್ಬ ಮನುಷ್ಯನಿಗೆ ಇಷ್ಟಕ್ಕಿಂತ ಹೆಚ್ಚು ಜಮೀನಿರಬಾರದೆಂದು ನಿಗದಿ ಮಾಡಿದ್ದೀರಿ. ಒಬ್ಬನಿಗೆ ಮಕ್ಕಳಿದ್ದು ಪಕ್ಕದಲ್ಲಿ ಒಂದು ಜಮೀನಿದ್ದು ಅದನ್ನೂ ವ್ಯವಸಾಯ ಮಾಡಬೇಕೆಂದು ಕೊಂಡು ಕೊಳ್ಳಬೇಕೆಂದು ಮಾಡಿದರೆ' ಅವನಿಗೆ 25 ಎಕರೆ ಜಮೀನಿದ್ದರೆ ಪಕ್ಕದಲ್ಲಿ ಒಂದೆ ಕರೆಯಿದ್ದರೆ ಕೂಡ ಅದನ್ನೂ ಕೊಂಡು ಕೊಳ್ಳಬಾರದೆಂದು ನಿಮ್ಮ ಉದ್ದೇಶವೆ? ಇದನ್ನೆಲ್ಲಾ ಕೂಲಂಕಷವಾಗಿ ಯೋಚನೆಮಾಡಿ ಏನಾದರೂ ಮಾಡಿದ್ದೀರಾ?

ಇನ್ನೊಂದು ಉದಾಹರಣೆ ತೆಗೆದುಕೊಳ್ಳೋಣ. ಯಾವುದೋ ಒಂದು ಕ್ಲಾಜಿನಲ್ಲಿ permissible holdings, determination of standard acre and computation in terms of such acre ಎಂದು ತೆಗೆದು ಕೊಂಡಿದ್ದೀರಿ. ಇದರಲ್ಲಿ ರಾಗಿ, ಜೋಳ, ಭತ್ತ ಈ ಮೂರನ್ನು ಬೆಳೆಯತಕ್ಕ ಜಮೀನನ್ನು ಆಧಾರವಾಗಿ ಇಟ್ಟುಕೊಂಡು permissible limit ಲೆಕ್ಕಹಾಕಲಾಗಿದೆ. ಉಪ್ಪುನೇರಳೆ, ಆಲೂಗೆಡ್ಡೆ ಮುಂತಾದುವನ್ನು ಬೆಳೆಯುವ ಜಮೀನನ್ನು ಗಣನೆಗೆ ತೆಗೆದುಕೊಂಡಿಲ್ಲ. ಚಿಕ್ಕಬಳ್ಳಾಪುರದಲ್ಲೊಬ್ಬರು ಕೃಷಿ ಪಂಡಿತರು ಎಂಬ ಬಿರುದನ್ನು ರಾಷ್ಟ್ರಾಧ್ಯಕ್ಷರಿಂದ ಪಡೆದರು. ಅವರು ಮೂರೆಕರೆ ಜಮೀನಿನಲ್ಲಿ ಮೂರು ತಿಂಗಳಲ್ಲಿ 4½—5 ಸಾವಿರ ರೂಪಾಯಿ ಬಾಳುವ ಆಲೂಗೆಡ್ಡೆಯನ್ನು ಬೆಳೆದರು. ಹೀಗೆ commercial crops ಬೆಳೆಯುವ ಜಮೀನನ್ನು ಲೆಕ್ಕಾಚಾರ ಮಾಡುವುದಕ್ಕೆ ಸಾಧ್ಯವೆ? ಆಮೇಲೆ ಖುಷ್ಕಿ ಜಮೀನಿನ ವಿಷಯ ತೆಗೆದುಕೊಂಡರೆ, ಮಳೆ ಬಂದ ವರ್ಷ ಬೆಳೆಯಾಗುತ್ತದೆ, ಇಲ್ಲದಿದ್ದರೆ ಬೆಳೆಯೇ ಆಗುವುದಿಲ್ಲ. ನಾಲ್ಕೈದು ವರ್ಷ ಬೆಳೆಯಾಗದೆ ಪಾಳು ಬಿದ್ದು ಏನೂ ಬಾರದೇಯಿರುವ ಕಾಲವೂ ಇರುತ್ತದೆ. ಆಗ limitation of holdings ನಿಂದ ಏನು ಸಹಾಯವಾಗುತ್ತದೆ? ಹಾಗೆ ನೀವು permissible holding ಎಂದು ಮಾಡಿ standard acre ಎಂದು ನಿರ್ಧಾರ ಮಾಡುತ್ತೀರಿ! ಆಯಾ ಪ್ರದೇಶದಮೇಲೆ, ಅವನವನ ಶಕ್ತಿಯಮೇಲೆ ಹೋಗುತ್ತದೆ. ಒಬ್ಬ ಸೋಮಾರಿಯಾಗಿರುವವನು ಕಡಮೆ ಬೆಳೆಯಬಹುದು. ನೀರಾವರಿಯ ಅನುಕೂಲ, ಗೊಬ್ಬರ, ಮಳೆ, ಬಾವಿಯಲ್ಲಿ ಹೆಚ್ಚು ನೀರು ಇರುವುದು ಅಥವಾ ಇಲ್ಲದೇಯಿರುವುದು ಇವುಗಳನ್ನೆಲ್ಲಾ ಅವಲಂಬಿಸಿ ಬೇರೆ ಬೇರೆ ಪ್ರಮಾಣದಲ್ಲಿ ಬೆಳೆಯಾಗುತ್ತದೆ. ಮಳೆ ಬಂದರೆ ಒಂದು ರೀತಿ, ಇಲ್ಲದಿದ್ದರೆ ಇನ್ನೊಂದು ರೀತಿ, ಜಮೀನಿಗೆ ಸಾಕಾದಷ್ಟು ಗೊಬ್ಬರ ಹಾಕಿ ಕೂಲಿಯವರನ್ನಿಟ್ಟು ಕೆಲಸಮಾಡಿಸಿದರೆ ಒಂದುರೀತಿ, ವ್ಯವಸಾಯ ಮಾಡತಕ್ಕವನಿಗೆ ಶಕ್ತಿಯಿದ್ದರೆ ಒಂದುರೀತಿ; ಇಲ್ಲದಿದ್ದರೆ ಇನ್ನೊಂದು ರೀತಿ, ಏನೂ ಇಲ್ಲದ ಒಬ್ಬ ವಿಧವೆ ಯಾರಿಗೋ ವ್ಯವಸಾಯಕ್ಕೆ ಕೊಟ್ಟು ವ್ಯವಸಾಯ ಮಾಡಿಸುವ ಸಂದರ್ಭದಲ್ಲಿ ಇನ್ನೊಂದು ರೀತಿ, ಹೀಗೆ ಸಾವಿರಾರು ರೀತಿ ಇರುವಾಗ ಇದರಲ್ಲಿ standard acre ಎಂದರೆ ರಾಗಿ, ಭತ್ತ, ಜೋಳ ಬೆಳೆಯುವುದು ಎಂದು ಲೆಕ್ಕ ಹಾಕಿದರೆ ಸರಿಹೋಗುವುದಿಲ್ಲ. ಈಗ ಒಬ್ಬನಿಗೆ ಹತ್ತೆಕರೆ ಜಮೀನಿದೆ. ಅವನಿಗೆ ಹತ್ತು ಜನ ಮಕ್ಕಳಾದಾಗ 100 ಎಕರೆ ಇರಬೇಕಾಗುತ್ತದೆ. ಆಗ ನೀವು ಅವನಿಗೆ ಇರುವುದನ್ನು 100 ಎಕರೆ ಮಾಡುತ್ತೀರಾ? ಒಬ್ಬನು ತಾನೇ ಸ್ವಂತ ವ್ಯವಸಾಯಗಾರನಾಗಿ ತನ್ನ ಜಮೀನನ್ನು ತಾನೇ ಉಳಿಸಿ ಕೊಳ್ಳುತ್ತೇನೆಂದು ಹೇಳಬಹುದು. ಇನ್ನೊಬ್ಬ ಕೋರಿಗೆ ಕೊಟ್ಟಿದ್ದಾನೆ. ಅವನೊಬ್ಬನೇ ಇರುವುದು, ಅವನಿಗೆ 50 ಎಕರೆ ಜಮೀನಿದ್ದರೆ, 25 ಎಕರೆ ಮಾತ್ರ ಇರಬೇಕೆಂದು ಮಾಡಿದ್ದೀರಿ, ಎಂದರೆ ಅವನು ಇನ್ನು 25 ಎಕರೆಯನ್ನು ಬಿಟ್ಟುಬಿಡಬೇಕು. ಹಾಗಿದ್ದರೆ ಕಡಮೆ ಇದ್ದರೆ ಹೆಚ್ಚು ಮಾಡುತ್ತೀರಾ? ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ ಬೇರೆ ಮಸೂದೆಯನ್ನು

ತರುವುದಕ್ಕೆ ಪ್ರಯತ್ನಮಾಡುವುದು ನ್ಯಾಯವೇ ಹೊರತು ಯಾವುದರಲ್ಲೋ ಇನ್ನಾವುದನ್ನೋ ಸೇರಿಸುವುದು ಸೂಕ್ತವಲ್ಲವೆಂದು ನಾನು ಹೇಳುತ್ತೇನೆ. ಕಾನೂನು ಪ್ರಕಾರ ಈ ರೀತಿ ಮಾಡಲವಕಾಶವಿದೆಯೇ ಎಂದು ಕೇಳಿದರೆ, ಪ್ಲಾನಿಂಗ್ ಕಮಿಷನ್‌ಗೆ ಬರೆದೆವು, ಅವರು ಮಾಡಬಹುದೆಂದು ಹೇಳಿದರು ಎಂದು ಒಂದು ಸ್ಲೋಗನ್ ಹೇಳುತ್ತಾರೆ ರೆವಿನ್ಯೂ ಮಂತ್ರಿಗಳು.

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮದೂ ಸ್ಲೋಗನ್ ಇರುತ್ತದೆ!

ಶ್ರೀ ಎ. ಭೀಮಪ್ಪನಾಯಕ್.—ನಮ್ಮ 'ಸ್ಲೋಗನ್' ನೂರು ಜನರಿದ್ದರೂ ಲೆಕ್ಕಕ್ಕೆ ಬರುವುದಿಲ್ಲ !

Sri Mulka GOVINDA REDDY.—When I criticised objection was taken, whereas Sri Bheemappa Naik's criticism is hundred times more. Still no objection is taken!

Sri A. BHEEMAPPA NAIK.—My friend has, of late, converted himself as a socialist without parting with his land!

Sri Mulka GOVINDA REDDY.—That is not socialism that is anarchism.

ಶ್ರೀ ಎ. ಭೀಮಪ್ಪನಾಯಕ್.—ತಮ್ಮ ಕಾಲ ಬಂದಾಗ ನೂರು ಸಾರಿ 'ರಿಪೀಟ್' ಮಾಡಿ.

Sri Mulka GOVINDA REDDY.—Sir, I did not take objection to what Sri Bheemappa Naik said, but for the way in which he criticised the Government. His criticism is hundred times more powerful than what I said.

Sri A. BHEEMAPPA NAIK.—If Sri Mulka Govinda Reddy is not capable of criticising the Government what can anybody do? I am not criticising the Government. I am criticising the Bill as it is brought. What I am saying is, I agree with the principle of limitation of holdings, but that cannot be brought as an amendment in a Tenancy Act. I have got here amendments of one or two Acts.

ಯಾವುದಾದರೂ ಕಾನೂನು ಮಾಡಿ, ಅದನ್ನು ಜಾರಿ ಮಾಡುವುದರಲ್ಲಿ ಏನಾದರೂ ಕಷ್ಟ ಬಂದರೆ, ಯಾವುದೋ ಕ್ಲಾಜಿನ ಸಂಬಂಧದಲ್ಲಿ ಅದಕ್ಕೆ ತಿದ್ದುಪಡಿ ತರುತ್ತಾರೆ, ಆದರೆ ಈಗ ಹಾಗೆ ಮಾಡಿಲ್ಲ. ಈಗ ಯಾವ ಯಾವ ಸೆಕ್ಷನ್‌ಗಳಿಗೆ ತಿದ್ದುಪಡಿಗಳನ್ನು working difficulty ಬಂದುದರ ಮೇಲೆ ತಂದಿದ್ದೀರೆಂದು ಕೇಳುತ್ತೇನೆ. ಟೆನೆನ್ಸಿ ಆಕ್ಟ್ ಜಾರಿಗೆ ಬಂದು ಇನ್ನೂ ಎರಡು ವರ್ಷ ಕೂಡ ಆಗಿಲ್ಲ. ಈ ಮಸೂದೆಯ Objects and Reasons ನಲ್ಲಿ ಒಂದು ಅಕ್ಷರವನ್ನು ಕೂಡ ಈ ವಿಷಯದಲ್ಲಿ ಬರೆದಿಲ್ಲ. ಏಕೆ ಇದನ್ನು ತಂದಿರಿ, ಏನು ಕಷ್ಟ ಬಂತು? ಟೆನೆನ್ಸಿ ಕಾನೂನು ಜಾರಿಯಲ್ಲಿದೆಯೆಂಬುದು ಇನ್ನೂ ಅನೇಕ ಪ್ರದೇಶಗಳಲ್ಲಿ ಜನರಿಗೆ ಗೊತ್ತೇ ಇಲ್ಲ. ಈ ಮಸೂದೆಯನ್ನು ಮೊದಲು ಪ್ರಾರಂಭ ಮಾಡುವಾಗ, ಎಲ್ಲಿ ತೊಂದರೆಗಳಿವೆ, ಶ್ರೀರಂಗಪಟ್ಟಣ, ತೀರ್ಥಹಳ್ಳಿ-ಶ್ರೀಮಾನ್ ಪುಟ್ಟಸ್ವಾಮಿ ಮತ್ತು ಶ್ರೀಮಾನ್ ಕಡಿದಾಳ್ ಮಂಜಪ್ಪನವರ ತಾಲ್ಲೂಕುಗಳಲ್ಲಿ ತೊಂದರೆಗಳಿವೆಯೇ ಎಂದು ಹೇಳಬೇಕಾಗಿತ್ತು.

ಶ್ರೀ ಕಡಿದಾಳ್ ಮಂಜಪ್ಪ.—ಅರ್ಥವಾಯಿತು!

ಶ್ರೀ ಎ. ಭೀಮಪ್ಪನಾಯಕ್.—ಇಷ್ಟಾದರೂ ತಿಳಿದುಕೊಂಡಿದ್ದಕ್ಕೆ ಸಂತೋಷ!

ಅಲ್ಲಿಗೆ ಅನ್ವಯಿಸುತ್ತದೆಂದು ತಂದರೆ? ಅಥವಾ ದೇಶಕ್ಕೆಲ್ಲಾ ಅನ್ವಯಿಸುವಂತೆ ಮಾಡಿದ್ದರೆ, ದೇಶದ ಜನ ಏನು ಉಪಯೋಗ ಪಡೆದರು, ಇದರಿಂದ ಎಷ್ಟು ಕೇಸುಗಳನ್ನು ಹಾಕಿದ್ದಾರೆ, ಎಷ್ಟು ಜನರಿಗೆ ಉಪಯೋಗವಾಗಿದೆ, ರೈತನನ್ನು ಬಿಡಿಸುತ್ತೇನೆಂದು ಹೇಳಿದ ಜಮೀನ್‌ದಾರರ ಸಂಖ್ಯೆ ಎಷ್ಟು, ಅವರು ಯಾರಾರು?

1-30 P.M.

ಮುಖ್ಯವಾಗಿ ತೀರ್ಥಹಳ್ಳಿಯಲ್ಲಿ ಎಷ್ಟು, ಶ್ರೀರಂಗಪಟ್ಟಣದಲ್ಲಿ ಎಷ್ಟು ಕೇಸುಗಳನ್ನು ಹಾಕಿದ್ದಾರೆ ಎಂಬುದನ್ನು ಹೇಳಿಬಿಡಿ. ಯಾವಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೇಸುಗಳಿಗೆ ಸಂಬಂಧವಾದ ವ್ಯವಹಾರಗಳು ಜಮೀನ್‌ದಾರರಿಗೂ ರೈತರಿಗೂ ಬಂದು ಅದರಿಂದ ಎಷ್ಟು ತೊಂದರೆ ಆಯಿತು? ಅದಕ್ಕೋಸ್ಕರವಾಗಿ ಈ ಕ್ಲಾಜನ್ನು ಇದರಲ್ಲಿ ತಂದಿದ್ದಾರೆಂದು ಹೇಳುವುದನ್ನು ಬಿಟ್ಟು, permissible holdings ಎಂಬುದು Original Act ನಲ್ಲಿ ಹೇಳದೆ ಇದ್ದರೂ ಅದನ್ನೂ ಮತ್ತು ಅನೇಕ ಹೊಸ ಹೊಸ ವಿಷಯಗಳನ್ನೂ ಈ ಮಸೂದೆಯ ಲ್ಲಿ ಸೇರಿಸಿ ನಮ್ಮ ಸಭೆಯ ಮುಂದೆ ತರುವುದಕ್ಕಿಂತ ಒಂದು ಹೊಸ ಕಾನೂನನ್ನು ತರುವುದು ಒಳ್ಳೆಯದು ತಾನೇ? ತಾವು ಈಗ ಕಾನೂನುಗಳನ್ನು ಬರೆಯುವುದರಲ್ಲಿ ನಿಪುಣರಾಗಿದ್ದೀರಿ. Religious and Charitable ಕಾನೂನುಗಳನ್ನು ಜಯಪ್ರದವಾಗಿ ಮಾಡಿದ್ದೀರಿ. ಈ Personal and Miscellaneous Inams Abolition ಕಾನೂನನ್ನು ಜಯಪ್ರದವಾಗಿ ಮಾಡಿದ್ದೀರಿ. ಹಾಗೆಯೇ Limitation of Holdings ಕಾನೂನನ್ನೂ ಕೂಡ ಜಯಪ್ರದವಾಗಿ ಮಾಡಿಯೆಂದು ಹೇಳುತ್ತೇನೆ. I really thank you for what you have done. ಈ ಕಾನೂನುಗಳನ್ನು ಮಾಡಿದಂತೆ ಇದನ್ನೂ ಬಹಳ clear ಆಗಿ ಒಂದೇ ಕಾನೂನಿನಲ್ಲಿ ಮಾಡಿ. ಬೇರೆಬೇರೆ ಮಾಡಬೇಡಿ. We are not committed to provisions which do not directly concern with this Act. However, we are prepared to consider amendments which are directly concerned with this Act and not new ones. ಇದನ್ನು ಸೆಲೆಕ್ಟ್ ಸಮಿತಿಗೆ ಕಳುಹಿಸಿ ಕೊಡುವುಕ್ಕೆ ಸಿದ್ಧರಾಗಿದ್ದಾರೆ. ಹಾಗೆ ಮಾಡಬಹುದು. ಅದರಲ್ಲಿರುವ ಸ್ಪೆಷಲ್ provision ಗಳನ್ನು ಪರ್ಯಾಲೋಚನೆ ಮಾಡಿ, ಈ ಕಾನೂನಿನಲ್ಲಿ ಅವುಗಳನ್ನು ಸೇರಿಸುವುದಕ್ಕೆ ಅವಕಾಶವಿದೆಯೆಂಬುದನ್ನು ನೋಡಬಹುದು. ಯಾವುದಾದರೂ ಒಂದು ಬಿಲ್ಲಿನಲ್ಲಿ ಅನೇಕ ಕ್ಲಾಜುಗಳು ಇದ್ದರೆ, ಅವು Original Billಗೆ ಅನ್ಯಾಯವಾಗದೆ ಇದ್ದರೆ, ಅಂತಹ clause ಗಳನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. Original Act ನಲ್ಲಿರತಕ್ಕಂಥ ಕ್ಲಾಜುಗಳಿಗೆ ಬಂದಿರುವ ತಿದ್ದುಪಡಿಗಳನ್ನು ಪರಿಶೀಲನೆ ಮಾಡಿ ಅವುಗಳಿಂದ ಆಗುವ ಉಪಯೋಗಗಳನ್ನು ಗಣನೆಗೆ ತೆಗೆದುಕೊಂಡು ಸೆಲೆಕ್ಟ್ ಸಮಿತಿಯವರು ಒಂದು ವರದಿಯನ್ನು ಈ ಸಭೆಗೆ ಕಳುಹಿಸಬಹುದು. ಇದರಲ್ಲಿರುವ ಕ್ಲಾಜುಗಳನ್ನು ಒಂದು ಬೇರೆ ಮಸೂದೆಯನ್ನಾಗಿ ಮಾಡಿ ತರುವ ವಿಚಾರದಲ್ಲಿ ಅವರ ಸಲಹೆಯನ್ನು ಬೇಕಾದರೂ ಕೇಳಬಹುದು. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ.

(ಶ್ರೀ. ಎ. ಭೀಮಪ್ಪನಾಯಕ್.)

ಆದರೆ ಈ ಬಿಲ್ಲಿಗೆ ಈ ಸಭೆಯನ್ನು commit ಮಾಡಿಸಬೇಡಿ ಎಂದು ಹೇಳುತ್ತೇನೆ. ಈಗ ಬಂದಿರತಕ್ಕಂಥ ಕೆಲವು ತಿದ್ದುಪಡಿಗಳು ಮೊದಲಿದ್ದಂಥ ಆಕ್ಟಿಗೆ ಯಾವ ವಿಧದಲ್ಲೂ ಸಂಬಂಧವಿಲ್ಲದಂಥವು. ಆದ್ದರಿಂದ ಇದರಿಂದ ಬಹಳ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಈ Bill ನಲ್ಲಿರುವ clause ಗಳು ಯಾರಿಗೆ ಅನ್ವಯಿಸುತ್ತದೆಂಬುದನ್ನು ತಾವು ಸ್ವಲ್ಪ ನೋಡಬೇಕೆಂದು ನನ್ನ ಸೂಚನೆ. Permissible holdings ಎನ್ನತಕ್ಕಂಥಾದ್ದು ಯಾರಿಗೆ ಅನ್ವಯಿಸುತ್ತದೆ? ಇದರಲ್ಲಿ special privileges to protected tenants and certain non-protected tenants ಎಂದು ಹೇಳಿದ್ದಾರೆ. ಸ್ವತಂತ್ರವಾಗಿ ಜಮೀನು ಮಾಡತಕ್ಕಂಥ ಒಬ್ಬ ರೈತ ಇದರಲ್ಲಿ ಸೇರಿಸಲ್ಪಟ್ಟಿರುತ್ತಾನೆಯೇ ಇಲ್ಲವೇ ಎಂಬುದನ್ನು ಯಾವ section ನೋಡಿದರೂ ಕೂಡ ಅದರಿಂದ ಗೊತ್ತಾಗುವುದಿಲ್ಲ. ಇದು ಎಲ್ಲರಿಗೂ ಅನ್ವಯಿಸುತ್ತದೆ ಎಂದು ಹೇಳುವುದಾದರೆ Tenancy Act ನಲ್ಲಿ ಇದು ಹೇಗೆ ಬರುತ್ತದೆ? ಬಾಕಿಯುವರಿಗೆ privilege ಮತ್ತು rights ಇಲ್ಲದೆ ಇರುವಾಗ Limitation of holdings ಅನ್ನು India ದಲ್ಲಿ ಪರ್ಯಾಲೋಚನೆ ಮಾಡದೆ ಇರುವಾಗ ಅಂತಹ ಸಂದರ್ಭದಲ್ಲಿ ನೀವು ಈ ದಿವಸ Limitation of holdings ನ್ನು Landlord ನಮೇಲೆ ಹಾಕುವುದು ನ್ಯಾಯವೇ? Does it not affect the fundamental right of a man? ಇದು discriminatory legislation ಆಗುವುದಿಲ್ಲವೇ? ಒಬ್ಬನಿಗೆ ಮಾತ್ರ Limitation of holdings ಫಿಕ್ಸ್‌ಮಾಡಿ ಇನ್ನೊಬ್ಬ ಜಮೀನುದಾರನು ಕೂಲಿ ಇಟ್ಟುಕೊಂಡು ಮಾಡುತ್ತಾ ಇದ್ದರೆ ಅಥವಾ ಸ್ವತಂತ್ರವಾಗಿ ಮಾಡುತ್ತಾ ಇದ್ದರೆ ಅವನಿಗೆ ಅದು ಅನ್ವಯಿಸುವುದಿಲ್ಲವೆಂದು ಹೇಳುವುದು ಸರಿಯೇ? ಇದು discriminatory legislation ಆಗುತ್ತದೆಂದು ನನ್ನ ಅಭಿಪ್ರಾಯ. ಒಂದರ ಜೊತೆಗೆ ಇನ್ನೊಂದನ್ನು ಬೆರಕೆಮಾಡುವುದು ಕಾನೂನಿಗೆ ವಿರುದ್ಧ. ಇದಕ್ಕೆ ಬೇಕಾದ ಅಂಕಿ ಅಂಶಗಳನ್ನು ತಾವು ನಮ್ಮ ಮುಂದೆ ಇಟ್ಟಿಲ್ಲ. Limitation of holdings ಮಾಡುವಾಗ ಎಷ್ಟು ಜಮೀನ್ದಾರರು ತಮ್ಮ ಜಮೀನನ್ನು ಕೋರಿಗೆ ಕೊಟ್ಟಿದ್ದಾರೆ, ಎಷ್ಟು ಜಮೀನನ್ನು ಗೇಣಿಗೆ ಕೊಟ್ಟಿದ್ದಾರೆ, ಅವರು ಸ್ವತಃ ಮಾಡತಕ್ಕದ್ದು ಎಷ್ಟು ಇದೆ, ಆ ಕಾನೂನು ಅವರಿಗೇ ಅನ್ವಯಿಸುವುದರಿಂದ ಎಷ್ಟು ಪಾಲು ಯಾರುಯಾರಿಗೆ ಹೋಗುತ್ತದೆ ಎಂಬುದನ್ನೆಲ್ಲಾ ನಮ್ಮ ಮುಂದೆ ಇಡಬೇಕಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಮೊದಲೇ ಹೇಳಿದ್ದೇನೆ.

ಶ್ರೀ ಎ. ಭೀಮಪ್ಪನಾಯಕ್.—ನಮ್ಮ ಅಭಿಪ್ರಾಯದಲ್ಲಿ ಒಂದು ಅಂಕಿ ಅಂಶವಾದರೂ ಇರಲಿಲ್ಲ. ತಾವು ಏನು ಹೇಳಿರುವುದು ನಮಗೆ ಗೊತ್ತಿದೆ. ನಾವು ಏನು ಕೇಳಿದ್ದೇವೋ ಅದನ್ನು ಹೇಳಿದ್ದಾರೆಂದು ಒಂದು omnibus ಉತ್ತರ ಹೇಳುತ್ತೀರಿ. ಎಷ್ಟು ಜನ ಜಮೀನ್ದಾರರು ಸ್ವತಂತ್ರವಾಗಿ ವ್ಯವಸಾಯ ಮಾಡಿಕೊಂಡಿದ್ದಾರೆ! ಎಷ್ಟು ಎಕರೆ ಜಮೀನು ಅವರ ಸ್ವಾಧೀನದಲ್ಲಿದೆ ಎಂಬುದನ್ನು ಹೇಳಲಿಲ್ಲ.

Mr. SPEAKER.—That is found in the new Census Report and the member may refer to it.

ಶ್ರೀ ಎ. ಭೀಮಪ್ಪನಾಯಕ್.—ಕೆಲವು ಅಂಶಗಳು Census Report ನಲ್ಲಿ ಸಿಕ್ಕುವುದಿಲ್ಲ. ಕೂಲ ಮಾಡಿಸತಕ್ಕಂಥ ಜಮೀನ್ದಾರರು ಯಾವಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಜನ ಇದ್ದಾರೆಂಬುದನ್ನು latest census ನಲ್ಲಿ ತಿಳಿಸಿಲ್ಲ. ಜಮೀನ್ದಾರರು ತಾವೇ ಸ್ವಂತ ಜಮೀನು ಮಾಡುವವರು ಎಷ್ಟು ಜನ, ಇತರರಿಗೆ ಜಮೀನು ಕೊಟ್ಟು ಸಾಗುವಮಾಡಿಸುವವರು ಎಷ್ಟು ಜನ, ಎಷ್ಟು ಎಕರೆ ಈ ರೀತಿಯಾಗಿ ಸಾಗು ಆಗುತ್ತಿದೆ, ಯಾವಯಾವ ತಾಲ್ಲೂಕುಗಳಲ್ಲಿ ಅಂಥವರು ಎಷ್ಟು ಜನ ಇದ್ದಾರೆ ಎಂಬ ಅಂಶವನ್ನು ವಿವರವಾಗಿ ಆ ರಿಪೋರ್ಟಿನಲ್ಲಿ ಕೊಟ್ಟಿಲ್ಲ. ಈ ತಿದ್ದುಪಡಿಗಳನ್ನು ನಾವು ವಿಮರ್ಶೆಗೆ ತೆಗೆದುಕೊಳ್ಳುವಾಗ ಅವು ಇಲ್ಲಿ ಇಲ್ಲ. (*interruption*). ನನ್ನ ಜಮೀನು ಇದ್ದರೆ ಯಾರಿಗಾದರೂ ಹಂಚಬಹುದು. ಇದ್ದರೆತಾನೇ? ನನ್ನ ಹೆಸರಿಗೆ ಯಾವ ಜಮೀನೂ ಇಲ್ಲ. ಆದ್ದರಿಂದ ಈಗ ಹಂಚುವ ಪ್ರಶ್ನೆ ಏಳುವುದಿಲ್ಲ. ಶ್ರೀಮಾನ್ ಮುಲ್ಕ ಗೋವಿಂದ ರೆಡ್ಡಿಯವರ ವಿಚಾರವೂ ಅಷ್ಟೆ. ಅವರ ಹೆಸರಿನಲ್ಲಿಯೂ ಯಾವ ಜಮೀನೂ ಇಲ್ಲ. ನಾವು ಈ ದಿವಸ ಮಾಡುತ್ತಾ ಇರುವುದು, ಎರಡು ವಿಚಾರಗಳನ್ನೂ ಒಟ್ಟಿಗೆ ಸೇರಿಸಿ ಇಲ್ಲದೆ ಇದ್ದ confusion ಇಲ್ಲಿ ತಂದೊಡ್ಡುತ್ತಿದ್ದೇವೆ. Limitation of holdings ಒಪ್ಪಲಿ ಒಪ್ಪದೇ ಇರಲಿ, ಒಂದು ದಿವಸ ಭಾರತದಲ್ಲಿ ಬಂದೇ ತೀರಬೇಕು. ಮೈಸೂರಿಗೂ ಅನ್ವಯಿಸುವಂತೆ ಆಗಲೇಬೇಕು. ಮೈಸೂರಿಗೆ ಅನ್ವಯಿಸುವಂತೆ ಮಾಡುವಾಗ intensive, extensive ಮತ್ತು modern methods of cultivation, ಇವುಗಳನ್ನು ಉಪಯೋಗಿಸುವುದಕ್ಕೆ ಇರುವ ಸೌಲಭ್ಯಗಳಿಗೆ ಅನುಸಾರವಾಗಿ ಅದನ್ನು ಹೇಳಬಯಸುತ್ತೇನೆ. ಹಾಗಿಲ್ಲವೇ Limitation of holdings ಮಾಡುವುದರಿಂದ ಬೆಳೆಗೆ ಧಕ್ಕೆ ಬರುವ ಹಾಗೆ ಮಾಡಿದರೆ ಆಗ ನಾವು ಒಪ್ಪುವುದಿಲ್ಲ. ಈಗಿನ ಬೆಳೆಗಿಂತ ಹೆಚ್ಚಿಗೆ ಬೆಳೆ ಬರುವ ಹಾಗೆ ಮಾಡಿದರೆ ಆಗ ನಾವು ಅದನ್ನು ಒಪ್ಪುತ್ತೇವೆ. ಬೊಂಬಾಯಿಯ Tenancy Act ನಲ್ಲಿ ಉಳುವವನಿಗೆ ಜಮೀನು ಇಷ್ಟೇ ಎಂದು ಬರೆದಿದ್ದಾರೆ. ಉಳುವವನಿಗೆ ಜಮೀನು ಕೊಟ್ಟು ಬಾಕಿ ಜನರ ಹೊಟ್ಟೆಗೆ ಮಟ್ಟ ಹಾಕಬೇಕು ಎನ್ನುವುದಾದರೆ ಅದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಬರೀ ಜಮೀನ್ದಾರರ ಜಮೀನನ್ನು ಕಿತ್ತುಕೊಂಡ ಮಾತ್ರಕ್ಕೆ ಸಮಾಜ ಸುಧಾರಿಸದಂತಾಗಲಿಲ್ಲ. ಸಾಹುಕಾರರು 20-30 ಮನೆಗಳನ್ನು ಇಟ್ಟುಕೊಂಡ ಒಂದು ಕಡೆ ಇರಬಹುದು. ಈ ಕಡೆ ಬಡವರು ಬಾಯಿ ಇಲ್ಲದೆ ಇರತಕ್ಕಂಥ ರೈತರ ಕುತ್ತಿಗೆ ಕೊಯ್ದುಬಿಡೋಣ, ಆಮೇಲೆ ಆ ತರಹ ಈ ತರಹ ಶಾಸನ ಈ ಸಾಹುಕಾರರಿಗೂ ಬರುತ್ತದೆ ಎಂಬುದಾಗಿ ರೆವಿನ್ಯೂ ಸಚಿವರು ಬಹಳ ಸೊಗಸಾಗಿ ಹೇಳಿದರು.

*Sri H. M. CHANNABASAPPA (Periyapatna).—I want some clarification. In Clause 31-B (6) (*c*), it is stated thus :

> "The total area of the arable land remaining in the ownership of the landlord after the purchase of the land or any portion thereof by the protected tenant or the non-protected tenant is not less than the permissible holding."

Mr. SPEAKER.—May I ask the Hon'ble Member to seek clarification

only when his chance comes after the Member completes his speech ?

Sri H. M. CHANNABASAPPA.—I wanted only a clarification.

Mr. SPEAKER.—Clarification can be asked only from the Member who speaks.

Sri H. M. CHANNABASAPPA.—If he throws some light, it may facilitate further discussion. Sri Bheemappa Naik also will be in a better position to make his speech.

Sri A. BHEEMAPPA NAIK.—Clause 31-B (6) (*b*) is as follows :—

> " (*b*) if the said tenant holds any arable land, as an owner, the purchase of the land by him shall be limited to such area as will be sufficient to make up the areaof the land owned by him to the extent of twenty-five standard acres ;

Sub-clause (*c*) reads thus :

> " (*c*) the total area of the arable land remaining in the ownership of the landlord after the purchase of the land or any partition thereof by the protected tenant or the non-protected tenant is not less than the permissible holding."

ಇದರಲ್ಲಿ ನನಗೂ ಅನುಮಾನವಿದೆ. ನಾನು ಅವರನ್ನು ಕೇಳಬೇಕೆಂದು ಇದ್ದೇನೆ. ಒಬ್ಬ ಮನುಷ್ಯನಿಗೆ ಐವತ್ತು ಎಕರೆ ಭೂಮಿ ಇದೆ ಎನ್ನೋಣ. ಇನ್ನೊಬ್ಬನು ಇಪ್ಪತ್ತು ಎಕರೆ ಜಮೀನನ್ನು ಮಾಡುವವನು ಇದ್ದಾನೆ ಎನ್ನೋಣ. ಅವನಿಗೆ ಐದು ಎಕರೆ make up ಮಾಡುವುದಕ್ಕೆ ಜಮೀನು ಬೇಕಾಗುತ್ತದೆ. ಐವತ್ತು ಎಕರೆ ಜಮೀನು ಇರುವನ ಹತ್ತಿರ ಐದು ಎಕರೆಗಳನ್ನು ಕಿತ್ತುಕೊಂಡು ಇಪ್ಪತ್ತು ಎಕರೆ ಇರುವವನಿಗೆ ಕೊಡಬೇಕೆಂದರೆ ಅದು ಪ್ರಯೋಜನವಿಲ್ಲದ ಜಮೀನು ಇದ್ದರೂ ಕೂಡ ಅವನಿಗೆ ತೆಗೆದುಕೊಳ್ಳಬೇಕೆಂದು force ಮಾಡುವುದಕ್ಕೆ ಆಗುತ್ತದೆಯೇ ? ಇನ್ನೊಬ್ಬನ ಹತ್ತಿರ ಐದು ಎಕರೆ ಸೊಗಸಾದ ಜಮೀನು ಇದೆಯೆಂದು ಅವನಿಂದ ಅದನ್ನು ಕಿತ್ತುಕೊಂಡು ಈತನಿಗೆ ಕೊಡುವುದಕ್ಕಾಗುತ್ತದೆಯೇ ? ಆದ್ದರಿಂದ ಯಾವ ರೀತಿಯ preference ತೆಗೆದುಕೊಳ್ಳಬೇಕೆಂಬುದನ್ನು ಇಲ್ಲಿ ತಿಳಿಸಿಲ್ಲ. ಒಬ್ಬ ಮನುಷ್ಯನ ಹತ್ತಿರ ಹತ್ತು ಜನ ಕೋರು ಮಾಡುತ್ತಾರೆ ಎನ್ನೋಣ. ಎಲ್ಲರಿಗೂ permissible holdingsಗಿಂತ ಕಡಿಮೆ ಇರುವುದರಿಂದ ಅವರು ಹೇಗೆ ಜಮೀನನ್ನು ತೆಗೆದುಕೊಳ್ಳಬೇಕು ? Permissible holdingsಗಿಂತ ಜಾಸ್ತಿ ಇರುವವರು ಅವರಪೈಕಿ ಯಾರಾದರೂ ಇದ್ದರೆ ಅವರು ಜಾಸ್ತಿಯಾಗಿ ಜಮೀನನ್ನು ಕೊಳ್ಳಬಾರದು ಎನ್ನತಕ್ಕಂಥ prohibition ಈ ಮಸೂದೆಯಲ್ಲಿ ಏನಾದರೂ ಇದೆಯೇ ? ಆ ರೀತಿ prohibition ಮಾಡುವುದಾದರೆ Transfer of Property Act ನಲ್ಲಿ " Nobody shall have the right to purchase more than the permissible holdings" ಎಂಬುದಾಗಿ ಏನಾದರೂ ತಿದ್ದುಪಡಿ ಮಾಡುತ್ತೀರಾ ? ಆ ತರಹ ಇಲ್ಲ ಮಾಡುವುದಾದರೆ ಹತ್ತು ಮನೆಗಳಿರುವವರು ಹನ್ನೊಂದನೆ ಮನೆಯನ್ನು ಕೊಳ್ಳಬಹುದೆ ? ಅವನಿಗೆ ಯಾವ ತೊಂದರೆಯೂ ಇಲ್ಲದೆ ಅವನ ಮೇಲೆ limitation ಬರುವುದಿಲ್ಲವೇ ಎಂಬುದನ್ನು ಯೋಚನೆಮಾಡಬೇಕು. ನೀವು ಏತಕ್ಕೆ ಜಮೀನ್ದಾರರಮೇಲೆ ಈ ರೀತಿ ಕಣ್ಣು ಹಾಕುತ್ತೀರಿ ? ಮಾರಮ್ಮನ ಕಣ್ಣು ಕುರಿಯಮೇಲೆ ಎಂಬ ಹಾಗೆ ಈ ಜಮೀನ್ದಾರರ ಮೇಲೆ ತಾವು ಏತಕ್ಕೆ ಅಷ್ಟು ಕಣ್ಣು ಇಟ್ಟಿದ್ದೀರಿ ? ಲಕ್ಷಗಟ್ಟಲೆ ದುಡ್ಡು ಇಟ್ಟುಕೊಂಡು ನೂರುಗಟ್ಟಲೆ ಷೇರು ಇಟ್ಟುಕೊಂಡು ಜಮೀನು ಮಾಡಿಕೊಂಡು ಬಂಗಲೆಗಳನ್ನು ಕಟ್ಟಿಸಿಕೊಂಡು ಇರುವ ಮಂತ್ರಿಗಳಿಗೂ ಇದು ಅನ್ವಯಿಸುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲರಿಗೂ ಅನ್ವಯಿಸುತ್ತದೆ.

ಶ್ರೀ ಎ. ಭೀಮಪ್ಪನಾಯಕ್.—ಎಲ್ಲರಿಗೂ ಒಟ್ಟಿಗೆ ಸೇರಿಸಿ ಕಾನೂನು ಮಾಡಿ. ದುಡ್ಡು ಇದ್ದವರು ದೊಡ್ಡ ಮನೆಗಳನ್ನು ಕಟ್ಟಿಸುವುದಕ್ಕೆ ಹೊರಟರೆ, ಸಿನಿಮಾ ಪ್ರಾರಂಭಮಾಡುವುದಕ್ಕೆ ಹೋದರೆ, ಒಂದು ಕೈಗಾರಿಕೆಯನ್ನು ಸ್ಥಾಪನೆಮಾಡಿದರೆ ಈ limitationನನ್ನು ನೀವು ಅವರಿಗೆ ಏತಕ್ಕೆ ಅನ್ವಯಿಸುವುದಿಲ್ಲ ? ಹೀಗಿರುವಾಗ ಬಡ ಜಮೀನ್ದಾರರನ್ನು ಏಕೆ ಹೊಡೆಯಬೇಕು ? ಮಗ್ಗಲು ಮನೆಯಲ್ಲಿ ಭಂಗಾರದ ಸರ ಹಾಕಿಕೊಂಡಿರುವವರು ಹಾಕಿಕೊಂಡೇ ಇರಬೇಕು ! ಈ ಬಡ ಜಮೀನ್ದಾರ ಹಾಗೆಯೇ ಇರಬೇಕು ! ! ಇದು ನ್ಯಾಯವೇ ? ಇಂಡಿಯಾದೇಶದಲ್ಲಿ ಎಲ್ಲರನ್ನೂ ಒಂದೇ ಸಮ ಏಕೆ ಮಾಡಕೂಡದು ? ಯಾರೂ ಮೂರು ತೊಲ ಭಂಗಾರದ ಮೇಲೆ ಹಾಕಿಕೊಳ್ಳಕೂಡದೆಂದು ಮಾಡಿಬಿಡಿ. ಎಲ್ಲದಕ್ಕೂ ಅನ್ವಯಿಸುತ್ತೇವೆಂದು ಹೇಳಿದಮೇಲೆ ಒಂದು ಕಡೆ ಐ.ಎ.ಎಸ್. ಆಫೀಸರೆಂದು ಹೇಳಿ ಒಂದು ಸಾವಿರದಇನ್ನೂರು ರೂಪಾಯಿಗಳಿಂದ ಹಿಡಿದು ಮೂರು ಸಾವಿರ ರೂಪಾಯಿಗಳವರೆಗೂ ಹೋಗಬಹುದು ಎಂದು ಹೇಳುತ್ತೀರಿ, ಇನ್ನೊಂದು ಕಡೆ ಜವಾನ ಕೆಲಸ ಮಾಡುವವನು ಮುವತ್ತು ರೂಪಾಯಿಯಲ್ಲಿಯೇ ಇರಬೇಕೆಂದು ಹೇಳುತ್ತೀರಿ ! ! ಒಂದೇ ಮನೆಯಲ್ಲಿ ಹುಟ್ಟಿದವರಾಗಿ ಒಬ್ಬನು ಜವಾನನಾಗಿ ಮನೆಯ ಎಲ್ಲಾ ಕೆಲಸಗಳನ್ನೂ ಮಾಡಬೇಕಂತೆ ; ಇನ್ನೊಬ್ಬ ಸುಮ್ಮನೆ ಕುಳಿತುಕೊಂಡು ಕಾಗದ ಬರೆದು ಬರೆದು ಬೇರೆ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲವಂತೆ ! ಅಂಥದರಲ್ಲಿ, ಇವನಿಗೆ ಮೂರುಸಾವಿರ ರೂಪಾಯಿ, ಅವನಿಗೆ ಮೂವತ್ತು ರೂಪಾಯಿಗೇ ಲಿಮಿಟೇಷನ್ ! ! ಇದೇ ಸಮಾಜದಲ್ಲಿ ಜನರ ಜೀವನಮಟ್ಟವನ್ನು ಸರಿಮಾಡುವುದು ? Socialistic pattern of Society ಯೆಂಬುದು ಇದೆಯೇ ? ಆವಡಿಯಲ್ಲಿ ಹೇಳಿದ pattern ಇದಲ್ಲ. ಅಲ್ಲಿ ಹೇಳಿದ್ದು ಜಮೀನೊಂದಕ್ಕೇ ಅನ್ವಯಿಸುವುದಿಲ್ಲ. ನಾನು ಜಮೀನ್ದಾರನನ್ನಾಗಲಿ, ರೈತರನ್ನೇ ಆಗಲಿ ಉದ್ಧಾರಮಾಡಿ ಎಂದು ಹೇಳುತ್ತಿಲ್ಲ. ಪ್ರತಿಯೊಬ್ಬ ಮನುಷ್ಯನಿಗೂ ವೃತ್ತಿ ಕಲ್ಪಿಸಬೇಕೆಂದು ಹೇಳುತ್ತಿದ್ದೀರಿ. ಎಲ್ಲರಿಗೂ ವ್ಯವಸಾಯ ಕಲ್ಪಿಸಬೇಕೆಂದು ಹೇಳಿ, ಜಮೀನು ಕೊಟ್ಟರೆ, ಅವನು ಹಳ್ಳಿಗೆ ಹೋಗುವುದಿಲ್ಲ ಎಂದು ಹೇಳಿದರೆ ಏನುಮಾಡುವುದು ? ಒಬ್ಬರ ಮಕ್ಕಳು ಮೆಡಿಕಲ್ ಪರೀಕ್ಷೆ ಮಾಡಿಕೊಂಡು ಡಾಕ್ಟರಾಗಿ ಪ್ರಾಕ್ಟೀಸ್ ಮಾಡುತ್ತಾರೆ ; ಇನ್ನೊಬ್ಬರ ಮಕ್ಕಳಿಗೆ

(ಶ್ರೀ ಎ. ಭೀಮಪ್ಪನಾಯಕ್.)

ರೆವಿನ್ಯೂ ಪ್ರೊಬೇಷನರ್‌ಗಿರಿಯೋ ಅಥವಾ ಇನ್ನಾವುದೋ ಪ್ರೊಬೇಜನರ್‌ಗಿರಿಯೋ ಸಿಕ್ಕುತ್ತದೆ; ಇನ್ನು ಕೆಲವರ ಮಕ್ಕಳಿಗೆ ಏನೇ ಓದಿದ್ದರೂ ಯಾವ ಕೆಲಸವೂ ಸಿಕ್ಕದೆ ಸಣ್ಣ ಕೆಲಸಕ್ಕೆ ಸೇರಬೇಕು. 'Equal opportunities for all' ಎಂದು ಮಾತ್ರ ಬಾಯಲ್ಲಿ ಹೇಳುತ್ತಿದ್ದೀರಿ; ಕೊಡುವವರಿಗೆ ಕೊಡುತ್ತಲೇ ಇದ್ದೀರಿ!! ಹೀಗೆಲ್ಲಾ ಇರುವಾಗ ಈ ಜಮೀನು ವಿಚಾರದಲ್ಲಿ ಮಾತ್ರ discriminatory legislation ಏಕೆ?

ಅಲ್ಲದೆ ಇನ್ನೊಂದು ವಿಚಿತ್ರವೇನೆಂದರೆ, ನಿಮ್ಮ ಉದ್ದೇಶ ಸಾಧನೆಗೆ ಬೇರೆ ಎಲ್ಲ ರೀತಿಯನ್ನೂ ಬಿಟ್ಟು ಟೆನೆನ್ಸಿ ಬಿಲ್ಲಿಗೇ ತಿದ್ದುಪಡಿ ಮಾಡುವುದು! ಸ್ನಾನ ಮಾಡುವವನ ಮಗ್ಗುಲಲ್ಲ ಬಗ್ಗಿದರೆ ಸ್ನಾನವಾಗುತ್ತದೆಯೇ? ಟೆನೆನ್ಸಿ ಆಕ್ಟಿನಲ್ಲಿ ಏನಿದ್ದರೂ ಟೆನೆಂಟ್ಸಿಗೆ ರಕ್ಷಣೆ ಕೊಡುವುದಕ್ಕೆ, ಹೆಚ್ಚಿಗೆ ಹಕ್ಕುಗಳನ್ನು ಕೊಡುವುದಕ್ಕೆ, ಅವರ ಗೇಣಿಯನ್ನು ಸಂರಕ್ಷಣೆ ಮಾಡುವುದಕ್ಕೆ ಏನೇನು ಬೇಕೋ ಅದನ್ನೆಲ್ಲಾ ಬೇಕಾದರೆ ಮಾಡಿ; ಈ ಆಕ್ಟನ್ನು ತಿದ್ದುಪಡಿಮಾಡಿ ಅರ್ಧಕ್ಕಿಂತ ಮೇಲೆ ಇರದಂತೆ, ಇರಬೇಕೆಂದಿರುವದನ್ನು ತಪ್ಪಿಸಿ, ಬಾಕಿ ಕಡೆಯಲ್ಲಿ $\frac{1}{3}$ ಭಾಗವಿದೆ, $\frac{1}{4}$ ಭಾಗವಿದೆ ಎಂದು ಹೇಳಿ, ಅದನ್ನು ಬೇಕಾದರೂ ಮಾಡಿ; ಅದನ್ನಾದರೂ ಮಾಡಿದರೆ ರೈತನ ಹೊಟ್ಟೆಗೆ ಸ್ವಲ್ಪ ಕಾಳಾದರೂ ಸಿಕ್ಕುತ್ತದೆ. ಅಂಥಾದ್ದನ್ನು ಬೇಕಾದರೆ ಟೆನೆನ್ಸಿ ಆಕ್ಟಿನಲ್ಲಿ ತರಬಹುದು. ಅದನ್ನು ಬಿಟ್ಟು ನೀವು ತರುತ್ತಿರುವುದು ಯಾರಿಗೂ ಏನೂ ಅರ್ಥವಾಗದಿರುವುದು. ಇದನ್ನು ತಂದದ್ದರಿಂದ ಖಂಡಿತವಾಗಿಯೂ ಕೋರ್ಟಿನ ಧಾಟಕ್ಕೆ ಅವಕಾಶವಾಗುತ್ತದೆ. Limitation of holdings ಎನ್ನುವುದನ್ನು ರೈತರಿಗೆ ಮಾತ್ರ ಅನ್ವಯಿಸುವ ರೀತಿಯಲ್ಲಿ ತರುವುದಕ್ಕೆ ಸಾಧ್ಯವಿಲ್ಲ. ತರುವುದಾದರೆ fundamental rightsಗಳ ಸೂಕ್ತರೀತಿಯ ಬದಲಾವಣೆಯೊಡನೆ ತರಬೇಕು. ಒಬ್ಬ ವ್ಯಕ್ತಿಯ ಪರಮಾವಧಿ ಆಸ್ತಿಯು ಇಷ್ಟೇ ಇರಬೇಕೆಂದು ನಿಗದಿ ಮಾಡದೆ ಬರಿಯ ಜಮೀನಿನ ವಿಷಯದಲ್ಲಿ ಮಾತ್ರ ಈ ರೀತಿ ನಿಗದಿ ಮಾಡುವುದಕ್ಕೆ ಪ್ರಯತ್ನಿಸುವುದು discriminatory legislation ಆಗುತ್ತದೆ.

ಒಬ್ಬ ಸದಸ್ಯರು.—ಹೇಗಾಗುತ್ತದೆ?

ಶ್ರೀ ಎ. ಭೀಮಪ್ಪನಾಯಕ್.—ಆಗುತ್ತದೆ. ಹೈಕೋರ್ಟಿನಲ್ಲಿ ಬೇಕಾದರೆ writ ಹಾಕಬಹುದು ಎಂದು ಹೇಳಬಹುದು. ಹಾಗೆ ಹೈಕೋರ್ಟಿಗೆ ಬರುವವರು ಎಷ್ಟು ಜನ ಇದ್ದಾರೆ? ಇವನ್ನೆಲ್ಲಾ ನೋಡಬೇಕು.

ಇನ್ನು ಈ ಬಿಲ್ಲಿನಲ್ಲಿರುವ ಕಲಮುಗಳ ವಿಷಯದಲ್ಲಿ ನಾನು ಅಂದು ಕೊಂಚಮಾತನಾಡಿದ್ದೇನೆ. ಎಲ್ಲಿಗೆ ನಿಲ್ಲಿಸಿದ್ದೆನೋ ಈಗ ಜ್ಞಾಪಕವಿಲ್ಲ.

Sri G. SHIVAPPA.—I have no objection if he is given another opportunity to speak.

Mr. SPEAKER.—Because Sri Shivappa recommends, I can't give permission.

Sri A. BHEEMAPPA NAIK.—This is only so far as agricultural land is concerned. What about lands he holds for fodder purposes? ಅದರ ವಿಷಯದಲ್ಲಿ 'one-fourth of the permissible holding' ಎಂದು ಒಂದು ಪರಿಮಿತಿಯನ್ನು ಗೊತ್ತುಮಾಡಿದ್ದೀರಿ. ಈ ಜಮೀನು ದನಕರುಗಳಿಗಾಗಿ ಇರಬೇಕೆಂದು ಹೇಳಿದ್ದೀರಿ. ಈಗ ವಾಸ್ತವವಾಗಿ ನೋಡಿದರೆ ಅಂಥ ಜಮೀನು ಎಲ್ಲಾ ಕಡೆಯಲ್ಲೂ ಇದೆಯೇ? ಪ್ರತಿಹೊಬ್ಬ ರೈತನೂ ಆರೀತಿ ಉಳಿಸಿಕೊಂಡಿದ್ದಾನೆಯೇ? ಹೀಗಿರುವಾಗ ಈ ಬಿಲ್ಲು ಬಂದಮೇಲೆ, ಮುಂದೆ ಒಳ್ಳೆಯ ಫಲವತ್ತಾದ ಜಮೀನನ್ನೇ ಇದಕ್ಕಾಗಿ ಉಳಿಸಿಕೊಂಡಿದ್ದೇನೆಂದು ಹೇಳಿದರೆ ಏನು ಮಾಡುತ್ತೀರಿ? ಅಲ್ಲದೆ 'Standard Acre' ಎಂಬ ಪದವನ್ನು ಉಪಯೋಗಿಸಿದ್ದೀರಿ. Standard Acre ಎನ್ನುವುದು ದೇಶಕ್ಕೆಲ್ಲಾ ಒಂದೇ ರೀತಿಯಾಗಿರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಚಿತ್ರದುರ್ಗದಲ್ಲಿ ಎಕರೆಗೆ ಒಂದು ಪಲ್ಲ ಬೆಳೆಯುತ್ತದೆ. ಅಲ್ಲಿ Standard acre ಒಂದು ಎಕರೆಯೆಂದರೆ, ಶ್ರೀರಂಗಪಟ್ಟಣದಲ್ಲಿ ಎಕರೆಗೆ 30 ಪಲ್ಲ ಬೆಳೆಯುವ ಕಡೆಯಲ್ಲಿ Standard Acre ಎಂದರೆ ಯಾವುದು? 1/30 ಎಕರೆಯೆಂದು ಹೇಳುತ್ತೀರಾ? ಹೀಗೆ ಅಲ್ಲಿಗೇ ಒಂದು ಲೆಕ್ಕ ಇಲ್ಲಿಗೇ ಒಂದು ಲೆಕ್ಕ. ಅಥವಾ ಏನಾದರೂ ಸ್ವಲ್ಪ ಕೈಬೆಚ್ಚಗೆ ಮಾಡಿದರೆ ನನಗೇ ಒಂದು ಲೆಕ್ಕ.

(*Laughter*)

ಒಬ್ಬ ಸದಸ್ಯರು.—ನೀವೂ ಕೈ ಬಿಸಿಮಾಡುತ್ತೀರಾ?

ಶ್ರೀ ಎ. ಭೀಮಪ್ಪನಾಯಕ್.—ನಾನು ಹೇಳುವುದು 'ನಾನು' ಎಂದಲ್ಲ. ಹೀಗೆಲ್ಲಾ ನಡೆಯುವುದಕ್ಕೆ ಅವಕಾಶವಿರುತ್ತದೆ. ಹಿಂದೆ ಪಹಣಿ ಲೆಕ್ಕವನ್ನು ಬರೆಯುವಾಗ ಕೈಬಿಸಿ ಮಾಡುತ್ತಿದ್ದರಲ್ಲ! 'ನನಗೆ ಜೀವನಕ್ಕೆ ಬಹಳ ಕಷ್ಟ, ಹತ್ತು ಪಲ್ಲಕ್ಕೆ ಬದಲಾಗಿ ನಾಲ್ಕು ಪಲ್ಲ ಬರೆಯಿರಿ; ಹೀಗೆ ಉಳಿದ ಆರು ಪಲ್ಲದಲ್ಲಿ ಅರ್ಧ ನನಗೆ ಇನ್ನರ್ಧ ನಿಮಗೆ'—ಎಂದು ಮಾಡುತ್ತಿತ್ತಲ್ಲವೇ ಏನು? ಆದ್ದರಿಂದ Standard Acre ಎಂದು ಹೇಳಿದರೆ ಹೇಗೆ? ಅಲ್ಲದೆ ಇದರಲ್ಲಿ ಕೊಟ್ಟಿರುವುದು ಮೂರೇ ಮೂರು ಬೆಳೆಗಳ ವಿಚಾರ—ರಾಗಿ, ಭತ್ತ ಮತ್ತು ಜೋಳ. ಕೆಲವು ಕಡೆ ಬರೀ ತೋಟವೇ ಇದ್ದರೆ ಅಲ್ಲಿಗೆ Standard Acre ಯಾವುದು? ಈ ವಾದವನ್ನು ನಾನೂ ನೋಡಿದ್ದೇನೆ. ಇದಕ್ಕೆ ತಾವು ಹೇಳುವ arguments ಕೂಡ ಹಿಂದಿನದೇ ಆಗಿರುತ್ತದೆಯೋ ಅಥವಾ ಬೇರೆಯೇನಾದರೂ ಇರುತ್ತದೆಯೋ ನೋಡೋಣ. ತಮಗೆ ಇತರರು ಮಾತನಾಡುವುದು ಬೇಕಿಲ್ಲದಾಗ, ಅವರ ಮಾತು ತಮ್ಮನ್ನು ಚುಚ್ಚಿದಾಗ ಹೀಗೆ ಹೇಳುವುದು ಸ್ವಾಭಾವಿಕ.

ಆಮೇಲೆ ಇನ್ನೊಂದು ವಿಷಯ. ಆಕ್ಟಿನಮೇಲೆ ರೂಲ್ಸನ್ನು ತಾವೇ ಮಾಡುವುದಾಗಿ ಹೇಳಿದ್ದೀರಿ. ರೂಲ್ಸ್ ಮಾಡುವ ಅಧಿಕಾರವನ್ನು ಸರ್ಕಾರದವರ ಕೈವಶಕ್ಕೊಪ್ಪಿಸುವುದಕ್ಕಿಂತ ಹೆಚ್ಚಿನ ಅಪಘಾತ ಇನ್ನಾವುದೂ ಇಲ್ಲ. ಯಾವುದನ್ನು ಹೇಳಲಿ, ಆಕ್ಟಿನಲ್ಲಿ ಸೇರಿಸುವುದು ಬೇಡ, ರೂಲ್ಸಿನಲ್ಲಿ ಮಾಡುವುದಕ್ಕೆ ಬಿಟ್ಟುಬಿಡಿ ಎನ್ನುತ್ತಾರೆ. ಹೀಗೆ ರೂಲ್ಸಿನಲ್ಲಿ ಏನುಬೇಕಾದರೂ ಮಾಡುವುದಕ್ಕೆ ಬಿಟ್ಟರೆ ನಾವೇಕೆ ಇಲ್ಲಿರಬೇಕು? ರೂಲ್ಸಿನಲ್ಲಿ ಮಾಡುವುದೇನಿದ್ದರೂ ಆಕ್ಟಿಗೆ ವಿರೋಧವಾಗಿಲ್ಲದುದನ್ನು ಮಾತ್ರ. ಹೀಗಿರುವಾಗ, ಇಲ್ಲಿ ರಾಗಿ, ಭತ್ತ ಜೋಳ ಎಂದು ಮಾತ್ರ ಇರುವಾಗ ಹಿಪ್ಪುನೇರಳೆ ವ್ಯವಸಾಯವನ್ನು ಹೇಗೆ ಸೇರಿಸುತ್ತೀರಿ?

Sri Kadidal MANJAPPA.—Under the Rules of Procedure arguments should not be repeated.

Mr. SPEAKER.—Yes. Under the Rules of Procedure, arguments should not be repeated.

Sri A. BHEEMAPPA NAIK.—I have been simply interpreting each section or clause contained herein.

"31-C. Landlord's right to determine protected tenancy.—(1) Notwithstanding anything contained in Section 15, a landlord may terminate the tenancy of a protected tenant by giving him one year's notice in writing, stating therein the reasons for such termination, if the landlord *bona fide* requires the land for any of the following purposes, namely:

(*a*) for cultivating personally,

or

(*b*) for any non-agricultural use for his own purpose.

(2) Nothing in sub-section (1) shall entitle the landlord—

(*a*) to terminate the tenancy of a protected tenant, if the landlord at the date of the notice is given or at the date on which the notice expires has been cultivating personally other land or has been holding land leased to persons other than protected tenants in the State equal to one-fourth or more than one-fourth of the permissible holding."

ಈಗ ಒಬ್ಬ ಮನುಷ್ಯ ಟೆನೆಂಟ್ ಆಗಿದ್ದವನು ಜಮೀನ್ದಾರನಿಂದ 25 standard ಎಕರೆಗಳಷ್ಟು ಬಿಡಿಸಿಕೊಂಡು ಸಾಗುವಳಿ ಮಾಡಬಹುದೆಂದು ಹೇಳಿದೆ. ಅದೇ landlord | ಆದವನು ಹಣ ಬೆವರನ್ನು ಸುರಿಸಿ ಜಮೀನನ್ನು ಕೊಂಡುಕೊಂಡು ಯಾವುದೋ ಕಾರಣದಿಂದ ಸ್ವಲ್ಪ ಜಮೀನನ್ನು ತಾನಿಟ್ಟುಕೊಂಡು ಮಿಕ್ಕದ್ದನ್ನು ಬೇರೆಯವರಿಗೆ ಸಾಗಿಗೆ ಕೊಟ್ಟಿದ್ದರೆ ಆತ ತನಗೆ ಬೇಕಾದಾಗ ಬಿಡಿಸಿಕೊಳ್ಳಲು ಸಾಧ್ಯವಿಲ್ಲ. ಜಮೀನ್ದಾರನು ತಾನು ಜಮೀನನ್ನು ಮಾಡುವುದು ಬೇಕಿಲ್ಲ, ಕೋರಿಯಾಗಿದ್ದವನು ಈ ಸೆಕ್ಷನ್ನಿನ ಪ್ರಕಾರ ಜಮೀನಿಗೆ ಅಧಿಪತಿಯಾಗುತ್ತಾನೆ. ಜಮೀನ್ದಾರನು ತಾತ್ಕಾಲಿಕವಾಗಿ ಮನೆಯಲ್ಲಿ ಕೆಲಸ ಮಾಡುವವರು ಇಲ್ಲದೆ ಇದ್ದಾಗ ತಾನು 10 ಎಕರೆ ಇಟ್ಟುಕೊಂಡು ಇನ್ನಾರಿಗಾದರೂ ಆರು ಎಕರೆ ಕೊಟ್ಟಿದ್ದು ಮುಂದೆ ತಾನು ಮಾಡುವುದಕ್ಕೆ ಶಕ್ತಿ ಪಡೆದು, ಮಕ್ಕಳು 'ದೊಡ್ಡವರಾಗಿದ್ದಾರೆ, ಜಮೀನು ಬಿಡಿಸಿಕೊಡಬೇಕು' ಎಂದು ಕೇಳಿದರೆ ಅದಕ್ಕೆ ಅವಕಾಶವಿಲ್ಲ!

2 P.M.

ಇದರ ಅರ್ಥವೇನು ? ಇದನ್ನು ಯಾವ ಅಭಿಪ್ರಾಯಕ್ಕಾಗಿ ತಂದಿದ್ದೀರಿ ಎಂಬುದನ್ನು ತಾವು ಆಲೋಚನೆ ಮಾಡಿ ನೋಡಬೇಕಾಗಿದೆ. ಇದೆಲ್ಲಾ ಆಗುವುದಕ್ಕೆ ಕಾರಣವೇನೆಂದರೆ—ಅದಕ್ಕೆ ಕಾರಣ ಇಷ್ಟೆ :—ಫಂಡಮೆಂಟಲ್ ರೈಟ್ಸ್‌ನಲ್ಲಿ ಅಡಕವಾಗಿರತಕ್ಕಂಥ ಈ ಒಂದು ಪ್ರಶ್ನೆಯನ್ನು, ಅಂದರೆ, ಈ ಲಿಮಿಟೇಷನ್ ವಿಚಾರವನ್ನು ತಾವು ಯಾವುದೋ ಒಂದು ಸಂದಿನಲ್ಲಿ ತಂದು ಇದನ್ನು ಸುಲಭವಾಗಿ ಮುಗಿಸಿಬಿಡೋಣ ಎನ್ನುವ ಒಂದು ಉದ್ದೇಶದಿಂದ ಹೀಗೆ ಮಾಡಿದ್ದೀರಿ. ಆದರೆ ಅದಕ್ಕೇ ಈಗ ಈ ತೊಂದರೆಯಾಗಿರುವುದು. ಇದಕ್ಕಾಗಿಯೇ ನಾನೀಗ ತಮಗೆ ಈ ಬಗ್ಗೆ ಒಂದು ಬೇರೆ ಅಲಾಯಿದ ಬಿಲ್ಲನ್ನೇ ತನ್ನಿ ಎಂದು ಹೇಳುತ್ತಿರುವುದು. ಆದರೆ ನಾನು ಈ ಬಿಲ್ಲನ್ನು ಈಗ 3 ದಿವಸಗಳಿಂದಲೂ ಓದಿಲ್ಲ. ಹಾಗೆ ಓದಿದ್ದರೆ ಆ ಮಾತೇ ಬೇರೆ ಇತ್ತು.

ಶ್ರೀ ಕಡಿದಾಳ್ ಮಂಜಪ್ಪ.—ಇದು ಆರನೆಯ ಸಾರ್ತಿ. . . .

Mr. SPEAKER.—I want to know from the Hon'ble Member what is the implication of that statement.

ಶ್ರೀ ಎ. ಭೀಮಪ್ಪನಾಯಕ್.—ಅದಕ್ಕೂ ಇನ್ನೂ ಅವಕಾಶ ಸಿಕ್ಕೇ ಸಿಕ್ಕುತ್ತದೆ. Send this to the Select Committee with this recommendation that we are not committed to the principles of ceilings or limitation of holdings, we are not committed to amendments which fundamentally affect either the lessee or the lessor. ಇದನ್ನು ತಾವು ಮಾಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ತಾವು ಆ ವಿಚಾರವನ್ನೆಲ್ಲಾ ಇದರಲ್ಲಿ ತರುವುದು ನ್ಯಾಯವಾದುದಲ್ಲ.

It is going to be a discriminatory law; it is going to be illegal. Therefore I would request you to separate these two things and bring two different Bills altogether. (*Interruption*) The principle is accepted.

ಜನರಲ್ ಆಗಿರಲಿ ಎಂದು ಹಾಗೆ ಹೇಳಿದಮೇಲೆ ಅದು ಆಗುವುದೇ ಇಲ್ಲ. ಅದು ಸಂಪೂರ್ಣವಾಗಿ ಡ್ರಾಪೇ ಆಗಿಹೋಗುತ್ತದೆ. ಹಾಗೆ ಅವರು ಮಾಡುವುದಾಗಿದ್ದರೆ ಎರಡನ್ನೂ ಒಂದೇ ಸಾರ್ತಿ ಮಾಡಲಿ. ಈ ಹಿಂದೆ ಒಂದಾವರ್ತಿ ಆ ಕೋ-ಆಪರೇಟೀವ್ ಸೊಸೈಟಿಗಳ ಬಿಲ್ಲಿನಮೇಲೆ ಚರ್ಚೆನಡೆಯಲು ಸೆಲೆಕ್ಟ್ ಸಮಿತಿ ಸೇರಿತ್ತು. ಅಲ್ಲಿ ಏನೇನು ಆಯಿತು, ಏನೇನು ನಡೆಯಿತು ಎಂಬುದನ್ನೆಲ್ಲಾ ಹೇಳಬಹುದು, ಆದರೆ ಏನು ಪ್ರಯೋಜನ ? ಆದಕಾರಣ ಅದೆಲ್ಲವನ್ನೂ ನಾನೀಗ ಹೇಳುವುದಕ್ಕೆ ಹೋಗುವುದಿಲ್ಲ. ಈ ಹಿಂದೆ ಸರ್ಕಾರದವರು ಆ ಕೋ-ಆಪರೇಟೀವ್ ಸೊಸೈಟಿಗಳ ಬಿಲ್ಲಿಗೆ ಒಂದು ತಿದ್ದುಪಡಿಯನ್ನು ತಂದರು. ಆಗ ಕೆಲವರು ಸಭೆಯಲ್ಲಿ ಅದಕ್ಕೆ ಒಪ್ಪಲಿಲ್ಲ. ಆಗ ಸರ್ಕಾರದವರು ಆ ಬಿಲ್ಲನ್ನು ಸೆಲೆಕ್ಟ್ ಸಮಿತಿಗೆ ಹಾಕಿದರು. ಸಭೆಯಲ್ಲಿ ಯಾರು ಆ ಸರ್ಕಾರದವರ ತಿದ್ದುಪಡಿಯನ್ನು ಬಹಳವಾಗಿ ವಿರೋಧಿಸಿ ಮಾತನಾಡಿದ್ದರೋ ಅವರನ್ನೇ ಆ ಸೆಲೆಕ್ಟ್ ಸಮಿತಿಗೂ ನೇಮಿಸಿಕೊಂಡರು. ಅಲ್ಲಿ ಸರ್ಕಾರದವರು ಮತ್ತೊಂದು ತಿದ್ದುಪಡಿಯನ್ನು ತಂದರು. ಆಗ ಆ ಸದಸ್ಯರು ಅದನ್ನೂ ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳಿದರು. . . .

Sri Kadidal MANJAPPA.—Is it relevant—what transpired in the Select Committee ?

Sri A. BHEEMAPPA NAIK.—Proceedings in both the Houses.

Mr. SPEAKER.—I did not not follow what the Hon'ble Member said.

Sri Kadidal MANJAPPA.—He was narrating the circumstances in which the Select Committee dealt with the Bill relating to co-operative societies. It was not relevant.

Sri Mulka GOVINDA REDDY.—About the contradictory position that was taken up by the Minister.

ಶ್ರೀ ಎ. ಭೀಮಪ್ಪನಾಯಕ್.—ಶ್ರೀ ಎಂ. ಲಿಂಗಣ್ಣನವರು ಸಲೆಕ್ಟ್ ಸಮಿತಿಗೇಕೆ ಕಳುಹಿಸಲಾಯಿತು ಎಂದು ಕೇಳಿದರು, ಅದಕ್ಕಾಗಿ ಹೇಳುತ್ತೇನೆ. ಅಲ್ಲಿ ಸಲೆಕ್ಟ್ ಸಮಿತಿಯಲ್ಲಿ ಕೆಲವು ಬದಲಾವಣೆಗಳು ಆಗಬೇಕಾಗಿ ಬಂತು. ಆಗ ಪುನಃ ಕೆಲವು ಸದಸ್ಯರು ಕೆಲವು ತಿದ್ದುಪಡಿಗಳನ್ನು ತಂದರು. ಆಗ ಸರ್ಕಾರದವರು ಮೊದಲು ಅವರ ಬಿಲ್ಲಿನಲ್ಲಿ ಏನೊಂದು ತಿದ್ದುಪಡಿಯನ್ನು ತಂದಿದ್ದರೋ ಅದನ್ನೇ ಸರ್ಕಾರದವರು ತಾವು ಒಪ್ಪುವುದಿಲ್ಲ ಎಂದು ಹೇಳಿ ಬಿಟ್ಟರು. ಅವರು ಮೊದಲು ಯಾವ ಒಂದು ಉದ್ದೇಶವನ್ನು ಸಫಲಗೊಳಿಸುವುದಕ್ಕಾಗಿ ತಂದಿದ್ದರೋ ಅಂಥಾದ್ದನ್ನೇ ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳಿಬಿಟ್ಟರು. ಆದುದರಿಂದ ಈಗ ಇದನ್ನು ನಮ್ಮ ಸಲೆಕ್ಟ್ ಸಮಿತಿಗೂ ಕಳುಹಿಸುವುದಕ್ಕೆ ಭಯವಾಗುತ್ತಿದೆ. ಇದರ ಬಗ್ಗೆ ನಾನು ಹೇಳುವುದಿಷ್ಟೆ: ನಮ್ಮಲ್ಲಿ ಒಂದು ಪ್ರಿನ್ಸಿಪಲ್ ಸರಿಯಾಗಿಲ್ಲ ಎಂದು. Fundamental rights of all citizens,—how can you curtail them in a Tenancy Act, I want to know ಜಮೀನ್ದಾರರು ಎಂದ ಮಾತ್ರಕ್ಕೆ ಒಂದೇ ಆಗುತ್ತಾರೇನು ! ಎಲ್ಲೋ ಅಷ್ಟಿಷ್ಟು ಕೋರು ಕೊಟ್ಟುಕೊಂಡು ಜಮೀನು ಸಾಗುವಳಿಮಾಡತಕ್ಕವನೂ ಒಬ್ಬ ಜಮೀನ್ದಾರ, 1,000 ಎಕರೆ ಜಮೀನಿಟ್ಟುಕೊಂಡಿರತಕ್ಕವನ್ನೂ ಒಬ್ಬ ಜಮೀನ್ದಾರ, ಇತರೆ ಯಾವ ಆಸ್ತಿಯೂ ಇಲ್ಲದೆ ಕೇವಲ 5-10 ಎಕರೆಗಳನ್ನಿಟ್ಟುಕೊಂಡು, ಒಂದು ಬಾವಿಮಾಡಿಕೊಂಡು ವ್ಯವಸಾಯ ಮಾಡತಕ್ಕವನೂ ಒಬ್ಬ ಜಮೀನ್ದಾರ, ಏನೂ ಇಲ್ಲದೆ ಅಲ್ಲಿ ಇಲ್ಲಿ ಜಮೀನನ್ನು ಗುತ್ತಿಗೆ ಮಾಡತಕ್ಕವನೂ ಒಬ್ಬ ಜಮೀನ್ದಾರ ; ಹೀಗಿರತಕ್ಕವರೆಲ್ಲರಿಗೂ ಒಂದೇ ರೀತಿಯಾಗಿ ತೀರ್ಮಾನ ಮಾಡುತ್ತೇವೆಂದು ಹೇಳುವುದು ಅರ್ಥವಿಲ್ಲದ ಮಾತು. ಹೀಗೆ ಮಾಡುವುದು illegal ಆಗುತ್ತದೆ, 'Transfer of Property Act' ಗೆ ಇದು ವಿರೋಧವಾಗುತ್ತದೆ. ಆದುದರಿಂದ ಮಾನ್ಯ ರೆವಿನ್ಯೂಮಂತ್ರಿಗಳು ಇದನ್ನು ದೊಡ್ಡ ಮನಸ್ಸುಮಾಡಿ ಹಿಂದಕ್ಕೆ ತೆಗೆದು ಕೊಳ್ಳಬೇಕೆಂದು ಅವರಲ್ಲಿ ಅತಿವಿನಯದಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಅವರೀಗ ಆ ರೀತಿ ದೊಡ್ಡ ಮನಸ್ಸು ಮಾಡಿಲ್ಲ ಎಂದು ಹೇಳುತ್ತೀರಾ ?

ಶ್ರೀ ಎ. ಭೀಮಪ್ಪನಾಯಕ್.—ಮಾಡಬೇಕೆಂದು ಹೇಳುತ್ತೇನೆ.

Sri H. M. CHANNABASAPPA.—I would like to submit that at the time when the Bill was introduced by the Minister for Revenue, he said that he has enhanced the tenancy period from 5 years to 10 years as many people complained that the period of 5 years was not sufficient and it must be enhanced to 10 years etc. The Act came into force only two years ago and that became applicable to the whole State very recently and he did not place before this House facts and figures pertaining to the difficulties that arose; that he was confronted with, in implementing the Tenancy Act and therefore we are not in possession of all facts with regard to the difficulties so that we may offer our remarks in respect of this Amendment Bill.

Sri Kadidal MANJAPPA.—My Hon'ble friend was not here at the time when I explained.

Sri H. M. CHANNABASAPPA.—I was here.

Mr. SPEAKER.—During the last session.

Sri H. M. CHANNABASAPPA.—Except reading out the Objects and Reasons, he did not make out a case for this Bill. The Tenancy (Amendment) Bill goes in its own way. It is for the Minister to place before us what are all the difficulties that came in the way of implementing the Tenancy Act so that we may be in possession of those facts and try to help the Government in getting the amendment passed so that it may confer better benefits on the tenants and promote the relationship between the tenant and the landlord.

Mr. SPEAKER.—Is the Minister in a position to give additional information ?

Sri Kadidal MANJAPPA.—I explained at great length on the previous occasion. I wish to add that the period of tenancy provided for in the Act is only 5 years. Thousands of landless tenants complained to me that the period of 5 years is not sufficient and that they should have more security regarding that position. That was the reason for enhancing the period of tenancy.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮಲ್ಲಿಗೆ ಯಾವ ಯಾವ ತಾಲ್ಲೂಕಿನಿಂದ ಎಷ್ಟೆಷ್ಟು ಅರ್ಜಿಗಳು ಬಂದಿವೆ ಯೆಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ?

Sri Kadidal MANJAPPA.—Petitions have been received. They have represented to me orally also wherever I have gone.

Mr. SPEAKER.—He can also hear oral representations in his tours.

Sri H. M. CHANNABASAPPA.—This House took a decision that a period

of five years is sufficient after knowing the psychology and the thoughts prevailing in the country and taking into consideration all aspects. The House took a decision and five years have not passed. Before the period has passed, I fail to understand how exactly the difficulties could confront them. It was open to thousands of tenants who were really aggrieved by that decision to come before this House and make a representation that the five years proposed by us is not sufficient and that it must be raised to ten years. It was open to tenants or any organisations and I know that the Tenancy Organisation was also represented on the Land Reforms Committee and all facts were taken into consideration at the time of passing the Bill, providing five years.

Mr. SPEAKER.—The Minister has already replied. He is receiving not only oral representations but also written representations.

Sri Kadidal MANJAPPA.—I might however say that in a democratic set up a Minister or the Government is capable of feeling the pulse of the people. It is not necessary to receive hundreds or thousands of petitions. They can understand the feeling in the country, especially in a matter like land reforms. (A Voice.–and the members cannot.)

Sri H. M. CHANNABASAPPA.—The Hon'ble Minister may feel the pulse...

Mr. SPEAKER.—It is for the Hon'ble Member to say what he knows about the feeling in the country.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಮಾನ್ಯಅಧ್ಯಕ್ಷರೆ, 1952 ನೆಯ ಇಸವಿಯ ಗೇಣಿಯ ಕಾನೂನನ್ನು ತಿದ್ದುಪಡಿ ಮಾಡುವ ಸಲುವಾಗಿ ಈಗ ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ತಿದ್ದುಪಡಿ ಮಸೂದಾ ಕಾನೂನಿನ ವಿಷಯದಲ್ಲಿ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ನಾನು ಇಚ್ಛಿಸುತ್ತೇನೆ.

ಈ ಮಸೂದೆ ಕಳೆದುಹೋದ ಈ ಸಭೆಯ ಅಧಿವೇಶನದಲ್ಲಿ ಮಾನ್ಯಸಚಿವರಿಂದ ಮಂಡಿಸಲ್ಪಟ್ಟಾಗ—ಆಗ ಮಾತನಾಡುವುದಕ್ಕೆ ಪ್ರಾರಂಭಿಸಿದಂಥ ಮಾನ್ಯ ಶ್ರೀ ಭೀಮಪ್ಪನಾಯಕರು ಆ ಅಧಿವೇಶನ ಮುಕ್ತಾಯವಾದದ್ದರಿಂದ ಆಗ ಕೈಬಿಟ್ಟಿದ್ದವರು ಈಗ ಪುನಃ ತಮ್ಮ ಭಾಷಣವನ್ನು ಪ್ರಾರಂಭಮಾಡಿ ಈಗತಾನೇ ತಮ್ಮ ಮಾತುಗಳನ್ನು ಮುಗಿಸಿರುತ್ತಾರೆ.

ಈ ಗೇಣಿ ಕಾನೂನಿನ ಮಸೂದೆ ಮೊದಲು ಮೈಸೂರು ಸಂಸ್ಥಾನದಲ್ಲಿ 1952 ನೆಯ ಇಸವಿಯಲ್ಲಿ ಕಾನೂನಾಗಿ ಜಾರಿಗೆ ಬಂತು. ಈ ಮಸೂದೆಯು ಕಾನೂನಾದ ಮೇಲೆ ಇದನ್ನು ಜಾರಿಗೆ ಕೊಡುವಾಗ ಇದನ್ನು ಸಂಸ್ಥಾನಾದ್ಯಂತವೂ ಜಾರಿಗೆ ಕೊಡಲಿಲ್ಲ. ಕೆಲವು ಸ್ಥಳಗಳಲ್ಲಿ ಮಾತ್ರ ಪ್ರಚಾರಕ್ಕೆ ಕೊಟ್ಟು ಅನಂತರ ಇದನ್ನು ಸಂಸ್ಥಾನಾದ್ಯಂತವೂ ವಿಸ್ತರಿಸಲಾಯಿತು. ಆದರೆ ಇಲ್ಲಿಯವರೆಗೂ ಕೂಡ ಈ ಕಾನೂನಿನಿಂದ ಇನಾಂ ಮತ್ತು ಮುಜ್ರಾಯಿ ಜಮೀನುಗಳ ರೈತರು ಯಾವ ಒಂದು ಸಹಾಯವನ್ನಾಗಲಿ ಅಥವಾ ಪ್ರಯೋಜನವನ್ನಾಗಲಿ ಪಡೆಯುವುದಕ್ಕೆ ಅವಕಾಶ ಮಾಡಿ ಕೊಡಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಇದು ಎಲ್ಲರಿಗೂ ಅನ್ವಯಿಸುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಈ ಕಾನೂನು ಜಾರಿಗೆ ಬಂದು ಇನ್ನೂ ಮೂರು ವರ್ಷಗಳೂ ಕಳೆದಿಲ್ಲ, ಈಗಲೇ ಈ ಕಾನೂನನ್ನು ಇಷ್ಟು ಆಮೂಲಾಗ್ರವಾಗಿ ತಿದ್ದುಪಡಿ ಮಾಡುವುದು ಅಷ್ಟೇನೂ ಸೂಕ್ತವಲ್ಲವೆಂದು ಜಮೀನ್ದಾರರ ಪರವಾಗಿ ಕೆಲವರು ಸರ್ಕಾರದಲ್ಲಿ ಮನವಿಮಾಡಿಕೊಂಡಿದ್ದಾರೆ. ಇಂಥ ಮನವಿಯೊಂದು ನನ್ನ ಕೈಯಲ್ಲಿ ಸಿಕ್ಕಿದೆ. 'ಮೈಸೂರು ಗೇಣಿ ಕಾನೂನಿನ ಲೋಪದೋಷಗಳು' ಎಂದು Land Holders' Association, Srirangapatna Taluk ನವರು ಬರೆದುಕೊಂಡಿದ್ದಾರೆ. ಮತ್ತು ಅನೇಕ ಜಮೀನ್ದಾರರು ಅನೇಕ ರೀತಿಯಲ್ಲಿ ಕಳವಳವನ್ನು ವ್ಯಕ್ತಪಡಿಸಿರುವುದನ್ನು ನಾನು ಅಲ್ಲಲ್ಲಿ ಕೇಳಿದ್ದೇನೆ. ಈ ಕಾನೂನನ್ನು ತಿದ್ದುಪಡಿಮಾಡುವ ಸಂದರ್ಭದಲ್ಲಿ ಸರ್ಕಾರದವರು ಕೊಟ್ಟಿರತಕ್ಕ ಉದ್ದೇಶ ಮತ್ತು ಕಾರಣಗಳನ್ನು ನಾನು ಓದಿದ್ದೇನೆ. ಇದರಲ್ಲಿ ಸರ್ಕಾರದವರು ಹೀಗೆ ಹೇಳಿದ್ದಾರೆ: ಜಮೀನ್ದಾರರಿಗೂ ಷಿಕ್ಮಿದಾರರಿಗೂ ಉಂಟಾಗಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ತರಲ್ಪಟ್ಟಿವೆ, ಇವುಗಳನ್ನು ಪರಿಹರಿಸಲು ಕಾನೂನನ್ನು ತಿದ್ದುಪಡಿ ಮಾಡುವುದು ಆವಶ್ಯಕವೆಂದು ಕಂಡುಬಂದಿದೆ ಎಂದು ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ಸೂಚಿಸಿರುವ ಮುಖ್ಯವಾದ ತಿದ್ದುಪಡಿಗಳು ಐದು ಎಂದು ಹೇಳಬಹುದು. ಇವು ಯಾವವೆಂದರೆ, ಮೊದಲನೆಯದು, ಗೇಣಿಯ ಕಾಲಾವಧಿ ಐದು ವರ್ಷಗಳೆಂದಿರುವುದನ್ನು ಹತ್ತು ವರ್ಷಗಳಿಗೆ ನಿಯಮಿತಗೊಳಿಸುವುದು; ಎರಡನೆಯದು, ಹಿಡುವಳಿಯ ವಿಸ್ತೀರ್ಣವನ್ನು ಗೊತ್ತುಮಾಡುವುದು ; ಮೂರನೆಯದು, ಜಮೀನುದಾರನಿಗೆ ಸ್ವಂತವಾಗಿ ಸಾಗುವಳಿ ಮಾಡಲು ಬೇಕಾದ ಜಮೀನಿನ ವಿಷಯದಲ್ಲಿಯೂ ಮತ್ತು ಹತ್ತು ವರ್ಷ ಕಾಲಾವಧಿಯಲ್ಲಿ ಷಿಕ್ಮಿಯನ್ನು ಮುಕ್ತಾಯಗೊಳಿಸುವ ಸಂಬಂಧದಲ್ಲಿಯೂ ಜಮೀನುದಾರನ ಹಕ್ಕನ್ನು ಪರಿಮಿತಿಗೊಳಿಸುವುದು. ಇದು ಮುಖ್ಯವೆಂದು ಸರ್ಕಾರದವರು ನಮೂದಿಸಿದ್ದಾರೆ. ಇನ್ನೆರಡು ತಿದ್ದುಪಡಿಗಳು ಅಧಿಕಾರಕ್ಕೆ ಸಂಬಂಧಪಟ್ಟಹಾಗಿವೆ. ಈಗ ಅಮಲ್ದಾರರು ಯಾವ ಅಧಿಕಾರವನ್ನು ಚಲಾಯಿಸುತ್ತಿದ್ದಾರೋ ಅದನ್ನು ಇನ್ನುಮುಂದೆ ಅಸಿಸ್ಟೆಂಟ್ ಕಮೀಷನರು ಚಲಾಯಿಸುತ್ತಾರೆ, ಇದು ಕಾನೂನಾಗಿ ಜಾರಿಗೆ ಬಂದಮೇಲೆ. ಹೀಗೆಯೇ ಅಸಿಸ್ಟೆಂಟ್ ಕಮೀಷನರ ಸ್ಥಳದಲ್ಲಿ ಡೆಪ್ಯುಟೀ ಕಮೀಷನರು, ಅವರ ಸ್ಥಳದಲ್ಲಿ ರೆವೆನ್ಯೂ ಕಮೀಷನರು ಈ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಈ ತಿದ್ದುಪಡಿಯಲ್ಲಿ ಅವಕಾಶ ಮಾಡಲಾಗಿದೆ. ಗೇಣಿದಾರ ಆ ಭೂಮಿಯನ್ನು ಕೊಂಡುಕೊಳ್ಳುವ ಸಂದರ್ಭದಲ್ಲಿ ಜಮೀನ್ದಾರನಿಗೆ ಕೊಡಬೇಕಾದ ಬೆಲೆಯನ್ನು ನಿಗದಿ ಮಾಡಲು ಅಸಿಸ್ಟೆಂಟ್ ಕಮೀಷನರನ್ನು ಗೊತ್ತುಮಾಡಿದ್ದರು. ಹಾಗೆ ಕೊಡಬೇಕಾದ ಬೆಲೆ ಕಡಮೆಯಾಗಿದ್ದರೆ

(ಶ್ರೀ ಎಸ್. ಗೋಪಾಲಗೌಡ!)

ಅಥವಾ ಹೆಚ್ಚಾಗಿದ್ದರೆ ಷಿಕ್ಮಿದಾರ ಅಥವಾ ಜಮೀನ್ದಾರ ಅಪೀಲು ಹೋಗಬಹುದು. ಈ ಸಂಬಂಧದಲ್ಲಿ ಡಿಸ್ಟ್ರಿಕ್ಟ್ ಜಡ್ಜರವರ ತೀರ್ಮಾನವೇ ಆಖೈರು ಎಂದು ಈ ತಿದ್ದುಪಡಿಯಲ್ಲಿ ಸೂಚಿತವಾಗಿದೆ.

ಶ್ರೀ ಭೀಮಪ್ಪನಾಯಕರು ಸೂಚಿಸಿದ ಕೆಲವು ಅಭಿಪ್ರಾಯಗಳ ಮೇಲೆ ನಾನು ನನ್ನ ಅಭಿಪ್ರಾಯವನ್ನು ಕೊಡಬೇಕೆಂದಿದ್ದೇನೆ. ಅವರು ಒಂದು ವಿಷಯವನ್ನು ಒತ್ತಿ ಒತ್ತಿ ಹೇಳಿದರು. ಈ ಮಾರ್ಪಾಡುಗಳನ್ನೂ ಬದಲಾವಣೆಗಳನ್ನೂ, ಸುಧಾರಣೆಗಳನ್ನೂ ತರುವಾಗ ಇಂಥ ಮಾರ್ಪಾಡುಗಳು, ಸುಧಾರಣೆಗಳು, ಬದಲಾವಣೆಗಳನ್ನು ಸಮಾಜದ ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸಬೇಕೆಂದು ಹೇಳಿದರು. ಸುಧಾರಣೆಗಳು ಸರ್ವವ್ಯಾಪಿಯಾಗಿರಬೇಕು, ಒಂದು ಕ್ಷೇತ್ರದಲ್ಲಿ ಸುಧಾರಣೆಗಳನ್ನು ತಂದು ಬೇರೆ ಕ್ಷೇತ್ರಗಳಲ್ಲಿ ಬಿಡುವುದು discriminatory ಆಗುತ್ತದೆ ಎನ್ನುವುದು ಅವರ ಅಭಿಪ್ರಾಯ. ಈ ಅಭಿಪ್ರಾಯ ಸ್ವಲ್ಪಮಟ್ಟಿಗೆ ಸಾಧುವಾಗಿದ್ದರೂ ಕೂಡ ಭೂಸುಧಾರಣೆಗಳನ್ನು ಜಾರಿಗೆ ತರುವ ಸಂದರ್ಭದಲ್ಲಿ ಇದರ ಹೆಚ್ಚಿನ ಮಹತ್ವ ಮತ್ತು ಪ್ರಾಮುಖ್ಯತೆಯನ್ನರಿತು ಅದಕ್ಕನುಸಾರವಾಗಿ ತುರ್ತಾಗಿ ಜಾರಿಗೆ ತರಬೇಕೆಂಬ ಅಂಶ ಯಾವ ರೀತಿ ನ್ಯಾಯ ಎಂಬುದನ್ನು ಒಂದೆರಡು ಮಾತುಗಳಲ್ಲಿ ಪುಷ್ಟೀಕರಿಸಬೇಕೆಂದಿದ್ದೇನೆ. ನಮ್ಮ ದೇಶ ರೈತರ ದೇಶ. ಬಹು ಜನರ ಜೀವನ ವ್ಯವಸಾಯವನ್ನವಲಂಬಿಸಿದೆ. ಹೀಗಿರುವಾಗ ಉತ್ಪತ್ತಿ ಸಾಧನಗಳಲ್ಲಿ ಬಹಳ ಮುಖ್ಯವಾದುದು ಭೂಸಂಪತ್ತು. ಉತ್ಪತ್ತಿ ಸಾಧನಗಳನ್ನು ನಾವು ರಾಷ್ಟ್ರೀಕರಣ ಅಥವಾ ಸಮಾಜೀಕರಣ ಮಾಡುವ ಸಂದರ್ಭದಲ್ಲಿ ಭೂಮಿಗೆ ಮಹತ್ವಕೊಡುವುದು ಎಲ್ಲ ದೃಷ್ಟಿಯಿಂದಲೂ ನ್ಯಾಯ. ಆದುದರಿಂದಲೇ ಎಲ್ಲ ತಜ್ಞರೂ ಎಲ್ಲ ರಾಜಕೀಯ ಪಕ್ಷಗಳವರೂ, ಆರ್ಥಿಕ ತಜ್ಞರೂ ದೇಶದಲ್ಲಿ ಯಾವ ರೀತಿ ಬಡತನವನ್ನು ಹೋಗಲಾಡಿಸಬೇಕು ಅಥವಾ ಉತ್ಪತ್ತಿಯನ್ನು ಹೆಚ್ಚಿಸಬೇಕು, ಉದ್ಯೋಗವನ್ನು ಹೆಚ್ಚಿಸಬೇಕು ಎಂಬ ಬಗ್ಗೆ ವಿಚಾರಮಾಡಿರುವವರೆಲ್ಲರೂ ಮೊದಲು ಭೂಸಮಸ್ಯೆಯನ್ನು ಬಗೆಹರಿಸುವುದು ಅತ್ಯಗತ್ಯ, ಇದು ಬಗೆಹರಿದರೆ ಬೇರೆ ಅನೇಕ ಸಮಸ್ಯೆಗಳು ತಾವಾಗಿಯೇ ಬಗೆಹರಿಯುತ್ತವೆ ಎಂಬುದನ್ನು ಈಗಾಗಲೇ ಅನೇಕ ಸಂದರ್ಭಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಆದುದರಿಂದ ಮೈಸೂರು ಸಂಸ್ಥಾನದಲ್ಲಿಯೂ ಕೂಡ ಭೂಮಿಗೆ ಸಂಬಂಧಪಟ್ಟ ಹಾಗೆ ಅನೇಕ ಮಾರ್ಪಾಡುಗಳು ಮತ್ತು ಸುಧಾರಣೆಗಳು ಆಗಬೇಕು. ನಮ್ಮ ಸಂಸ್ಥಾನದಲ್ಲಿ ಇನ್ನೊಂದು ಅಭಿಪ್ರಾಯವಿದೆ. ಅದೇನೆಂದರೆ, ಉತ್ತರಪ್ರದೇಶ, ಮದರಾಸು ಮತ್ತು ಇನ್ನೂ ಕೆಲವು ಪ್ರಾಂತ್ಯಗಳಲ್ಲಿರುವಂತೆ ಜಮೀನ್ದಾರಿ ಪದ್ಧತಿ ನಮ್ಮ ಸಂಸ್ಥಾನದಲ್ಲೇನೂ ಇಲ್ಲ, ಇಲ್ಲಿರತಕ್ಕದ್ದು ರೈತವಾರಿ ಪದ್ಧತಿ, ತೀರಾ ದೊಡ್ಡ ಹಿಡುವಳಿದಾರರ ಸಂಖ್ಯೆ ಬಹಳ ಕಡಮೆ, ಆದುದರಿಂದ ಇಲ್ಲಿ ಅಷ್ಟು ತೀವ್ರವಾದ ಭೂಸುಧಾರಣೆ ಅಗತ್ಯವಿಲ್ಲವೆಂದು ಅನೇಕ ಸಂದರ್ಭಗಳಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನನಗಾದರೂ ಹೀಗೆನಿಸುತ್ತದೆ: ನಮ್ಮಲ್ಲಿಯೂ ಕೆಲವು ಜಹಗಿರಿ, ಇನಾಮ್ ಮತ್ತು ಜೋಡಿಗಳನ್ನು ಈಗಾಗಲೇ ಕಾನೂನಿನ ಮೂಲಕ ಸರ್ಕಾರದವರು ತೊಡೆದುಹಾಕಿದ್ದಾರೆ. ಇವುಗಳ ಪ್ರಕಾರ ಬಾಕಿ ಎಲ್ಲಾ ಭೂಮಿಯೂ ರೈತವಾರಿ ಪದ್ಧತಿಯ ಮೇಲೆ ನಡೆದುಕೊಂಡು ಹೋಗುತ್ತಿದ್ದರೂ ಕೂಡ ನಮ್ಮ ಸಂಸ್ಥಾನದಲ್ಲಿ ಈಗ ಗೇಣಿ, ಕೋರು, ಗುತ್ತಿಗೆ ಮುಂತಾದ ಪದ್ಧತಿಗಳು ಬಹಳವಾಗಿವೆ. ಇವುಗಳ ಅಂಕಿಅಂಶಗಳು ನನಗೆ ಗೊತ್ತಿವೆ, ಬೇಕಾದರೆ ನಾಳೆ ಹೇಳುತ್ತೇನೆ, ಈಗ ಇಲ್ಲಿ ನನ್ನಲಿಲ್ಲ. ಮಾನ್ಯ ಸಚಿವರು ಈ ಮಸೂದೆಯನ್ನು ಮಂಡಿಸುತ್ತಾ ಸಭೆಗೆ ಈ ಸಾರಿಯ 1951 ನೆಯ ಸೆನ್ಸಸ್ ಪ್ರಕಾರ ಅಂಕಿಅಂಶಗಳನ್ನು ಕೊಟ್ಟರು. ಅಲ್ಲದೆ ಗುಂಡಪ್ಪಗೌಡರ ಸಮಿತಿಯವರು ಶೇಖರ ಮಾಡಿರತಕ್ಕ ಅಂಕಿಅಂಶಗಳೂ ಇವೆ. ಇವುಗಳ comparative study ಮಾಡಿ ಹೇಳುತ್ತೇನೆ. ಇವುಗಳಿಂದ ಗೇಣಿ ಕಾನೂನು ಅಗತ್ಯ, ಭೂಸುಧಾರಣೆಯ ಅಗತ್ಯತೆ ಇದೆ ಎಂಬುದು ಸ್ಪಷ್ಟವಾಗಿದೆ. ಇಲ್ಲಿ ಉತ್ತರಪ್ರದೇಶದಲ್ಲಿರತಕ್ಕ ಜಮೀನ್ದಾರಿ ಪದ್ಧತಿಯಿಲ್ಲದೇಯಿರಬಹುದು. ಅಥವಾ ಇನ್ನಾವುದೋ ದೇಶದಲ್ಲಿರತಕ್ಕಷ್ಟು ದೊಡ್ಡ ದೊಡ್ಡ ಜಮೀನ್ದಾರರು ಇಲ್ಲದೇಯಿರಬಹುದು. ಆದರೆ ನಮ್ಮಲ್ಲಿ ಒಬ್ಬರ ಜೀವನವನ್ನು ಇನ್ನೊಬ್ಬರ ಜೀವನಕ್ಕೆ, ಗೇಣಿದಾರರ ಜೀವನವನ್ನು ಜಮೀನ್ದಾರರ ಜೀವನಕ್ಕೆ ಅಥವಾ ಜಮೀನ್ ಇರುವವನ ಜೀವನಕ್ಕೆ ಜಮೀನಿಲ್ಲದಿರುವವನ ಜೀವನವನ್ನು ಹೋಲಿಸಿ ನೋಡಿದಾಗ ವ್ಯತ್ಯಾಸ ಕಾಣುತ್ತದೆ; ಈ ರೀತಿ ಇರಬಾರದೆಂದು ಮನಗಾಣುತ್ತೇವೆ. ಆದುದರಿಂದ ನಮ್ಮ ಸಂಸ್ಥಾನದಲ್ಲಿ ಇಂಥ ಒಂದು ಕಾನೂನಿಗೆ ಅವಕಾಶ ಮತ್ತು ಅಗತ್ಯ ಇದೆ ಎಂಬುದನ್ನು ನಾವು ಮನಗಾಣುತ್ತೇವೆ. ಈ ಕಾನೂನು ಈಗ ಜಾರಿಯಲ್ಲಿರತಕ್ಕ ತಾಲ್ಲೂಕುಗಳಲ್ಲಿ ಸಾಮಾನ್ಯವಾಗಿ ಇದರಲ್ಲಿರತಕ್ಕ ಲೋಪದೋಷಗಳನ್ನು ನಾವು ನೋಡಬಹುದಾಗಿದೆ. ಈ ಲೋಪದೋಷಗಳನ್ನು ಕಂಡು ಸರ್ಕಾರದವರು ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ. ಮುಖ್ಯವಾದ ತಿದ್ದುಪಡಿಗಳನ್ನು ಈಗತಾನೇ ಉದಹರಿಸಿದ್ದೇನೆ.

ಶ್ರೀಮಾನ್ ಭೀಮಪ್ಪನಾಯಕರ ಮತ್ತೊಂದು ಭಿನ್ನಾಭಿಪ್ರಾಯವೇನೆಂದರೆ, ಇದರಲ್ಲಿ 'ಸೀಲಿಂಗ್ ಲಿಮಿಟ್' ಗೊತ್ತುಮಾಡುವುದು ಅನುಚಿತವೆಂಬುದು. ಇದು 'ಸೀಲಿಂಗ್ ಲಿಮಿಟ್' ಮಾಡತಕ್ಕ ಮಸೂದೆಯಲ್ಲ. ಈ ಮಸೂದೆಯನ್ನು ಅನೇಕರು ಹೀಗೆ ತಪ್ಪಾಗಿ ತಿಳಿದುಕೊಂಡಿರುವುದು ನನಗೆ ಕಂಡುಬಂದಿದೆ. ಆವಡಿ ಅಧಿವೇಶನದಲ್ಲಿ ಶ್ರೀಮಾನ್ ನೆಹರೂರವರು Socialistic Pattern of Societyಯನ್ನು ಒಪ್ಪಿಕೊಂಡಿದ್ದಾರೆ. ಕಾಂಗ್ರೆಸ್ಸಿನ ಉದ್ದೇಶ ಇದನ್ನು ಜಾರಿಗೆ ತರುವುದು. ಒಪ್ಪಿಕೊಂಡಿರುವ ಇಂಥ ಉದ್ದೇಶವನ್ನು ಕಾರ್ಯಗತಮಾಡಲು ಮೊದಲ ಹೆಜ್ಜೆಯನ್ನು ಇಟ್ಟು ಮೈಸೂರು ಸರ್ಕಾರವಾಗಲಿ ಇತರ ಸರ್ಕಾರಗಳಾಗಲಿ ಹಿಂಜರಿಯುವುದಿಲ್ಲವೆಂದು ನನಗೆ ಕಾಣುತ್ತದೆ. ಅಂತೂ ಇದರಲ್ಲಿ ಹಿಡುವಳಿ ಪರಿಮಿತಿಯನ್ನು ತರುತ್ತಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಇದನ್ನು ತಾವು ಹೇಳುವುದಕ್ಕೆ ಬದಲು ರೆವಿನ್ಯೂ ಮಂತ್ರಿಗಳು ಹೇಳಿದರೆ ಚರ್ಚೆ ಬಹುಮಟ್ಟಿಗೆ ಕಡಮೆಯಾಗುತ್ತದೆ.

Sri Kadidal MANJAPPA.—This Bill provides for fixing permissible holdings in the case of landlords with reference to the lands that are being cultivated by the tenants.

Sri J. MOHAMED IMAM (Jagalur).—I would like to seek a further clarification, Sir.

Mr. SPEAKER.—When one Hon'ble Member is on his legs, another Hon'ble Member cannot go on asking information whenever he thinks fit. It is only

after the Hon'ble Member closes his speech that information may be sought for.

Sri H. K. VEERANNA GOWDH (Maddur).—In order to follow the debate with interest, it would be better if you permit us to put questions then and there so as to base our arguments.

Sri H. M. CHANNABASAPPA.—That is the convention of this House, Sir.

Mr. SPEAKER.—I know that interruptions are allowed only to help Hon'ble Members to make their speeches. But if there is a continuous interruption, neither the Hon'ble Member who will be on his legs can make a continuous speech, nor the Hon'ble Minister will be able to clarify the issues. There will be no continuation of thought. If an Hon'ble Member wants to ask for some information from the member who is making a speech, that can be done. But if information is sought from the Minister, the member cannot proceed with his speech. If every Hon'ble member wants information, the member on his legs can be interrupted for hours together! I have no objection to a member seeking some information from the member who is on his legs.

Sri D. DEVARAJ URS (Hunsur).—As we have understood so far, there is a ceiling limit in the Bill. Whether it applies to the zamindar giving his land to the tenant or retains for cultivating—we come to these later on. That has been clarified. The one point that is under discussion is : one Hon'ble Member says that this Bill does not put a celling limit for the holdings. Shall we take it this way? ಒಬ್ಬ ಮನುಷ್ಯನಿಗೆ 25 ಎಕರೆವರೆಗೆ ಮಾತ್ರ ಇರಬಹುದೆಂದು ಹೇಳುವುದರ ಅರ್ಥ ಇದಕ್ಕಿಂತ ಹೆಚ್ಚು ಇರಬಾರದೆಂದು ಹೇಳುವುದರ ಅರ್ಥ ಎರಡೂ ಒಂದೇ ಎಂದು ನಾವು ತಿಳಿದುಕೊಂಡಿದ್ದೇವೆ. A man is permitted up to 100 acres ಎಂದರೆ a man is not allowed to have more than 100 acres. ಎಂದರ್ಥ. ಎರಡೂ ಒಂದೇ ತಾನೆ? ಇದು permissible holding ಅಥವಾ ಸೀಲಿಂಗ್ ಲಿಮಿಟ್ಟೋ ಎಂದು ತಿಳಿದುಕೊಳ್ಳುವುದಕ್ಕೆ ಅವರನ್ನು ನಾವು ಕೇಳುವುದು.

Mr. SPEAKER.—You can ask that information from the Minister after the Member closes his speech. Do you want that information from the Hon'ble Member?

Sri S. GOPALA GOWDA.—I will give that information, Sir. ಸೀಲಿಂಗ್ ಲಿಮಿಟ್ ಎಂದರೆ, ಒಬ್ಬ ಮನುಷ್ಯನಿಗೆ ಇಷ್ಟು ಎಕರೆಗಳಿಗಿಂತ ಹೆಚ್ಚು ಭೂಮಿ ಇರತಕ್ಕದ್ದಲ್ಲ ಎನ್ನುವ ಅರ್ಥದಲ್ಲಿ ಆ ಶಬ್ದವನ್ನುಪಯೋಗಿಸುತ್ತೇವೆ. ಇಲ್ಲಿ ಒಬ್ಬ ಮನುಷ್ಯನಿಗೆ 25 ಅಥವಾ 100 ಎಕರೆಗಿಂತ ಹೆಚ್ಚು ಭೂಮಿ ಇರತಕ್ಕದ್ದಲ್ಲವೆಂದು ಇದರಲ್ಲಿಲ್ಲ.

2-30 P.M.

ಈ ತಿದ್ದುಪಡಿಯಲ್ಲಿ ಯೋಚನೆ ಮಾಡಿರುವ ಪ್ರಕಾರ ಒಬ್ಬ ಜಮೀನ್ದಾರನಿಗೆ ಸ್ವತಂತ್ರವಾಗಿ ಸಾಗುವಳಿ ಮಾಡಬೇಕು ಎಂದು ಇಷ್ಟ ಬಂದರೆ ಅವನು 25 ಎಕರೆಗಳಷ್ಟು ಭೂಮಿಯನ್ನು ತನ್ನ ಸ್ವಂತ ಸಾಗುವಳಿಗೆ ಇಟ್ಟುಕೊಳ್ಳಬಹುದು. ಅವನ ಕುಟುಂಬದಲ್ಲಿ ಹೆಚ್ಚಿಗೆ ಜನರೂ ಇದ್ದರೆ ಅಂತಹ ನಾಲ್ಕರಷ್ಟು ಅಂದರೆ 100 standard ಎಕರೆಗಳಿಗೆ ಮೀರದಷ್ಟು ಸ್ವಂತ ಸಾಗುವಳಿಗೆ ಇಟ್ಟುಕೊಳ್ಳಬಹುದು ಎಂದಿದೆ. ತನ್ನ ಕುಟುಂಬ ಎಷ್ಟು ದೊಡ್ಡದೇ ಇರಲಿ ಅವನ ಜಮೀನು 100 standard ಎಕರೆಗಳಿಗಿಂತಲೂ ಮೀರಿರಬಾರದು. ಆದರೆ ಅವನ ಹತ್ತಿರ ಇರತಕ್ಕಂಥ 1000 ಎಕರೆ ಭೂಮಿಯನ್ನು ಸರ್ಕಾರ ತೆಗೆದುಕೊಂಡು ರೈತರಿಗೆ ಹಂಚುವುದಕ್ಕೆ ಹೋಗುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಉಳಿದ ಜಮೀನನ್ನು ಏನು ಮಾಡುತ್ತೀರಿ? 100 ಎಕರೆ ಲಿಮಿಟ್! ಆದರೆ ಬಾಕಿ ಉಳಿದ 900 ಎಕರೆಗಳನ್ನು ಏನುಮಾಡಬೇಕೆಂಬುದಾಗಿ ಈ ಮಸೂದೆಯಲ್ಲಿ ಹೇಳಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಒಬ್ಬ ಜಮೀನ್ದಾರನಾಗಿದ್ದು 900 ಎಕರೆಗೆ ಖಾತೇದಾರನಾಗಿದ್ದು 900 ಎಕರೆಯನ್ನು, ತಾನೇ ಸಾಗು ಮಾಡಿದರೆ ಅಥವಾ ಬಂಜರು ಬಿಟ್ಟಿದ್ದರೆ ಆ ಕಾನೂನು ಅವನನ್ನು ಮುಟ್ಟುವುದಿಲ್ಲ. ಆ ಜಮೀನ್ದಾರನ ಅಡಿಯಲ್ಲಿ ಆ ಗೇಣೀದಾರನು ಇದ್ದು ಅವನು ಒಂದು ಕಾರಣದಿಂದ ಸಾಗುಮಾಡದೆ ಇದ್ದರೆ, ಆ ಸಂದರ್ಭದಲ್ಲಿ ಅವನು ಸ್ವಂತ ಸಾಗುಮಾಡುತ್ತೇನೆಂದು ಇಷ್ಟಪಟ್ಟರೆ, 25 standard ಎಕರೆ ಅಥವಾ 100 standard ಎಕರೆಗಳಿಗೆ ಮೀರದಂತೆ ಅವನು ಬಿಡಿಸಿಕೊಳ್ಳಬಹುದು. ಅಂದರೆ 100 ಎಕರೆ ಗೇಣಿಗುತ್ತಿಗೆ ಇಲ್ಲದೆ ಕೋರು ಮಾಡತಕ್ಕಂಥ ಗೇಣೀದಾರರಿಂದ ಬಿಡಿಸಿಕೊಳ್ಳುವುದಕ್ಕೆ ಇದು ಅವಕಾಶ ಕೊಟ್ಟಿದೆ.

ಶ್ರೀ ಎ. ಭೀಮಪ್ಪನಾಯಕ್.—ಅದಕ್ಕೇ ತಾನೇ ನಾವು discriminatory ಎಂದು ಹೇಳುವುದು.

ಶ್ರೀ ಎಸ್. ಗೋಪಾಲಗೌಡ.—ಆದ್ದರಿಂದ ಈಗ ತಾನೇ ನಮ್ಮ ಸ್ನೇಹಿತರು ಹೇಳಿದ ಹಾಗೆ . . . .

Sri S. R. NAGAPPA SETTY (Shimoga).—On a point of information. ಒಬ್ಬ ರೈತನ ಹತ್ತಿರ 1,000 ಎಕರೆ ಇತ್ತು. ಅದರಲ್ಲಿ 100 ಎಕರೆಯನ್ನು ಜಮೀನ್ದಾರನು ಬಿಡಿಸಿಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ ಬಾಕಿ ಉಳಿದ 900 ಎಕರೆಯನ್ನು ರೈತನು ಕೊಂಡುಕೊಳ್ಳುವುದಕ್ಕೆ ಇದರಲ್ಲಿ ಅವಕಾಶವಿದೆಯೇ?

ಶ್ರೀ ಎಸ್. ಗೋಪಾಲಗೌಡ.—ಹಾಗೆ ಕೊಂಡುಕೊಳ್ಳುವುದಕ್ಕೆ ಅವಕಾಶಮಾಡಿಕೊಟ್ಟಿದ್ದಾರೆ. ಆದ್ದರಿಂದ ಶ್ರೀ ಎ. ಭೀಮಪ್ಪನಾಯಕರ ವಾದ, ಎಂದರೆ, ಈ ತಿದ್ದುಪಡಿಯನ್ನು ಈ ಗೇಣೀ ಕಾನೂನಲ್ಲಿ ತರತಕ್ಕದ್ದಲ್ಲ, ಅದಕ್ಕೆ ಬೇರೆ ಒಂದು ಮಸೂದೆಯನ್ನು ತರಬೇಕು ಎಂಬುದು ಅಷ್ಟು ಸಮಂಜಸವಾಗಿಲ್ಲ ಎಂದು

(ಶ್ರೀ ಎಸ್. ಗೋಪಾಲಗೌಡ).

ಮಾತ್ರ ನಾನು ಹೇಳಬಯಸುತ್ತೇನೆ. ಇದರಲ್ಲಿ ಮುಖ್ಯವಾಗಿ ಗೇಣಿಯ ಅವಧಿ 5 ವರ್ಷದಿಂದ 10 ವರ್ಷದವರೆಗೆ ಹೆಚ್ಚಿಸಲ್ಪಟ್ಟಿದೆ. ರೈತರ ಹಿತ ದೃಷ್ಟಿಯಿಂದ ಈ ತಿದ್ದುಪಡಿ ಅವಶ್ಯಕವೆಂದು ನಾನೂ ಕೂಡ ಹೇಳುತ್ತೇನೆ. ಮುಖ್ಯವಾಗಿ ಈ ಸಂದರ್ಭದಲ್ಲಿ ಅವರು 10 ವರ್ಷಗಳಲ್ಲಿಯೇ ಅಲ್ಲ, ಎಲ್ಲಿಯವರೆಗೆ ಗೇಣಿಯನ್ನು ಸುಸೂತ್ರವಾಗಿ ಪವಳಿ ಮಾಡಿಕೊಂಡು ಮತ್ತು ಈ ಭೂಮಿಯನ್ನು ಸರಿಯಾಗಿ ಸಾಗು ಮಾಡಿಕೊಂಡು ಹೋಗುತ್ತಾರೋ ಅಲ್ಲಿಯವರೆಗೂ ಕೂಡ ಅವರು ಗೇಣೀದಾರರಾಗಿ ಉಳಿಯುವುದಾದರೆ ಅವರಿಗೆ ಅವಕಾಶ ಇರಬೇಕೆಂದು ಕೂಡ ಈ ಮಸೂದೆಯಲ್ಲಿ ಒಂದು ಅವಕಾಶ ಕಲ್ಪಿಸಿಕೊಟ್ಟರೆ ಒಳ್ಳೆಯದು. 10 ವರ್ಷಗಳಲ್ಲಿ ಅಲ್ಲ. ಎಲ್ಲಿಯ ತನಕ ಆ ರೀತಿ ಸಲೀಸಾಗಿ ಕೊಟ್ಟುಕೊಂಡು ಆ ಜಮೀನನ್ನು ಸರಿಯಾದ ರೀತಿಯಲ್ಲಿ ಇಟ್ಟುಕೊಂಡು ಸಾಗುಮಾಡಿ ಕೊಂಡು ಹೋಗುತ್ತಾನೋ ಅಲ್ಲಿಯವರೆಗೆ ಅವನಿಗೆ ಭೂಮಿಯನ್ನ ಗೇಣಿಮಾಡಿಕೊಂಡು ಹೋಗುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ನಾನು ತಿಳಿದುಕೊಂಡಿರುವ ಹಾಗೆ ಜಮೀನ್ದಾರರಿಗಾಗಲಿ, ಇತರರಿಗಾಗಲಿ, ಇಂತಹ ತೊಂದರೆಗಳು ಬರಲಾರದ ಹಾಗೆ, ಆತನು ಭೂಮಿಯನ್ನು ತಾನು ಕೊಂಡುಕೊಳ್ಳುವುದಕ್ಕೆ ಇಷ್ಟಪಟ್ಟರೆ ಆಗ ಆ ರೀತಿ ಕೊಂಡುಕೊಳ್ಳುವ ಹಕ್ಕನ್ನು ಈ ಮಸೂದೆಯ ತಿದ್ದುಪಡಿಯಲ್ಲಿ ಸೂಚಿಸಲಾಗಿದೆ. ಹಿಂದೆ ಇದ್ದ ಹಕ್ಕು ಸಾಮಾನ್ಯವಾಗಿ ಜಮೀನ್ದಾರರು ಭೂಮಿಯನ್ನು ಮಾರುವಾಗ ಗೇಣೀದಾರರಿಗೆ ನೋಟೀಸನ್ನು ಕೊಡಬೇಕಾಗಿತ್ತು. ಆ ನೋಟಿಸ್‌ನಲ್ಲಿ ತಾನು ಇಷ್ಟು ಖರೀದಿಗೆ ಇಂತಹ ಭೂಮಿಯನ್ನು ಮಾರುತ್ತೇನೆಂದು ತಿಳಿಸಬೇಕಾಗಿತ್ತು. "11 ನೇ ಕ್ಲಾಸಿನ ತರುವಾಯ ಈ ಕೆಳಗೆ ಕಂಡ ಕ್ಲಾಸನ್ನು ಸೇರಿಸಿಕೊಳ್ಳತಕ್ಕದ್ದು ಅದು ಯಾವುದೆಂದರೆ:

"ಯಾವುದಾದರೂ ಒಂದು ಜಮೀನಿನ ವಿಷಯದಲ್ಲಿ ಒಬ್ಬ ಷಿಕ್ಮಿ ದಾರನು

(*a*) ಆ ಜಮೀನನ್ನು 1951'ನೆ ಇಸವಿಯಲ್ಲಿ ಏಪ್ರಿಲ್ 1ನೇ ತಾರೀಖಿನ ನಿಕಟ ಪೂರ್ವದಲ್ಲಿ ಹಿಂದಿನ 9 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಅವಧಿಯವರೆಗೆ ಅವಿಚ್ಛಿನ್ನವಾಗಿ ತನ್ನ ಹಿಡುವಳಿಯಲ್ಲಿಟ್ಟುಕೊಂಡಿದ್ದರೆ ಮತ್ತು

(*b*) ಅಂಥ ಜಮೀನನ್ನು ಮೇಲ್ಕಂಡ ಅವಧಿಯಲ್ಲಿ ತಾನೇ ಖುದ್ದಾಗಿ ಸಾಗುವಳಿ ಮಾಡಲ್ಪಟ್ಟಿದ್ದರೆ ಅವನು ಒಬ್ಬ ರಕ್ಷಿಸಲ್ಪಟ್ಟ ಷಿಕ್ಮಿಯೆಂದು ಭಾವಿಸಲ್ಪಡ ತಕ್ಕದ್ದು."

ಇದು ಮುಂಬಯಿನ ಗೇಣಿ ಮಸೂದೆಯಲ್ಲಿಯೂ ಇದೆ. ಇದರಿಂದ protected tenants ಕೊಂಡುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದರಲ್ಲಿ protected tenants ಎಂಬುವುದನ್ನು ಮೇಲಿನ ರೀತಿಯಲ್ಲಿ define ಮಾಡಿದ್ದಾರೆ. He will become protected tenant under this provision. ಇದಕ್ಕೆ ಮೂರು ವಿವರಣೆಗಳನ್ನು ಕೊಟ್ಟಿದ್ದಾರೆ. ಎಂಥೆಂಥ ಸಂದರ್ಭದಲ್ಲಿ 10 ವರ್ಷಗಳನ್ನು ಲೆಖ್ಖಹಾಕಬೇಕೆಂದು ವಿವರಣೆಯನ್ನು ಕೊಟ್ಟಿದ್ದಾರೆ. ಅದಾದ ಮೇಲೆ ಕೊಂಡುಕೊಳ್ಳುವುದಕ್ಕೆ ಏನು ನಿಬಂಧನೆಗಳಿವೆ ಎಂಬುದನ್ನು ಹೇಳಿದ್ದಾರೆ. ರಕ್ಷಿಸಲ್ಪಟ್ಟ ಷಿಕ್ಮಿದಾರರ ಮತ್ತು ರಕ್ಷಿಸಲ್ಪಟ್ಟಿಲ್ಲದಿರುವ ಕೆಲವು ಷಿಕ್ಮಿದಾರರ ವಿಶೇಷ ರೀತಿಯ ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟದು.

(1) ಯಾವುದಾದರೂ ಕಾನೂನಿನಲ್ಲಿ ಸಂಪ್ರದಾಯದಲ್ಲಿ ಅಥವಾ ಕರಾರು ಒಪ್ಪಂದದಲ್ಲಿ ವಿರುದ್ಧವಾದುದೇನೇ ಇದ್ದಾಗ್ಯೂ, (6) ನೇ ಉಪ ಪ್ರಕರಣದ ನಿಯಮಗಳಿಗೊಳಪಟ್ಟು ರಕ್ಷಿಸಲ್ಪಟ್ಟ ಷಿಕ್ಮಿದಾರನು ಅಥವಾ ರಕ್ಷಿಸಲ್ಪಟ್ಟಿಲ್ಲದಿರುವ ಷಿಕ್ಮಿದಾರನು ಆಯಾ ಸಂದರ್ಭಾನುಸಾರವಾಗಿ ಆತನು ರಕ್ಷಿಸಲ್ಪಟ್ಟ ಷಿಕ್ಮಿದಾರನಾಗಿ ಅಥವಾ ರಕ್ಷಿಸಲ್ಪಟ್ಟಿಲ್ಲದ ಷಿಕ್ಮಿದಾರನಾಗಿ ಪಡೆದಿದ್ದ ಜಮೀನನ್ನು ಜಮೀನ್ದಾರನಿಂದ ಕೊಂಡುಕೊಳ್ಳಲು ಹಕ್ಕುಳ್ಳವನಾಗಿರತಕ್ಕದು.

(2) ಈ ಉದ್ದೇಶಕ್ಕಾಗಿ ಆಯಾ ಸಂದರ್ಭಾನುಸಾರವಾಗಿ, ರಕ್ಷಿಸಲ್ಪಟ್ಟ ಷಿಕ್ಮಿದಾರನಾಗಲಿ, ಅಥವಾ ರಕ್ಷಿಸಲ್ಪಟ್ಟಿಲ್ಲದಿರುವ ಷಿಕ್ಮಿದಾರನಾಗಲಿ ಜಮೀನಿಗಾಗಿ ತಾನು ಪಾವತಿಮಾಡಲು ಸಿದ್ಧನಾಗಿರುವ ಕಿಮ್ಮತ್ತಿನ ಮೊಬಲಗನ್ನು ಜಮೀನುದಾರನಿಗೆ ಬರವಣಿಗೆಯ ಮೂಲಕ ತಿಳಿಯಪಡಿಸತಕ್ಕುದು.

ಈಗಿರತಕ್ಕಂಥ ಕಾನೂನಿನಲ್ಲಿ ಈ provision ಇಲ್ಲ. ಅವನಿಗೆ ಇಷ್ಟಪಟ್ಟರೆ ಆ ರೀತಿ ತಿಳಿಸಬೇಕು ಆ ರೀತಿ ತಿಳಿಸಿದರೆ ಜಮೀನನ್ನು ಮಾರಬೇಕು ಎನ್ನುವ ಕಾನೂನಿನಲ್ಲಿ ಆ ತಿಳಿವಳಿಕೆಯ ತಾರೀಖಿನಿಂದಾಗಾಯಿತು ಮೂರು ತಿಂಗಳುಗಳ ಕಾಲಾವಧಿಯೊಳಗಾಗಿ ಜಮೀನುದಾರನು ನಿರಾಕರಿಸಿದ್ದೇ ಆದರೆ ಅಥವಾ ಒಪ್ಪಿಕೊಳ್ಳಲು ತಪ್ಪಿದ್ದೇ ಆದರೆ ಆಯಾ ಸಂದರ್ಭಾನುಸಾರ ರಕ್ಷಿಸಲ್ಪಟ್ಟಿರುವ ಷಿಕ್ಮಿದಾರನಾಗಲಿ ಅಥವಾ ರಕ್ಷಿಸಲ್ಪಟ್ಟಿಲ್ಲದಿರುವ ಷಿಕ್ಮಿದಾರನಾಗಲಿ, ಜಮೀನಿನ ವಿಷಯದಲ್ಲಿ ಬಜಾರು ಬೆಲೆಯನ್ನು ಗೊತ್ತುಮಾಡಲು ಅಸಿಸ್ಟೆಂಟ್ ಕಮೀಷನರ್‌ರವರಿಗೆ ಅರ್ಜಿಯನ್ನು ಒಪ್ಪಿಸಬಹುದು. ಇದರಲ್ಲಿ ರೈತರು ಮುಖ್ಯವಾಗಿ protected tenants ಗೇಣಿಗೆ ಪಡೆಯತಕ್ಕಂಥ ಭೂಮಿಯನ್ನು ಕ್ರಮವಾಗಿ ತಮ್ಮ ಭೂಮಿಯನ್ನಾಗಿ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. "Tenants-at-will" ಎಂಬ ವಿಚಾರ ಈ ಮಸೂದೆಯಲ್ಲಿ ಎಲ್ಲಿ ಇದೆ?

ಶ್ರೀ ಕಡಿದಾಳ್ ಮಂಜಪ್ಪ.—ಕ್ಲಾಸ್ 31 (*b*) ನಲ್ಲಿ ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—ಹಾಗೆಯೇ "tenants-at-will" ಆಗಿರತಕ್ಕಂಥವರೂ ಕೂಡ ಈ ತಿದ್ದುಪಡಿ ಪ್ರಕಾರ 1951 ನೇ ಇಸವಿಯ ಹಿಂದೆ 10 ವರ್ಷಗಳು ಕ್ರಮವಾಗಿ ಉಳುಮೆ ಮಾಡುತ್ತಾ ಇರತಕ್ಕಂಥವರು ಕೂಡ ಕೊಂಡುಕೊಳ್ಳುವುದಕ್ಕೆ 31 (*b*) ನಲ್ಲಿ ಅವಕಾಶವನ್ನು ಒದಗಿಸಿಕೊಡಲಾಗಿದೆ. ಇದರಲ್ಲಿ ಗುತ್ತಿಗೆ ವಿಷಯದಲ್ಲಿ ನಾನು ಈ ತಿದ್ದುಪಡಿಯನ್ನು ಅನುಮೋದಿಸುವುದಕ್ಕೆ ಸಾಧ್ಯವಿಲ್ಲ. ಈ ತಿದ್ದುಪಡಿಯಲ್ಲಿ ಗುತ್ತಿಗೆ ಪ್ರಮಾಣವನ್ನು ನಿಗದಿಮಾಡುವ ತಿದ್ದುಪಡಿಯನ್ನು ಏಕೆ ಸೇರಿಸಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಗುತ್ತಿಗೆ ಪ್ರಮಾಣವನ್ನು ನಿಗದಿಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ.

ಶ್ರೀ ಎಸ್. ಗೋಪಾಲಗೌಡ.—ಅದನ್ನು ಸರ್ಕಾರ ಯಾವಾಗ ಮಾಡುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಜಾಗ್ರತೆ ಮಾಡುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ದೇಶಕ್ಕೆ ಬೇಕಾದುದನ್ನು ಮಾಡುತ್ತೀರೋ ಅಥವಾ ಅವರು ಹೇಳಿದಂತೆ ಮಾಡುತ್ತೀರೋ?

ಶ್ರೀ ಕಡಿದಾಳ್ ಮಂಜಪ್ಪ.—ದೇಶಕ್ಕೆ ಬೇಕಾದ್ದನ್ನು ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ರೈತರ ಹಿತದೃಷ್ಟಿಯಿಂದ ಅತಿಮುಖ್ಯವಾದ ಅಂಶವೇನೆಂದರೆ ಅವನಿಗೆ

ತಾನು ಗೇಣಿ ಪಡೆದು, ಉಳುಮೆ ಮಾಡತಕ್ಕಂಥ ಜಮೀನಿನಿಂದ ತನ್ನನ್ನು ಜಮೀನುದಾರರು ವಿನಾ ಕಾರಣ ಹೊರಗೆ ಹಾಕುವುದಿಲ್ಲ ಎನ್ನುವ ಒಂದು ಭರವಸೆ ಬೇಕು. Protected tenants ಅಂದರೆ ಒಬ್ಬನು ಜಮೀನು ಉಳುಮೆಮಾಡುತ್ತಾ ಇದ್ದರೆ ಆತನ ಹಕ್ಕು ಕಾಪಾಡಲ್ಪಟ್ಟಿದೆ, ರಕ್ಷಿಸಲ್ಪಟ್ಟಿದೆ ಎನ್ನುವ ಒಂದು ಆಶ್ವಾಸನೆ ಅವನಿಗೆ ಬೇಕು. ಎರಡನೆಯದಾಗಿ ಅವನು ಉಳುಮೆಮಾಡಿ ಬೆಳೆದಿದ್ದರಲ್ಲಿ ತನ್ನ ಜೀವನಕ್ಕೆ ಸಾಕಾಗುವಷ್ಟು ಮಾತ್ರ ಉಳಿಯುತ್ತದೆ ಎನ್ನುವ ಒಂದು ಭರವಸೆ ಕೂಡ ಷಿಕ್ಮಿದಾರನಿಗೆ ಇರಬೇಕು. ಹಾಗೆ ಮಾಡಿದರೆ ಗೇಣಿಯನ್ನು ಇಷ್ಟು ಪ್ರಮಾಣದಲ್ಲಿ ತಾನು ಜಮೀನ್ದಾರನಿಗೆ ಕೊಡಬೇಕೆನ್ನುವ ಭರವಸೆಯೂ ಕೂಡ ಉಂಟಾಗುತ್ತದೆ. ಈ ಮಸೂದೆಯು ಹಿಂದೆ ಈ ಸಭೆಯಲ್ಲಿ ತರಲ್ಪಟ್ಟಾಗ ಶ್ರೀಮಾನ್ ಚನ್ನಬಸಪ್ಪನವರೂ ಸಹ ಇಲ್ಲಿಯೇ ಇದ್ದರು ಎಂದು ಹೇಳುತ್ತೇನೆ. ಅವರ ವಾದದ ಪ್ರಕಾರ "ಬೆಳೆ ಅಥವಾ ಬೆಳೆಗಳು" ಎಂದು ಇದರಲ್ಲಿ ಸೇರಿಸಲ್ಪಟ್ಟಿತ್ತು. ಅವರು ಅದರ ಬಗ್ಗೆ ಬಹಳ ಒತ್ತಾಯಮಾಡಿದ್ದಾರೆ. ಹೊಲದಲ್ಲಿ ಬೆಳೆದ ಬೆಳೆಗಳಲ್ಲಿ ಅರ್ಧಬರುವುದು ನ್ಯಾಯ. ಮೆಣಸಿನಕಾಯಿ ಅಥವಾ ಇನ್ನೂ ಯಾವುದೇ ಬೆಳೆಯನ್ನು ಬೆಳೆಯಲ್ಲಿ ಅದರಲ್ಲಿ ಅರ್ಧ ಬೆಳೆಯು ಜಮೀನ್ದಾರನಿಗೆ ಬರಬೇಕು ಎಂಬುದನ್ನು ಈ ಸಭೆಯ ಮುಂದಿಟ್ಟು, ಈ ಮಸೂದೆ ಆಗ ಆ ಕಾಲದಲ್ಲಿ "ಬೆಳೆ ಅಥವಾ ಬೆಳೆಗಳು" ಎಂಬ ಶಬ್ದಗಳನ್ನು ಆ ಕಾನೂನಿನಲ್ಲಿ ಸೇರಿಸಿದರು. ಅದು ತಪ್ಪೆಂದು ನಾನು ಹೇಳುವುದಿಲ್ಲ. ಏಕೆಂದರೆ, ನಮ್ಮ ದೇಶದಲ್ಲಿ ಎರಡು ತರಹ ಪ್ರಾಂತ್ಯಗಳಿವೆ; ಒಂದು ಮಲೆನಾಡು, ಇನ್ನೊಂದು ಬಯಲು ಸೀಮೆ. ಸ್ಥೂಲವಾಗಿ ಈ ರೀತಿ ಎರಡು ಭಾಗಮಾಡಿದ್ದೇವೆ. ಇದಲ್ಲದೆ, ಯಾವಾಗ್ಲೂ ಕ್ಷಾಮಕ್ಕೆ ಈಡಾಗುವ ಪ್ರದೇಶ, ಇರಿಗೇಷನ್ ಮುಖಾಂತರ ಹೆಚ್ಚು ವ್ಯವಸಾಯ ನಡೆಸುವ ಪ್ರದೇಶ ಎಂದೂ ಬೇರೆ ಬೇರೆ ರೀತಿಯಲ್ಲಿ ವಿಂಗಡಿಸಬಹುದು. ಆದರೆ ಸಾಮಾನ್ಯವಾಗಿ ಬರೀ ಬತ್ತವನ್ನೇ ಹೆಚ್ಚಾಗಿ, ಜೊತೆಗೆ ಅಲ್ಪ ಸ್ವಲ್ಪ ಅಡಕೆ, ಕಬ್ಬು ಬೆಳೆಯುತಕ್ಕ ಪ್ರಾಂತ್ಯವೆಂದರೆ ಅದು ಮಲೆನಾಡು. ಬೇರೆ ಕಡೆಗಳಲ್ಲಿ ಗೋಧಿ, ಜೋಳ, ಕಬ್ಬು ಮತ್ತು ಇನ್ನೂ ಅನೇಕ ಕಾಳು ಕಡ್ಡಿಗಳನ್ನೆಲ್ಲಾ ಬೆಳೆಯುತ್ತಾರೆ. ಹೀಗಿರುವಾಗ ಈ ಆಕ್ಟಿನಲ್ಲಿ ಹೇಳಿರುವುದನ್ನು ನೋಡಿದರೆ, ಈ ಪ್ರದೇಶದಲ್ಲಿ ಷಿಕ್ಮಿಯಾದವರು ಬೆಳೆದರೆ ಬತ್ತ ಬೆಳೆಯಬೇಕು, ಏಕೆಂದರೆ ಆವಾಗಲೇ ಜಮೀನ್ದಾರನಿಗೆ ಗೇಣಿ ಕೊಡಬಹುದು, ಬಾಕಿ ಬೆಳೆ ಬೆಳೆದಾಗ ಏನೂ ಜಮೀನ್ದಾರನಿಗೆ ಸಲ್ಲಬಾರದು ಎಂದು ಹೇಳಿದೆ. ಇದನ್ನು ನಾನು ಒಪ್ಪುವುದಿಲ್ಲ. ಶ್ರೀಮಾನ್ ಚನ್ನಬಸಪ್ಪನವರು crop or crops ಎಂದು ಇರಬೇಕೆಂದು ವಾದಿಸಿ ಎಲ್ಲದರಲ್ಲೂ ಸಮ ಅರ್ಧಕೊಡುವಂತಿರಬೇಕೆಂದು ವಾದ ಮಾಡಿದ್ದಾರೆ. ಒಂದು ದೃಷ್ಟಿಯಿಂದ ಅದೂ ಸಮಂಜಸವೇ. ಮಲೆನಾಡಿಗೆ ಈ ಕಾನೂನು ಅನ್ವಯಿಸಿತು ಎಂದು ಹೇಳಿದಾಗ ನಾವು ಬಹಳ ಕಳವಳಗೊಂಡಿದ್ದೇವು. ಏಕೆಂದರೆ, ನಮ್ಮಲ್ಲಿ ಈಗಲೂ ಕೂಡ ಕೆಲವು ಜಮೀನ್ದಾರರಿದ್ದಾರೆ ; ಅವರು ಬತ್ತದ ಫಸಲಿನ ಜೊತೆಯಲ್ಲಿ ಹುಲ್ಲನ್ನೂ ಕೊಡಬೇಕೆಂದು ವಾದ ಮಾಡುತ್ತಾರೆ.

ಒಬ್ಬ ಸದಸ್ಯರು.—ವಾರ ಅಂದರೆ ಹಾಗೆಯೇ.

ಶ್ರೀ ಎಸ್. ಗೋಪಾಲಗೌಡ.—ಗೇಣಿಯಲ್ಲೂ ಅದೇ ರೀತಿ ಮಾಡುವವರಿದ್ದಾರೆ. ಆದರೆ ನಮ್ಮಲ್ಲಿ ಸಾಮಾನ್ಯವಾಗಿ ಗೇಣಿ ಮಾಡುವವರು ಹುಲ್ಲನ್ನು ಕೊಡುವುದಿಲ್ಲ. ಈ ಸಂದರ್ಭದಲ್ಲಿ ಬೆಳೆ ಅಥವಾ ಬೆಳೆಗಳಲ್ಲಿ ಅರ್ಧಭಾಗ ಬರಬೇಕೆಂದಿದ್ದುದನ್ನು ಯಾವ ರೀತಿ ತಿದ್ದುಪಡಿ ಮಾಡಿದೆ ಎಂದರೆ, "ಮೂಲ ಆಕ್ಟಿನ ಆರನೆಯ ಪ್ರಕರಣದಲ್ಲಿ 'ಬೆಳೆ' ಅಥವಾ 'ಬೆಳೆಗಳು' ಎಂದಿರುವ ಪದಕ್ಕೆ ಬದಲಾಗಿ 'ಮುಖ್ಯವಾದ ಫಸಲು' ಎಂದು ಸೇರಿಸತಕ್ಕದು" ಎಂದು ಹೇಳಿದೆ. ರೈತರ ಹಿತದೃಷ್ಟಿಯಿಂದ ಇದು ಅನುಕೂಲವಾಗಿದೆ. ಆದರೆ, ಇದೇ ಸಂದರ್ಭದಲ್ಲಿ ಎಷ್ಟು ಕೊಡಬೇಕು ಎಂಬುದನ್ನು ಸರ್ಕಾರದವರು ತಾವೇ ಗೊತ್ತುಮಾಡುವುದಾಗಿ ಹೇಳುತ್ತಾರೆ. ರೈತರಿಗೆ ಮೊದಲು ಮುಖ್ಯವಾಗಿ ಕೊಡಬೇಕಾದ್ದು protection of tenancy. ಎರಡನೆಯದಾಗಿ ತನಗೆ ಮತ್ತು ಹೆಂಡತಿ ಮಕ್ಕಳಿಗೆ ಜೀವನಕ್ಕೆ ಸಾಕಾದಷ್ಟು ದವಸ ಉಳಿಯುತ್ತಿದೆ ಎಂಬ ಭರವಸೆ ಕೊಡಬೇಕು. ಈ ಭರವಸೆಯನ್ನು ಈಗ ತಾವು ರೈತನಿಗೆ ಕೊಡುತ್ತಿಲ್ಲ. ಜಮೀನ್ದಾರನಿಗೆ ಎಷ್ಟು ಭಾಗ ಸಿಕ್ಕಬೇಕು, ಅದು 40ನೆಯ ಅಂಶವೇ, 50ನೆಯ ಅಂಶವೇ 30ನೆಯ ಅಂಶವೇ, ಎಷ್ಟು, ಎಂಬುದು ಈಗಲೇ ನಿರ್ಧಾರವಾಗಬೇಕು. ಇದನ್ನು ಸರ್ಕಾರದವರು ತಾವೇ ಮಾಡುತ್ತೇವೆ ಎಂದು ಹೇಳುವ ವಾದವನ್ನು ನಾನು ಒಪ್ಪುವುದಿಲ್ಲ. ಸರ್ಕಾರದವರು ಶೇಕಡ ಎಷ್ಟು ಭಾಗದಷ್ಟು ರೈತರ ಹಿತರಕ್ಷಣೆ ಮಾಡುವುದಕ್ಕೆ ಹೊರಟಿದ್ದಾರೆ ಎಂಬುದನ್ನು ಇಲ್ಲೇ ಸ್ಪಷ್ಟಪಡಿಸಬೇಕು. ಶ್ರೀಮಾನ್ ಮಂಜಪ್ಪನವರು ಮಲೆನಾಡಿನ ಕಡೆ ಪ್ರವಾಸ ಮಾಡಬೇಕೆಂದು ಬಂದಾಗಲೆಲ್ಲಾ 'ನಾನು 1/3 ಭಾಗ ಗೇಣಿ ಎಂದು ಗೊತ್ತುಮಾಡಿದ್ದೇನೆ' ಎಂದು ಹೇಳಿಕೊಂಡು ಓಡಾಡುವುದು ! ಅಲ್ಲಿ ವಾಸ್ತವವಾಗಿ ಬೆಳೆದದ್ದರಲ್ಲಿ ಶೇಕಡ 60 ಶೇಕಡ 70 ರವರೆಗೂ ತೆಗೆದುಕೊಳ್ಳುವವರೂ ಇದ್ದಾರೆ.

Sri Kadidal MANJAPPA.—On a point of clarification, Sir. Under Section 6, the Government have a right to fix the lower maximum in the case of certain areas. Accordingly in some parts of Malnad, one-third is being prescribed as upper limit. That is the notification issued nearly $1\frac{1}{2}$ years ago.

Mr. SPEAKER.—You may simply explain the provisions of the law.

Sri S. GOPALA GOWDA.—Yes, that is what I am doing, Sir.

Mr. SPEAKER.—Government have enforced the Weights and Measures Act throughout the State.

Sri Kadidal MANJAPPA.—Yes, that has been enforced, Sir.

ಶ್ರೀ ಎಸ್. ಗೋಪಾಲಗೌಡ.—ಆ ನೋಟಿಫಿಕೇಷನ್ ಆಧಾರದಮೇಲೆಯೇ ಕಂದಾಯದ ಮಂತ್ರಿಗಳು ಆರೀತಿ ಹೇಳುತ್ತಿದ್ದಾರೆ, ನಿಜ. ಆದರೆ ನಾನು ಹೇಳುತ್ತಿರುವುದು, ತಾವು ಈ ರೀತಿ ಹೆಚ್ಚು-ಕಡಮೆ ಮಾಡತಕ್ಕ ಅಧಿಕಾರವನ್ನು ಇಟ್ಟುಕೊಳ್ಳುವುದಕ್ಕೆ ಬದಲಾಗಿ ಕಾನೂನಿನಲ್ಲೇ ಸ್ಪಷ್ಟಪಡಿಸಿ. ಇದು ಬಹಳ ಮುಖ್ಯ. ಏಕೆಂದರೆ, ರೂಲ್ಸಿನಲ್ಲಿ ಈ ರೀತಿ ಹೆಚ್ಚು-ಕಡಿಮೆ ಮಾಡುವ ಅಧಿಕಾರ ಇಟ್ಟುಕೊಳ್ಳುವುದರಿಂದ . . . .

ಶ್ರೀ ಕಡಿದಾಳ್ ಮಂಜಪ್ಪ.—ಹೆಚ್ಚು ಮಾಡುವುದಕ್ಕೆ ಅಧಿಕಾರವಿಲ್ಲ, ಮಾಡುವುದೂ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ನಾನೇಕೆ ಹೇಳುತ್ತೇನೆಂದರೆ, ಸಾಮಾನ್ಯವಾಗಿ ಎಲ್ಲಾ ಕಾನೂನು

(ಶ್ರೀ ಎಸ್. ಗೋಪಾಲಗೌಡ.)

ಗಳಂತೆ ಈ ಟೆನೆನ್ಸಿ ಕಾನೂನೂ ಕೋರ್ಟಿನವುಂದೆ ಹೋಗಬಹುದು. ಕಾನೂನಿದ್ದರೆ ಎಲ್ಲರಿಗೂ ಗೊತ್ತಿರುತ್ತದೆ, ಸುಲಭವಾಗಿ ಕೋರ್ಟಿನ ಗಮನಕ್ಕೆ ತರಬಹುದು. ಅದಿಲ್ಲದೆ ಆ ಪ್ರದೇಶಕ್ಕೆ ಅನ್ವಯಿಸುವಂತೆ ಒಂದು ಸರ್ಕ್ಯುಲರ್ ಇದೆಯೆಂದರೆ ಅದು ಎಲ್ಲರಿಗೂ ಗೊತ್ತಿರಲಾರದು. ಈ ದೃಷ್ಟಿಯಿಂದ ಇದು ಬಹಳ ಮುಖ್ಯ. ಕಾನೂನಿನಲ್ಲೇ ನಮೂದುಮಾಡಿ ರೈತರ ವಿಷಯದಲ್ಲಿ ಎಷ್ಟು ಅಂಶ ಮುಂದೆ ಹೋಗುವುದಕ್ಕೆ ಸಾಧ್ಯವೋ ಅಷ್ಟು ಹೋಗಿ ಮಾನ್ಯ ಕಂದಾಯ ಮಂತ್ರಿಗಳು 1/3 ಭಾಗ ಎಂದು ಗೊತ್ತು ಮಾಡಿದ್ದೇವೆ, 1/4 ಭಾಗ ಎಂದು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಮಾಡುವುದಿದ್ದರೆ ಮಲೆನಾಡಿಗೆ 1/6 ಭಾಗ ಎಂದು ಮಾಡಿ. ಬಯಲು ಸೀಮೆಗೆ 1/5 ಭಾಗ ಎಂದು ಮಾಡಿ. ಮುಂಬೈ ಪ್ರಾಂತ್ಯದಲ್ಲ 1/6 ಭಾಗವಿದೆ. ಇಲ್ಲಿಯೂ ಶಿವಪ್ಪನಾಯಕನ ಕಾಲದಲ್ಲಿ 1/8 ಭಾಗ ಎಂದು ಮಾತ್ರ ಇದೆ. ಬರೀ ಕಂದಾಯಕ್ಕಾಗಿ ಕೊಡುವ ಕಾಲವೂ ಇತ್ತು. ಹಿಂದಿನ ಚರಿತ್ರೆಯ ವಿಷಯವನ್ನು ಈಗ ಹೇಳುತ್ತಾ ಹೋದರೆ ಅಷ್ಟೊಂದು ಪ್ರಯೋಜನವಾಗಲಾರದು. ಮುಖ್ಯವಾಗಿ ಆಯಾ ಪ್ರದೇಶದ ಪರಿಸ್ಥಿತಿಯನ್ನು ನೋಡಿಯಾದರೂ ಗೊತ್ತುಮಾಡಿ. ನಾನಾದರೋ ಸಾಗರದಿಂದ ಬಂದವನಾಗಿ ಅಲ್ಲಿನ ಪರಿಸ್ಥಿತಿಯನ್ನು ಹೇಳಬಲ್ಲೆ. ಸಾಗರದ ಪಕ್ಕದಲ್ಲಿರುವ ಸಿದ್ದಾಪುರದಲ್ಲಿ 1/6 ಭಾಗವಿದೆ. ಪ್ರತಿದಿನ ಸಂತೆಗೆ ಹೋದಾಗ ಬಂದಾಗ ಅಲ್ಲಿನ ರೈತರೂ ಇಲ್ಲಿನ ರೈತರೂ ಮಾತಾಡಿಕೊಳ್ಳುತ್ತಿರುತ್ತಾರೆ. ಇದು ನಮ್ಮ ದೇಶದ ಆ ಪ್ರಾಂತ್ಯದಲ್ಲಿ ಹೆಚ್ಚಿನ ಪ್ರಭಾವವನ್ನು ಉಂಟು ಮಾಡಿದೆ. ಆದ್ದರಿಂದ ಅಲ್ಲಿನಂತೆ 1/6 ಭಾಗ ಮಾಡುವುದರಿಂದ ಜಮೀನ್ದಾರರಿಗೆ ಅಷ್ಟೇನೂ ತೊಂದರೆಯಾಗುವುದಿಲ್ಲ. ರೈತರಿಗೆ ತುಂಬ ಅನುಕೂಲ ಮಾಡಿದಂತಾಗುತ್ತದೆ. ಈ ಪ್ರಕಾರವೂ ಜಮೀನ್ದಾರನಿಗೆ ಸಲ್ಲುವುದೆಷ್ಟೆಂಬುದನ್ನು ನೋಡುವುದಾದರೆ, ಒಬ್ಬ ರೈತ 6 ಪಲ್ಲ ಬೆಳೆದರೆ ಒಂದು ಪಲ್ಲವನ್ನು ಜಮೀನ್ದಾರನಿಗೆ ಕೊಡುತ್ತಾನೆ. ಇವೊತ್ತಿನ ಧಾರಣೆಯ ಪ್ರಕಾರ 20 ರೂಪಾಯಿಗಳಾಯಿತು. ಅಲ್ಲಿಗೂ ಸರ್ಕಾರಿ ಕಂದಾಯಕ್ಕೆ ಎರಡರಷ್ಟು, ಮೂರರಷ್ಟು ಹೆಚ್ಚೇ ಆದಂತಾಯಿತು. ಒಟ್ಟಿನಲ್ಲಿ ಉದ್ದೇಶವೇನೆಂದರೆ, ಕ್ರಮೇಣ absentee landlordship ಹೋಗಬೇಕು. ಈಗ ಸಾಮಾನ್ಯವಾಗಿ ದೊಡ್ಡ ಮನುಷ್ಯರು ಭೂಮಿಯನ್ನು ಏಕೆ ಕೊಳ್ಳುತ್ತಾರೆಂದರೆ, ಗೇಣಿ ಬರುತ್ತದೆ ಎಂಬ ನಿರೀಕ್ಷೆಯಿಂದ ಅವರು ಕೊಂಡುಕೊಳ್ಳಬೇಕಾದರೂ ಮೊದಲು ಆ ಜಮೀನಿನಲ್ಲಿ ಗೇಣಿ ಎಷ್ಟು ಬರುತ್ತದೆ ಎಂದು ಕೇಳುತ್ತಾರೆ, ಅದರಮೇಲೆ ಬಡ್ಡಿಲೆಕ್ಕ ಹಾಕುತ್ತಾರೆ. ಅದಕ್ಕನುಸಾರವಾಗಿ ಐದು ಸಾವಿರವೋ, ಹತ್ತು ಸಾವಿರವೋ ಕೊಡುವುದಕ್ಕೆ ಒಪ್ಪಿಕೊಳ್ಳುತ್ತಾರೆ. ಹೀಗಾಗಿ ತಾಲ್ಲೂಕೆಲ್ಲವನ್ನೂ ಕೆಲವೇಜನ ದೊಡ್ಡಮನುಷ್ಯರು ಬರೆಸಿಟ್ಟುಕೊಂಡಿದ್ದಾರೆ. ಈ ಜನ ಇತ್ತೀಚೆಗೆ, ಬತ್ತ 20 ರೂಪಾಯಿ, ಅಡಿಕೆ 40 ರೂಪಾಯಿಗಳಾದಮೇಲೆ ಬಹಳ ದುಡ್ಡು ಸಂಪಾದನೆ ಮಾಡಿಕೊಂಡಿದ್ದಾರೆ. ಇತ್ತಲಾಗಿ, ರೈತರಿಗೆ ಎಷ್ಟು ಕಷ್ಟದೆಶೆಯುಂಟಾಯಿತೆಂಬುದನ್ನು ಹೇಳಬೇಕಾಗಿಲ್ಲ. ಆತನಿಗೆ ಇಂದು ಎಷ್ಟು ದುಡಿದರೂ ಪ್ರತಿವರ್ಷವೂ ಕೊನೆಯ ಎರಡು ತಿಂಗಳ ಊಟಕ್ಕೆ ಕೊರತೆ ಬೀಳುತ್ತದೆ. ಗೌರಿ ಹಬ್ಬದ ಹೊತ್ತಿಗೆ ಅನೇಕರಲ್ಲಿ ಬತ್ತ ಮುಗಿದು ಹೋಗಿರುತ್ತದೆ. ಅಲ್ಲಿಂದ ಮುಂದೆ ಆತ ಕೊಂಡುಕೊಳ್ಳಬೇಕು. ಆಗ ಧಾರಣೆಯೂ ಏರಿ 25 ರೂಪಾಯಿಯಾಗಿರುತ್ತದೆ. ಕೊಂಡುಕೊಳ್ಳುವುದಕ್ಕೂ ಅವನಲ್ಲಿ ದುಡ್ಡಿರುವುದಿಲ್ಲ. ಮತ್ತೆ ಅದೇ ಜಮೀನ್ದಾರರ ಹತ್ತಿರ ಹೋಗಿ 'ಹುಲ' (ಸಾಲ) ತರಬೇಕು. 'ಹುಲ' ಎಂಬುದರ ಅರ್ಥವೇನೆಂದರೆ, ಜಮೀನ್ದಾರನು ಆ ಕಾಲದಲ್ಲಿ ಕೊಟ್ಟ ಒಂದು ಖಂಡಗ ದವಸಕ್ಕೆ ಮುಂದೆ ಸುಗ್ಗಿಯಲ್ಲಿ $1\frac{1}{2}$ ಖಂಡಗ ವಾಪಸ್ಸು ಕೊಡುವುದು. ಈ ಪದ್ಧತಿಗೆ ಅವನೇಕೆ ಒಪ್ಪಿಕೊಳ್ಳುತ್ತಾನೆಂದರೆ, ನಾನಾಗಲೇ ಹೇಳಿದಹಾಗೆ, ಅವನಲ್ಲಿ ದುಡ್ಡಿಲ್ಲ. ಅದೇ ಜಮೀನ್ದಾರನ ಹತ್ತಿರ ಹೋಗಿ ತರುವುದು ಮತ್ತೆ ವಾಪಸ್ಸು ಕೊಡುವುದು, ಮತ್ತೆ ತರುವುದು—ಇದೇ ಗೇಣಿದಾರನ ಬದುಕು ! ಆ ಸಮಯಕ್ಕೆ ಸರಿಯಾಗಿ ಜಮೀನ್ದಾರನ ಮನೆಯಲ್ಲಿನ ಕೊಳಗಗಳೂ ದೊಡ್ಡದಾಗಿಬಿಡುತ್ತವೆ ! ಮಂತ್ರಿಗಳೇನೋ ಇಲ್ಲಿ ಹೇಳುತ್ತಾರೆ, ಪಲ್ಲಾ ಎಂದರೆ 100 ಸೇರು; ಮಣಕ್ಕೆ 40 ಸೇರು ಎಂದು ಗೊತ್ತುಮಾಡಿದೆ ಎಂದು. ಆದರೆ ಹಳ್ಳಿಗಳಲ್ಲಿರುವುದು ಕ್ರಮವಾಗಿ ಮೊದಲಿನ ಹಿತ್ತಾಳೆ ಅಥವಾ ತಾಮ್ರದ ಕೊಳಗಗಳೇ ! ಕೊಳಗವೆಂಬುದು $2\frac{1}{2}$ ಸೇರು ಇರಬೇಕಾದ್ದು, ಪೂರಾ $2\frac{3}{4}$ ಸೇರು,—ಮೂರು ಸೇರಿನವರೆಗೂ ಆಗಿಬಿಡುತ್ತದೆ. ಅಂಥ ಕೊಳಗದಲ್ಲಿ ಪಲ್ಲಾ ಅಳೆಸಿಬಿಡುತ್ತಾರೆ. ಅಲ್ಲಿಗೆ, 7 ಖಂಡಗ ಅಳೆದರೆ, 8 ಖಂಡಗ ಆಗುತ್ತವೆ.

Sri Kadidal MANJAPPA.—I would like to draw the attention of the Hon'ble Member to Section 8 of the Act that is now in force.

Sri S. GOPALA GOWDA.—

"8. Notwithstanding any agreement, usage, decree or order of a court or any law, the rent payable in kind or as a crop share by a tenant for the lease of any land, shall be specified, in the case of any commodity usually calculated.—

(i) by measure, in terms of the standard palla of one hundred seers, or

(ii) by weight, in terms of the sixty standard maund of nine hundred and tolas ;

and no landlord shall recover or receive rent calculated in any manner other than that specified in this section"

ಶ್ರೀ ಎಸ್. ಗೋಪಾಲಗೌಡ.—ಯಾರೂ ಪೈಲು ಸೇರಿಗಿಂತ ದೊಡ್ಡ ಸೇರಿನಲ್ಲಿ ಅಳೆಸಬಾರದು, ಮಣಕ್ಕೆ 40 ಸೇರಿಗಿಂತ ಹೆಚ್ಚಿಗೆ ತೆಗೆದುಕೊಳ್ಳಕೂಡದು ಎಂದು ಹೇಳಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಹೇಳಿದ ಆ ಆಕ್ಟಿನ 8ನೆಯ ಸೆಕ್ಷನ್ನು ಜಾರಿಯಲ್ಲಿಲ್ಲ, ಕಾರ್ಯತಃ ಅನುಸರಿಸಲ್ಪಟ್ಟಿಲ್ಲ. ಈ ವಿಷಯವನ್ನು ನಾನೇನೂ ಕಂದಾಯದ ಮಂತ್ರಿಗಳಿಗೆ ಹೊಸದಾಗಿ ಹೇಳಬೇಕಾಗಿಲ್ಲ. ಅದೇ ಹಳೆಯ ಕೊಳಗ, ಅದೇ ಹಳೆಯ ಖಂಡುಗ ಈಗಲೂ ಇದೆ ! ನಮ್ಮ ಮಲೆನಾಡಿನ ಕಡೆ ಇನ್ನೊಂದು ವಿಚಿತ್ರವೆಂದರೆ, ಒಂದು ಎಕರೆಗೆ ಎಷ್ಟು ಗುಂಟೆ ಇರಬೇಕೋ ಅಷ್ಟು ಗುಂಟೆಗಳು ಕೂಡ ಅನೇಕ ಜಮೀನುಗಳ ವಿಷಯದಲ್ಲಿ ನಿಗದಿಯಾಗಿಲ್ಲ. ಈ ಪ್ರಕಾರವೆಲ್ಲಾ ಮಾಡಿ, ಒಂದು ಎಕರೆಗೆ ಮೂರು ಖಂಡುಗ ಮಾಡಿಕೊಳ್ಳುತ್ತಾರೆ !

The House adjourned for Lunch at Three of the Clock and reassembed at Thirty Minutes past Three of the Clock.

[MR. SPEAKER in the Chair.]

ಶ್ರೀ ಎಸ್. ಗೋಪಾಲಗೌಡ.—ಈ ಗೇಣಿ ಎಷ್ಟಿರಬೇಕೆಂಬ ಅಂಶವನ್ನು ಈ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕೆಂಬುದನ್ನು ಒತ್ತಾಯ ಪೂರ್ವಕವಾಗಿ ನಾನು ಹೇಳಬಯಸುತ್ತೇನೆ.

ಇನ್ನೊಂದು ಕಾರಣವೇನೆಂದರೆ— ಈಗಿರುವ ಕಾನೂನಿನಲ್ಲಿ ಗೇಣಿ 'ಅರ್ಧಕ್ಕೆ ಮೀರದಂತೆ' ಎಂದಿದೆ. ಆದರೆ ಈ 'ಅರ್ಧಕ್ಕೆ ಮೀರದಂತೆ' ಎಂಬುದಕ್ಕೆ ಪ್ರತಿಯಾಗಿ 'ಆರನೆಯ ಒಂದು ಅಂಶಕ್ಕೆ ಮೀರದಂತೆ' ಎಂದು ಬರೆಯುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

ಈ 8ನೆಯ ಕ್ಲಾಜಿನಲ್ಲಿ ಪಲ್ಲ-ಮಣ ಇತ್ಯಾದಿಗಳಿಂದ ಗೇಣಿಯನ್ನು ನಿಗದಿ ಮಾಡಿದ್ದರೂ ಕೂಡ ಈಗ ಹಾಲಿ ಅಭ್ಯಾಸದಲ್ಲಿರುವ ಪ್ರಕಾರ ಈ ನಿಯಮಾವಳಿಯನ್ನೂ ಜಮೀನ್ದಾರರು ಸರಿಯಾಗಿ ಅನುಸರಿಸುವುದಿಲ್ಲ. ಇನ್ನೂ ಒಂದು ಏನೆಂದರೆ ಕರಾರನ್ನು ಬರೆಸಿಕೊಳ್ಳುವಾಗ ಆ ಕರಾರಿನಲ್ಲಿ 10 ಸೇರಿನ ಮಣ, 11 ಸೇರಿನ ಮಣ ಎಂದು ಬರೆಸಿಬಿಟ್ಟಿದ್ದಾರೆ. ಹೀಗೆ ಬರೆಸಿಕೊಂಡುಬಿಟ್ಟಿರುವುದು ಕಾಂಟ್ರಾಕ್ಟ್ ಆಕ್ಟ್ ಪ್ರಕಾರ ಇರುವುದರಿಂದ ಇದನ್ನು ಯಾವ ರೀತಿಯಲ್ಲಿ ಕಡಮೆ ಮಾಡುವುದಕ್ಕೂ ಸಾಧ್ಯವಿಲ್ಲ. ಈಗ ಅಂತೂ ಅವರೆಲ್ಲಾ, ನಮ್ಮ ಮಲೆನಾಡಿನಲ್ಲಿ, ಕಾನೂನಿನಲ್ಲಿರುವುದನ್ನು ಜಾರಿಗೆ ತರದೆ, ಇದೇ ರೀತಿ ಅಳೆಸುತ್ತಿದ್ದಾರೆ. ಆ ಕರಾರು ಪ್ರಕಾರ ಎಷ್ಟು ಗೇಣಿ ಬರಬೇಕಾಗಿರುತ್ತದೆ ಎಂದರೆ 10 ಮಣಗಳು ಬರಬೇಕೆಂದು ಇರುತ್ತದೆ. ಆದರೆ ಕರಾರು ಬರೆಯುವಾಗ 11 ಸೇರಿನ 10 ಮಣ ಎಂದು ಬರೆದಿರುವುದರಿಂದ ಪ್ರತಿಯೊಂದು ಮಣಕ್ಕೂ ಒಂದೊಂದು ಸೇರಿನಂತೆ 10 ಮಣಗಳ ಗೇಣಿಯು ಜಮೀನ್ದಾರನಿಗೆ ಸಂದಾಯವಾದ ಮೇಲೂ ಆತನು ಇನ್ನೂ 10 ಸೇರು ಬಾಕಿ ಇರುತ್ತದೆಂದು ಲೆಕ್ಕದಲ್ಲಿ ಬರೆದಿಡುತ್ತಾನೆ. ನನಗೆ ಗೊತ್ತಾಗಿರುವ ಪ್ರಕಾರ ಈ ರೀತಿಯಾಗಿ ಅನೇಕರು ತಮ್ಮ ತಮ್ಮ ಲೆಕ್ಕದ ಪುಸ್ತಕಗಳಲ್ಲಿ ಇಷ್ಟಿಷ್ಟು ಬಾಕಿ ಬರಬೇಕೆಂದು ಬರೆದುಕೊಂಡು ಹೋಗುತ್ತಿರುತ್ತಾರೆ. ಬಾಕಿ ಯಾವ ಕಾನೂನಿನಲ್ಲಿ ಏನೇ ಹೇಳಿರಲಿ, ಕಾಂಟ್ರಾಕ್ಟ್ ಆಕ್ಟ್ ಪ್ರಕಾರ ಆ ಕರಾರುಗಳನ್ನು ಅವರು ಬರೆಸಿಟ್ಟುಕೊಳ್ಳುತ್ತಿರುವುದರಿಂದ ಅವರು ಅದೇ ರೀತಿ ತೆಗೆದುಕೊಳ್ಳುತ್ತಿದ್ದಾರೆ. ಆದಕಾರಣ ಇದನ್ನೆಲ್ಲಾ ತಪ್ಪಿಸುವುದಕ್ಕೆ ಸರ್ಕಾರದವರು ಒಂದು ಸರಿಯಾದ ಕ್ರಮವನ್ನು ಕೂಡಲೆ ಕೈಗೊಳ್ಳಬೇಕಾಗಿದೆ.

ಇನ್ನು ಈ ಕಾನೂನಿನಲ್ಲಿ ಗೇಣಿ ಕೊಟ್ಟಿದ್ದಕ್ಕೆ ರಶೀದಿ ಪಡೆಯಬೇಕು ಎಂದು ಹೇಳಿದೆ. ಈ ಅಂಶ ಹಳೇ ಕಾನೂನಿನಲ್ಲೂ ಇತ್ತು. ಇದರ ಬಗ್ಗೆ ಕೂಡ ಆ ಜಮೀನ್ದಾರರು ಗೇಣೀದಾರರಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಆ ಮಲೆನಾಡಿನಲ್ಲಿ ಜಮೀನ್ದಾರನನ್ನು ಗೇಣೀದಾರ ಒಂದು ರಶೀದಿ ಕೇಳುವುದೇ ಒಂದು ದೊಡ್ಡ ಅಪರಾಧವಾಗಿದೆ. ರೈತ ಆತನ ಮನೆ ಬಾಗಿಲಗೆ ಹೋದಕೂಡಲೇ 'ಓಹೋ! ಏನು ಆಗಲೇ ರಶೀದಿ ಕೇಳುವುದಕ್ಕೆ ಬಂದುಬಿಟ್ಟೆಯೋ? ನೀವು ಈ ಜಮೀನನ್ನು ನಿಮ್ಮ ಅಪ್ಪ, ಅಜ್ಜನ ಕಾಲದಿಂದಲೂ ಮಾಡಿಕೊಂಡು ಹೋಗುತ್ತಿದ್ದೀರಿ. ಹೀಗೆ ಎಂದೂ ಯಾರೂ ದಾಖಲೆ ಕೇಳಿರಲಿಲ್ಲ. ಈಗ ನಿನಗೇತಕ್ಕೆ ಹೋಗು, ಎಂದು ಹೇಳಿ ಕಳುಹಿಸಿಬಿಡುತ್ತಾರೆ. ಆದರೆ ಇತ್ತ ಆ ರೈತ ಅನಕ್ಷರಸ್ಥನೂ ಮತ್ತು ಭಯ ಭಕ್ತಿಗಳಿಂದ ಕೂಡಿರತಕ್ಕವನೂ ಆಗಿರುವುದರಿಂದ ಜಮೀನ್ದಾರರುಗಳು ಹಾಗೆಯೇ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇವರು ಹೀಗೆ ಹಿಂದಕ್ಕೆ ಬೀಳುತ್ತಾ ಬಂದಿದ್ದಾರೆ. ಈ ರೀತಿಯಾಗಿ ಅನೇಕ ರೈತರಲ್ಲಿ ಈ ದಿವಸ ಆ ರಶೀದಿಗಳೇ ಇಲ್ಲದಿರುವುದರಿಂದ ಜಮೀನ್ದಾರನು ರೈತನಿಂದ ಜಮೀನನ್ನು ಬಿಡಿಸಿಕೊಳ್ಳಬೇಕೆಂದು ಇಷ್ಟಪಟ್ಟರೆ ಅಥವಾ ಆತನ ಮನಸ್ಸಿಗೆ ಬಂದರೆ ಆ ಕೂಡಲೆ ಆತ ಈ ರೈತನ ಮೇಲೆ ಮೂರು ವರ್ಷದ ಬಾಕಿ ನಿಂತಿದೆ ಎಂದು ದಾವ ಹಾಕುತ್ತಾನೆ. ಈ ರೀತಿಯಾಗಿ ಈ ದಿವಸ ನಮ್ಮಲ್ಲೆಲ್ಲಾ ನಡೆಯುತ್ತಿದೆ. ಕೋರ್ಟಿಗೆ ಜನರು ತಿರುಗುತ್ತಿದ್ದಾರೆ. ಆದುದರಿಂದ ಪ್ರತಿ ವರ್ಷವೂ ಗೇಣಿ ವಸೂಲಿ ಕ್ರಮ ಮುಗಿದಮೇಲೆ ಜಮೀನ್ದಾರನಾಗಿರತಕ್ಕವನು ಯಾವ ಯಾವ ರೈತನಿಂದ ಎಷ್ಟೆಷ್ಟು ಬಾಕಿ ನಿಂತಿದೆ ಎಂದು ಅವರು ಬರೆದಿಟ್ಟುಕೊಂಡಿರುತ್ತಾರೋ ಅದರ ಬಗ್ಗೆ ಒಂದು ಡಿಕ್ಲರೇಷನ್ನನ್ನು ಕೊಡಬೇಕೆಂಬುದಾಗಿ ತಾವು ಈ ಒಂದು ವಿಧಿಯನ್ನು ಈ ಕಾನೂನಿನಲ್ಲಿ ಸೇರಿಸಬೇಕೆಂದು ಹೇಳುತ್ತೇನೆ.

ಇನ್ನು ಈ ಗೇಣಿ ಕೊಡತಕ್ಕ ವಿಚಾರದಲ್ಲಿ ಈಗ ಹಾಲಿ ಇರತಕ್ಕಂಥ ರೀತಿಯಲ್ಲೇ ಇನ್ನೂ ಕೊಡುತ್ತಿದ್ದಾರೆ. ಮಲೆನಾಡಿನಲ್ಲಿ ಈ ಗೇಣಿಯು ಆ ಜಮೀನಿನ ಫಸಲಿನಲ್ಲಿ ಅರ್ಧಕ್ಕಿಂತ ಕಡಮೆಯಾರಬೇಕೆಂದೂ, ಬಯಲು ಸೀಮೆಯಲ್ಲಿ ಅರ್ಧ ಭಾಗವಿರಬೇಕೆಂದೂ ನಿಯಮವಿದೆ. ಆದರೆ ಈ ನಿಯಮಾವಳಿಯಿಂದ ಗೇಣೀದಾರರಿಗೇನೂ ಅಷ್ಟಾಗಿ ಪ್ರಯೋಜನವಾಗಿಲ್ಲ. ತಾವು ಈ ಗೇಣಿಯ ಮೊತ್ತವನ್ನು ಇನ್ನೂ ಕಡಮೆಮಾಡಬೇಕು. ಬೇರೆ ಪ್ರಾಂತಗಳಲ್ಲೆಲ್ಲಾ ಹಾಗೆ ಮಾಡಿದ್ದಾರೆ. ತಾವೂ ಸಹ ಆ ರೀತಿಯಾಗಿ ಇಲ್ಲಿ ಕಡಮೆ ಮಾಡಬೇಕಾಗಿದೆ. ತಮಗೆ ಸಾಧ್ಯವಿದ್ದರೆ ಮಲೆನಾಡಿಗೂ ಮತ್ತು ಬಯಲು ಸೀಮೆಗಳೆರಡಕ್ಕೂ ಒಂದೇ ರೀತಿಯಾಗಿ ಈ ಗೇಣಿಯನ್ನು ನಿರ್ಧರಮಾಡಿ, ಇಲ್ಲವಾದರೆ ಮಲೆನಾಡಿಗೆ ಆರನೆಯ ಒಂದು ಭಾಗವಿರಬೇಕೆಂದೂ ಬಯಲು ಸೀಮೆಗೆ ಐದನೆಯ ಒಂದು ಭಾಗವಿರಬೇಕೆಂದೂ ತಾವು ಬದಲಾವಣೆ ಮಾಡಬೇಕು. ಆದರೆ ಅರ್ಧಕ್ಕೆ ಮೀರದಂತೆ ಗೇಣಿ ಕೊಡಬೇಕೆಂದು ಹೇಳಿರತಕ್ಕದ್ದು ಹಳೇ ಬಡ್ಡಿದರದ ಮೇಲೆ ಲೆಕ್ಕಗಳೆಲ್ಲಾ ನಿಂತಿರುವ ಹಾಗೆ ಆಗುತ್ತದೆ. ಇಂದು ನಮ್ಮ ದೇಶದಲ್ಲಿ ರೈತರ ಜೀವನ ಸುಗಮವಾಗಿ ನಡೆಯುವಂತೆ, ಅವರಿಗೆ ಅನುಕೂಲ ದೊರೆಯುವಂತೆ ಗೇಣಿ ನಿರ್ಧರವಾಗಿಲ್ಲ. ಹಾಗೆ ತಮಗೆ ಈ ರೈತರ ಹಿತರಕ್ಷಣೆ ಮಾಡಲೇಬೇಕೆಂಬ ಆಕಾಂಕ್ಷೆ ಇದ್ದ ಭಾಗದಲ್ಲಿ ತಾವು ಈ ಗೇಣಿಯನ್ನು ಕಮ್ಮಿ ಮಾಡುವುದು ಸೂಕ್ತ. ಆದರೆ ನನಗೆ ಗೊತ್ತಿರುವ ಹಾಗೆ—ಹೈದರಾಬಾದಿನಲ್ಲಿ ಈ ಗೇಣಿಯ ಪ್ರಮಾಣ ಆ ಭೂಮಿ ಕಂದಾಯದ ಐದು ಭಾಗಕ್ಕೆ ಮೀರದಂತೆ ಇರಬೇಕೆಂದು ನಿರ್ಧರಿಸಲಾಗಿರುತ್ತದೆಯೆಂದು ಕೇಳಿದ್ದೇನೆ. ಅಲ್ಲಿ ಒಂದು ಜಮೀನಿನ ಕಂದಾಯ ಮೂರು ರೂಪಾಯಿಗಳಿದ್ದರೆ-ಅದರ ಐದರಷ್ಟು ಎಂದರೆ 15 ರೂಪಾಯಿಗಳಾಯಿತು—ಈ 15 ರೂಪಾಯಿಗಳಿಗೆ ಆ ಗೇಣಿ ಮೀರದಂತೆ ಇರಬೇಕೆಂದು ಅಲ್ಲಿ ಕಂದಾಯದ ಆಧಾರದ ಮೇಲೆ ನಿಗದಿಮಾಡಿದ್ದಾರೆ. ನಮ್ಮ ದೇಶದಲ್ಲಿಯೂ ಕೂಡ ಅದೇ ರೀತಿಯಾಗಿ ಕಂದಾಯದ ಆಧಾರದಮೇಲೆ ನಿರ್ಧರಮಾಡಿ ಆ ಬಗ್ಗೆ ಗೇಣಿಯನ್ನು ಕಾಳಿನ ರೂಪವಾಗಿಯೋ ಅಥವಾ ನಾಣ್ಯ ರೂಪವಾಗಿಯೋ ಕೊಡಬಹುದೆಂದು ಹೇಳಿ ನಿರ್ಧರಮಾಡಬೇಕು. ಹೀಗೆ ಮಾಡಿದರೆ ಇಲ್ಲಿಯ ರೈತರು ಬದುಕಲು ತಾವು ಒಂದು

(ಶ್ರೀ ಎಸ್. ಗೋಪಾಲಗೌಡ).

ಅವಕಾಶವನ್ನು ಕಲ್ಪಿಸಿಕೊಟ್ಟಹಾಗೆ ಆಗುತ್ತದೆ ನಾನು ಈ ಗೇಣಿಯನ್ನು ಗೊತ್ತುಪಡಿಸುವ ಸಂದರ್ಭದಲ್ಲೇ ಸರ್ಕಾರದವರ ನೋಟಿಫಿಕೇಷನ್ ಅಷ್ಟೇನೂ ರೈತರಿಗೆ ಸಹಕಾರಿಯಾಗುವುದಿಲ್ಲ ಎಂದು ತಿಳಿಸಿದ್ದೆನು. ಆದ್ದರಿಂದ ತಾವು ಈ ಮಸೂದೆಯಲ್ಲಿ ಆರನೆಯ ಒಂದು ಭಾಗದಷ್ಟು ಗೇಣಿ ಕೊಡಬೇಕೆಂಬ ಬಗ್ಗೆ ಒಂದು ತಿದ್ದುಪಡಿಯನ್ನು ಮಾಡಬೇಕೆಂದೂ, ಆಗ ಇದರಿಂದ ಆ ರೈತರಿಗೆ ಸ್ವಲ್ಪ ಸಹಾಯ ಮಾಡಿದಂತೆ ಆಗುತ್ತದೆಂದೂ, ನಾನು ಅಭಿಪ್ರಾಯಪಡುತ್ತೇನೆ.

ಆದರೆ ಈಗೇನು ಶ್ರೀಮಾನ್ ಭೀಮಪ್ಪನಾಯಕರೂ ಮತ್ತು ಶ್ರೀ ಚನ್ನಬಸಪ್ಪನವರೂ ಸಮಗ್ರ ರೈತಾಪಿ ಜನಗಳಿಗೆ ಅನುಕೂಲವಾಗುವ ಹಾಗೆ ಒಂದು ಜನರಲ್ ಬಿಲ್ಲನ್ನು ತಂದು ಈ ಗೇಣಿದಾರರಿಗಾಗಲಿ ಅಥವಾ ಆ ಜಮೀನ್ದಾರರಿಗಾಗಲಿ ಭೂಮಿಯ ಪರಮಾವಧಿ ಹಿಡುವಳಿ ಎಷ್ಟಿರಬೇಕೆಂಬುದನ್ನು ನಿರ್ಧರಮಾಡಬೇಕೆಂದು ಹೇಳಿದ್ದಾರೋ—ಅದೇ ಒಂದು ಬಿಲ್ಲನ್ನು ಪ್ರತ್ಯೇಕವಾಗಿ ಸರ್ಕಾರದವರು ಬಹಳ ಬೇಗ ತಂದು ಅದನ್ನು ಕಾನೂನು ಕಡತಕ್ಕೇರಿಸಬೇಕೆಂದು ನಾನೂ ಸಹ ಮಾನ್ಯ ಕಂದಾಯದ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಅವರು ವ್ಯಕ್ತಪಡಿಸಿರುವ ಪ್ರಕಾರ ಭೂಸುಧಾರಣೆ ಆಗಲೇಬೇಕಾಗಿದೆ. ಅದು ಆದ ಹೊರತು ನಾವು ಮತ್ತೆ ಯಾವ ಸುಧಾರಣೆಗಳನ್ನೂ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿಯೇ ಅವರು ಇದನ್ನು ಬಹಳವಾಗಿ ಒತ್ತಾಯಪಡಿಸುತ್ತಿದ್ದಾರೆ. ಮೈಸೂರು ಹೆಸರಿಗೆ ಮಾದರಿ ಸಂಸ್ಥಾನ. ಇಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದು ಎಂಟು ವರ್ಷಗಳ ಮೇಲಾಯಿತು. ಆದರೆ ಈಗ ಈ ಭೂಸುಧಾರಣೆಗಳ ಬಗ್ಗೆ ನಮ್ಮ ದೇಶದಲ್ಲಿ ಎಷ್ಟು ಪ್ರಗತಿ ಹೊಂದಿದೆಯೆಂದು ನೋಡಿದರೆ ಅದು ಏನೇನೂ ಆಗಿಲ್ಲವೆಂದು ಕಂಡುಬರುತ್ತದೆ.

ಒಬ್ಬ ಸದಸ್ಯರು.—ಇನಾಂ ರದ್ದಿಯಾತಿ ಮಸೂದೆ ಮಾಡಿಲ್ಲವೇ?

ಶ್ರೀ ಎಸ್. ಗೋಪಾಲಗೌಡ.—ಹೌದು. ಆದರೆ ಅದಿನ್ನೂ ಕಾನೂನಾಗಿಲ್ಲವಲ್ಲಾ. ಅದಿನ್ನೂ ರಾಷ್ಟ್ರಾಧ್ಯಕ್ಷರ ಅಪ್ಪಣೆ ಪಡೆಯಲು ಕೇಂದ್ರಕ್ಕೆ ಹೋಗಿದೆ; ವಾಪಸ್ಸು ಬಂದಿಲ್ಲ. ಆದರೆ ಅದು ಹಿಂದಿರುಗಲು ಇಷ್ಟು ನಿಧಾನವಾಗಲು ಕಾರಣವೇನಿರಬಹುದೆಂಬುದನ್ನು ತಿಳಿದಿದ್ದರಲ್ಲಿ—"ನಾವು ಅನುಮೋದಿಸಿ ಕಳುಹಿಸಿರತಕ್ಕಂಥ ಬಿಲ್ಲು ರೈತರಿಗೇನೂ ಅಷ್ಟು ಪ್ರಗತಿದಾಯಕವಾಗಿಲ್ಲ, ಅದರಲ್ಲಿ ಟೆನೆಂಟ್ಸ್ ಆಕ್ಟ್ ವಿಲ್ಲನ್ನು ಕೈಬಿಟ್ಟಿದ್ದೀರಿ, ಇಂಥಾ ಒಂದು ಮಸೂದೆಯನ್ನು ಶಾಸನ ಕಡತಕ್ಕೇರಿಸಿದರೆ ಏನೂ ಪ್ರಯೋಜನವಾಗುವುದಿಲ್ಲ" ಎಂದು ಅವರು ಅದನ್ನು ತಡೆಹಾಕಿದ್ದಾರೆಂದು ಗೊತ್ತಾಯಿತು. ಆದರೆ ನಾವೇನೋ ಯಾವಾಗಲೂ ರೈತರಿಗೆ ಸ್ನೇಹಿತರೇ. ತಮ್ಮ ಕಡೆಯ ಪಕ್ಷದಿಂದ ವಾದ ಮಾಡಿದಂಥ ಒಬ್ಬರ ಹೆಸರನ್ನು ನಾನೀಗ ಹೇಳಬೇಕಾಗಿದೆ. ಆ ದಿವಸ ಶ್ರೀಮಾನ್ ಎಚ್. ಸಿ. ಲಿಂಗಾರೆಡ್ಡಿಯವರು ಈ ಟೆನೆಂಟ್ಸ್ ಆಕ್ಟ್ ವಿಲ್ಲಿನ ಬಗ್ಗೆ ಬಹಳವಾಗಿ ವಾದ ಮಾಡಿದ್ದರು. ಆದರೆ ನಮ್ಮ ಲೀಡರ್ ಅವರಾದ ಶ್ರೀ ಇಮಾಂರವರು ಈ ವಿಚಾರವಾಗಿ ಈಗಾಗಲೇ ಅವರ ಅಭಿಪ್ರಾಯವನ್ನು ಸಾವಿರಾರು ಸಾರ್ತಿ ಹೇಳಿದ್ದಾರೆ. "ನಾನು ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿದ್ದರೂ ಕೂಡ ನನ್ನ ಜಮೀನು ಕಾಣಿಗಳು ಏನಿವೆಯೋ ಅವುಗಳೆಲ್ಲವನ್ನೂ ತೆಗೆದುಕೊಂಡು ಬಿಡಿ" ಎಂದು ಹೇಳುತ್ತಾ ಅವರು ಈ ಸೋಷಿಯಲಿಜಂಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, "ನನಗೊಂದು ಉದ್ಯೋಗ, ನನ್ನ ಮಕ್ಕಳ ಜೀವನೋಪಾಯಕ್ಕೊಂದು ಸುಖವಾದ ದಾರಿಮಾಡಿ ಕೊಟ್ಟುಬಿಡಿ" ಎಂದು ಅವರು ಯಾವಾಗಲೂ ಹೇಳುತ್ತಿದ್ದಾರೆ. ಅವರಿಗೊಂದು ಕಾರಿದೆ. ಆ ಕಾರು ಅವರಿಗೇ ಇರಬೇಕು. ಹೀಗೆ ಅವರ ಅನುಕೂಲಗಳಿಗೆ ತಕ್ಕಂತೆ ಇದ್ದರೆ ಸಾಕು. ಮೊನ್ನೆ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಮಾತನಾಡುತ್ತಿದ್ದಂಥ ಕಾಲದಲ್ಲಿ ಕೂಡ ತಮ್ಮ ಕಡೆಯ ಕೆಲವು ಸದಸ್ಯರು 'ಅವರು ಬ್ಯಾಂಕಿನಲ್ಲಿ ಲಕ್ಷಾಂತರ ರೂಪಾಯಿಗಳನ್ನು ಹಾಕಿಕೊಂಡಿದ್ದಾರೆ'ಂದು ವಾದ ಮಾಡಿದರು. ಆಗ ಶ್ರೀಮಾನ್ ಚನ್ನಬಸಪ್ಪನವರಿಗೆ ಅವರು ಉತ್ತರಕೊಟ್ಟಿದ್ದಾರೆ. ತಾವು ಒಬ್ಬೊಬ್ಬರಿಗೆ 30 ಎಕರೆಗಳಿರಬೇಕೆಂಬ ತೀರ್ಮಾನಕ್ಕೆ ಬಂದರೆ ಅವರೂ ಕೂಡ 30 ಎಕರೆ ಇಟ್ಟುಕೊಳ್ಳುವ ತೀರ್ಮಾನಕ್ಕೆ ಬರುವುದಾಗಿ ತಿಳಿಸಿದ್ದಾರೆ.

(*Interruption.*)

ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರೂ ಮತ್ತು ಶ್ರೀಮಾನ್ ಎ. ಭೀಮಪ್ಪನಾಯಕರೂ ಬಹಳ ಕಾತುರರಾಗಿರುವುದರಿಂದ ತಾವು ಈ ಬಗ್ಗೆ ಅತಿ ಜರೂರಾಗಿ ಒಂದು ಸುವ್ಯವಸ್ಥೆಯಿಂದ ಕೂಡಿದ ಬಿಲ್ಲನ್ನು ಈ ಅಧಿವೇಶನದಲ್ಲೇ ತಂದರೂ ಕೂಡ ನಾವು ಅದನ್ನು ಪಾಸ್ ಮಾಡಲಿಕ್ಕೆ ಸಿದ್ಧವಾಗಿದ್ದೇವೆ. ನಮಗೆ ಅದರಿಂದ ಎಷ್ಟೇ ಕಷ್ಟ ಬಂದರೂ ನಾವು ಅವುಗಳನ್ನು ಲೆಕ್ಕಿಸುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಶ್ರೀ ಕಡಿದಾಳ್ ಮಂಜಪ್ಪನವರು.—"ನಿನಗಿಂತಲೂ ಮತ್ತು ಎಲ್ಲರಿಗಿಂತಲೂ ನಾನು ಕ್ರಾಂತಿಕಾರಕ ಮನೋಭಾವ ಉಳ್ಳವನಾಗಿದ್ದೇನೆ ಎಂದು ಹೇಳಿಕೊಳ್ಳುತ್ತಿದ್ದರು. . . .

ಶ್ರೀ ಕಡಿದಾಳ್ ಮಂಜಪ್ಪ.—ನಾನು ನನ್ನನ್ನು ನಿಮ್ಮೊಂದಿಗೆ ಎಂದಿಗೂ ಹೋಲಿಕೆ ಹಾಕಿಕೊಂಡಿಲ್ಲ.

ಶ್ರೀ ಎಸ್. ಗೋಪಾಲಗೌಡ.—"ನಾನು ನಾನ್ ವೈಲೆಂಟ್ ಕಮ್ಯೂನಿಸ್ಟ್" ಎಂದು ಹೇಳಿಕೊಂಡಿದ್ದೀರಿ. ಈಗ ಕಾಶ್ಮೀರದಲ್ಲಿ ಈ ಮಸೂದೆಯನ್ನು ತಂದಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ನಾನು ಈ ಹಿಂದೆಯೇ ಹೇಳಿದ್ದೇನೆ.—"ನನಗೆ ತಾವೆಲ್ಲರೂ ಆ ಅಧಿಕಾರವನ್ನು ಸಂಪೂರ್ಣವಾಗಿ ಕೊಟ್ಟುಬಿಡಿ' ಆಗ ಏನು ಬೇಕಾದರೂ ನಾನು ಒಂದು ತಿಂಗಳಿನಲ್ಲೇ ಮಾಡಿಬಿಡುತ್ತೇನೆ, ಎಂದು.

ಶ್ರೀ ಎಸ್. ಗೋಪಾಲಗೌಡ.—ಈ ಭೂಮಿಯನ್ನು ಎಲ್ಲರಿಗೂ ಸಮಾನವಾಗಿ ಹಂಚತಕ್ಕಂಥ ಒಂದು ಸೀಲಿಂಗ್ ಲಿಮಿಟ್‌ನ್ನು ಮಾಡಲೇಬೇಕಾಗಿದೆ. ಆದರೆ ಆ ಒಂದು ಕಾರಣಕ್ಕಾಗಿಯೇ ಈಗ ಈ ಬಿಲ್ಲನ್ನು ಹಿಂದಕ್ಕೆ ತಳ್ಳಬೇಕಾಗಿಲ್ಲ. ಆದರೆ ಈ ಕಾನೂನಿನಲ್ಲಿ ಸಹ ಆ ಒಂದು ಸೀಲಿಂಗ್ ಲಿಮಿಟ್ ಹಾಕದಿದ್ದರೆ ಇದೊಂದು ಪ್ರಗತಿದಾಯಕವಾದ ಕಾನೂನಾಗುವುದಿಲ್ಲ. ಆದರೆ ಅವರು ಹೇಳತಕ್ಕದ್ದೂ ಕೂಡ ಅತಿ ಜರೂರಾದದ್ದು ಮತ್ತು ಅತಿ ಮುಖ್ಯವಾದದ್ದು ಎಂದು ಹೇಳಿ ಸರ್ಕಾರದವರಿಗೆ ಅದನ್ನು ಬೇಗ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಇದರಲ್ಲಿ permissible holding ಎನ್ನುವುದನ್ನು ಹೊಸದಾಗಿ ನಮೂದು ಮಾಡಲಾಗಿದೆ. ಇದು ಮೂಲ ಕಾನೂನಿನಲ್ಲಿಲ್ಲ. ಇದಕ್ಕೆ ಶ್ರೀಮಾನ್ ಭೀಮಪ್ಪನಾಯಕರು ಭಿನ್ನಾಭಿಪ್ರಾಯಪಟ್ಟು ಇದನ್ನೇಕೆ ಸೇರಿಸಬೇಕೆಂದರು. ಈ permissible holding ವಿಚಾರದಲ್ಲಿ ಹಿಂದಿನ ಅಧಿವೇಶನದಲ್ಲಿ ಮಾತನಾಡುತ್ತಾ ಹೇಳಿದ್ದಾರೆ. "ರಾಗಿ, ಜೋಳ, ಬತ್ತ ಬೆಳೆಯುವಕಡೆ ಎಂಟುಪಲ್ಲ ಬತ್ತ ರಾಗಿ ಜೋಳವನ್ನು

ಬೆಳೆಯುವ ಸ್ಥಳವನ್ನು ಒಂದೆಕರೆ ಎಂದು ಪರಿಗಣಿಸುತ್ತೇವೆ, ತೋಟವಾದರೂ ಹಾಗೆಯೇ. ಹೀಗೆ ಲೆಕ್ಕಹಾಕಿ, ಇಪ್ಪತ್ತೈದು ಎಕರೆಗಳು standard ಎಕರೆಗಳು '' ಎಂದು permissible holding ಮಾಡಿದ್ದಾರೆ. ಎಂಟೆಕರೆ ಬೆಳೆಯತಕ್ಕ ಪ್ರದೇಶ ಒಂದು ಸ್ಟ್ಯಾಂಡರ್ಡ್ ಎಕರೆ, ಇಂಥ ಇಪ್ಪತ್ತೈದು ಸ್ಟ್ಯಾಂಡರ್ಡ್ ಎಕರೆಗಳನ್ನುಳ್ಳ ಒಂದು ಪ್ರದೇಶ ಸಾಧಾರಣವಾಗಿ ಒಂದು permissible holding ಎಂದು ಹೇಳುತ್ತೇವೆ. ಒಂದು ವಿಷಯವನ್ನು ಮಾನ್ಯ ಕಂದಾಯ ಮಂತ್ರಿಯವರು ಹೇಗೆ ಪರಿಗಣಿಸಿದ್ದಾರೋ ಗೊತ್ತಿಲ್ಲ. ಯಾರಿಗೆ ಗೇಣಿಗೆ ಕೊಟ್ಟಿದ್ದಾರೋ ಅವರಿಗೆ ಇದು ಅನ್ವಯಿಸುತ್ತದೆ, ಐನೂರು ಎಕರೆಯನ್ನು ಸ್ವಂತ ಸಾಗುವಳಿ ಮಾಡಿದರೂ ಅವರಿಗೆ ಅನ್ವಯಿಸುವುದಿಲ್ಲವೆಂಬ ಭಾವನೆ ಬರುತ್ತದೆ ಒಂದುವೇಳೆ ಇಂಥವರಿದ್ದರೂ ಅವರಿಗೆ ಇಂಥ ಕಾನೂನು ಅನ್ವಯಿಸುವುದಿಲ್ಲ. ಆದುದರಿಂದ ಇದು discriminatory ಆಗಬಹುದು, ತಿರುವಾಂಕೂರು ಕೊಚ್ಚಿಯಲ್ಲಿ ಸ್ವಂತವಾಗಲಿ ಗೇಣಿ ಜಮೀನಾಗಲಿ ಹತ್ತೊಂಭತ್ತೂವರೆ ಎಕರೆ ಮೇಲೆ ಇರಬಾರದೆಂದು ಮಾಡಿದರು. ಇದು ಅಲ್ಲಿ ಗೇಣಿದಾರರಿಗೂ ಕೂಡ ಅನ್ವಯಿಸುತ್ತದೆ. ಏಕೆಂದರೆ ಅಲ್ಲಿರುವ ಜಮೀನಿನ ವಿಸ್ತೀರ್ಣ ಕಡಮೆ, ಜನ ಜಾಸ್ತಿ. ಇದರಿಂದ ಭೂಮಿಯಮೇಲೆ ಒತ್ತಡ ಜಾಸ್ತಿಯಾಗಿದೆ. ಆದರೆ ನಮ್ಮಲ್ಲಿ, ಮಾನ್ಯ ಕಂದಾಯ ಮಂತ್ರಿಗಳು ಹೇಳಿದಹಾಗೆ, ಒಂದು ಕೋಟಿ ಎಕರೆ ಜಮೀನಿದೆ. ಒಂದು ಸಂಸಾರಕ್ಕೆ ಒಂದೆಕರೆ ಬರುತ್ತದೆ ಎಲ್ಲರಿಗೂ ಹಂಚಿದರೂ ಕೂಡ. ಎಲ್ಲರೂ ಜಮೀನನ್ನಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ permissible holding ಎಲ್ಲರಿಗೂ ಅನ್ವಯವಾಗುವಂತೆ ಮತ್ತೆ ತಿದ್ದುಪಡಿ ಮಾಡಬೇಕು. ಈಗ ಇಷ್ಟಕ್ಕೇ ಬಿಟ್ಟಿದ್ದಾರೆ. ಈಗ ಗೇಣಿಗೆ ಕೊಟ್ಟಿರುವವರಿಗೆ ಮಾತ್ರ ಅನ್ವಯಿಸುತ್ತದೆ, ಕೊಡದೇಯಿರುವವರಿಗೆ ಇದು ಅನ್ವಯವಾಗುವುದಿಲ್ಲ. Permissible holding ನಿಯಮ ಎಲ್ಲರಿಗೂ ಅನ್ವಯಿಸಬೇಕು. ಸ್ವಂತವಾಗಿ ಮಾಡುತ್ತಿರಲಿ ಗೇಣಿಗೆ ಕೊಟ್ಟಿರಲಿ ಎಲ್ಲರಿಗೂ ಅನ್ವಯಿಸಬೇಕು. ಇದನ್ನು ಆ ರೀತಿ ತಿದ್ದುಪಡಿಮಾಡಬೇಕೆಂದು ಮತ್ತೊಂದು ಸಲಹೆ ಮಾಡುತ್ತೇನೆ. ಗೇಣಿದಾರರಿಗೆ ಅನ್ವಯಿಸಿದರೆ ತಪ್ಪಿಲ್ಲ.

ಇನ್ನು ಸ್ಟ್ಯಾಂಡರ್ಡ್ ಎಕರೆ ಲೆಕ್ಕ ಹಾಕುವುದರಲ್ಲಿ ಸ್ವಲ್ಪ ಭಿನ್ನಾಭಿಪ್ರಾಯವಿದೆ. ಕೆಲವು ಕಡೆ ಎಂಟು ಪಲ್ಲ ಜೋಳ ಬೆಳೆಯುವುದು ಸುಮಾರು ಎಂಟೆಕರೆ ಭೂಮಿಯಾಗಬಹುದು. ಎಕರೆಗೆ ಒಂದೇಪಲ್ಲ ಬೆಳೆಯುವ ಬೆಂಗಾಡು ಪ್ರದೇಶವೂ ಇದೆ ಎಂದು ಹೇಳುತ್ತಾರೆ. ಇದರ ಪ್ರಕಾರ ಒಬ್ಬನಿಗೆ 8 × 25 ಎಕರೆ ಕೊಡಬೇಕಾಗುತ್ತದೆ. ಇಂಥ ಹತ್ತುಜನರಿದ್ದರೆ 10 × 8 × 25 ಎಕರೆ ಬಿಡಬೇಕಾಗುತ್ತದೆ. ಆಗ ಸರ್ಕಾರ ಬಹಳ ಜಮೀನನ್ನು ಬಿಡಬೇಕಾಗುತ್ತದೆ. ಹೀಗೆ ಮಾಡುವುದರಿಂದ. ರೈತರಿಗೆ ಅನುಕೂಲವಾಗುವುದಕ್ಕೆ ಬದಲು ಅನಾನುಕೂಲವಾಗಬಹುದೆಂದು ನನಗೆ ತೋರುತ್ತದೆ. ಕೆಲವರು ಹೆಚ್ಚು ಅನುಕೂಲ ಪಡೆಯುತ್ತಾರೆ, ಮತ್ತೆ ಕೆಲವರಿಗೆ ಏನೂ ಸಿಕ್ಕುವುದಿಲ್ಲ. ಎಂಟೆಕರೆಗೆ ಒಂದು ಪಲ್ಲವಾದರೆ ಇಪ್ಪತ್ತೈದು ಎಕರೆ ಒಂದು permissible holding ಆಧುದರಿಂದ 8 × 25 ಎಕರೆಯಾಗುತ್ತದೆ. ಒಂದು ಸಂಸಾರ ಇಂಥ ನೂರು ಎಕರೆ ಇಟ್ಟುಕೊಳ್ಳಬಹುದೆಂದಿದೆ. ಆದಕಾರಣ ಈಗಿನ ಎಕರೆಗಳಲ್ಲಿ ಸುಮಾರು ಎಂಟು ನೂರು ಎಕರೆಯಾಗುತ್ತದೆ. ಇಷ್ಟನ್ನು ಒಂದು ಕುಟುಂಬಕ್ಕೆ ಬಿಡಬೇಕಾಗುತ್ತದೆ, ಇದು ಸಾಧುವಲ್ಲ. ಎಕರೆಗೇ ಎಂಟು ಪಲ್ಲ ಬೆಳೆದರೆ, ಅಲ್ಲಿ ಬಹಳ ಕಡಮೆಯಾಗುತ್ತದೆ. ಆದುದರಿಂದ ಸ್ಟ್ಯಾಂಡರ್ಡ್ ಎಕರೆಯ ಬಗ್ಗೆ ಈ formula ಸಮಂಜಸವೆ ಅಥವಾ ಅಲ್ಲವೆ ಎನ್ನುವುದನ್ನು ಪುನಃ ಪರಿಶೀಲನೆ ಮಾಡಬೇಕು. ಜಮೀನು ಕಂದಾಯದ ಆಧಾರದ ಮೇಲೆ ಇಷ್ಟೊಂದು ಗೊತ್ತುಮಾಡಬಹುದು ; ಇಲ್ಲದಿದ್ದರೆ ಈಗಿರುವ ಎಕರೆಗಳನ್ನೇ ಇಟ್ಟಿರಬೇಕೆಂದಿಟ್ಟುಕೊಳ್ಳಬಹುದು. ಇಪ್ಪತ್ತೈದು ಅಥವಾ ಮೂವತ್ತು ಎಕರೆ ಎಂದು ಜಮೀನಿನ fertility ಅಥವಾ ಬೆಳೆಯಮೇಲೆ ಕಡಮೆ ಅಥವಾ ಹೆಚ್ಚು ಮಾಡುವುದಕ್ಕೆ ಅವಕಾಶವನ್ನು ಈ ಮಸೂದೆಯಲ್ಲಿ ಅಳವಡಿಸಬೇಕು ; ಇಲ್ಲದಿದ್ದರೆ ಉದ್ದೇಶ ಸಾರ್ಥಕವಾಗುವುದಿಲ್ಲ. ಅಲ್ಲದೆ convert ಮಾಡುವಾಗ ಬಹಳ ತೊಂದರೆಯುಂಟಾಗುತ್ತದೆ.

ಅಧ್ಯಕ್ಷರು.—Fertilityಯ ಮೇಲೆ ಗೊತ್ತುಮಾಡುವುದು ಕಷ್ಟವಾಗುತ್ತದೆ, ಬೆಳೆಯಮೇಲೆ ಮಾಡುವುದು ಸುಲಭ. ಆಗಲೂ ಇದು ತೊಂದರೆಯಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಇದು ಸುಲಭವೆಂದು ಸೂಚಿಸಿದ್ದಾರೆ. ಸುಲಭವಾಗಲಾರದು, ನ್ಯೂನತೆಯಿದೆ ಎಂದು ಶ್ರೀಮಾರ್ಕ ಭೀಮಪ್ಪನಾಯಕರು ತೋರಿಸಿದ್ದಾರೆ. ಕೆಲವು ನ್ಯೂನತೆಗಳಿವೆಯೆಂದು ನನಗೂ ತೋರುತ್ತದೆ. Fertility ಇಲ್ಲದೇಯಿರುವ ಕಡೆಯೂ ಎಂಟನೂರು ಎಕರೆ ಬಿಡುವ ಸಂದರ್ಭ ಬಂದರೆ, ಅದು ಅಷ್ಟು ಸೂಕ್ತವಾಗುವುದಿಲ್ಲವೆಂಬುದು ಒಂದಂಶ. ಆದಕಾರಣ ಇದನ್ನು ಇನ್ನೂ ಪರಿಶೀಲನೆ ಮಾಡಬೇಕೆಂಬುದು ನನ್ನ ಅಭಿಪ್ರಾಯವಾಗಿದೆ.

ಇನ್ನು ಇದರಲ್ಲಿ ಅಳತೆ ಮತ್ತು ತೂಕದ ಬಗ್ಗೆ ಈ ಕಾನೂನನ್ನು ಸರಿಯಾದ ರೀತಿಯಲ್ಲಿ ಅನ್ವಯಿಸುವುದಕ್ಕೆ ಸರ್ಕಾರದವರು ಕ್ರಮವನ್ನು ತೆಗೆದುಕೊಳ್ಳಬೇಕು. ಇದನ್ನು ನಾನು ಎರಡನೆಯ ಸಾರಿ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಈ ವಿಷಯದಲ್ಲಿ ಇನ್ನೊಂದು ಮಸೂದೆ ಕೂಡ ಬರುತ್ತದೆಂದು ಕೇಳಿದೆ. ಅದನ್ನು ಕೂಡ ಜಾರಿಗೆ ಕೊಡುವಾಗ ಮುಖ್ಯವಾಗಿ ಮಲೆನಾಡು ಪ್ರದೇಶದಲ್ಲಿ ಇದನ್ನು ತಹಬಂದಿಗೆ ತರದೇ ಹೋದರೆ ಕಷ್ಟವಾಗುತ್ತದೆ.

ಅಧ್ಯಕ್ಷರು.—ಜಾರಿಗೆ ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಸರಿಯಾಗಿ ಜಾರಿಯಲ್ಲಿಲ್ಲ. ಕಾಂಟ್ರಾಕ್ಟ್ ಆಕ್ಟಿಗೆ ಇದನ್ನು ಸರಿಯಾಗಿ ಅನ್ವಯಿಸಿಲ್ಲವೆಂದು ಕಾಣುತ್ತದೆ. ಯಾವುದಾದರೂ ಕರಾರು ರೀತಿ ಗೇಣಿ ಪಡೆಯುತ್ತಿದ್ದರೆ ಅದಕ್ಕೆ ಪರಿಹಾರವನ್ನೇನಾದರೂ ಒದಗಿಸಿದ್ದಾರೆಯೆ ಎಂದರೆ, ಅದಿಲ್ಲ. ಹಳೆಯ ಪದ್ಧತಿಯ ಪ್ರಕಾರವೇ ಮಂತ್ರಿಗಳ ನೆಂಟರು ಇಷ್ಟರು ಕೂಡ ಅಳೆಸುತ್ತಿದ್ದಾರೆ.

Sri Kadidal MANJAPPA.—Better we avoid these remarks about our friends or relatives.

ಶ್ರೀ ಎಸ್. ಗೋಪಾಲಗೌಡ.—ದೂರದವರ ವಿಷಯ ಹೇಳಿದರೆ ಅರ್ಥವಾಗುವುದಿಲ್ಲ, ಎಲ್ಲೋ ಅಳೆಯುತ್ತಿರಬಹುದೆಂದು ತಿಳಿದುಕೊಳ್ಳುತ್ತಾರೆ, ಆದ್ದರಿಂದ ಅವರಿಗೆ ಅರ್ಥವಾಗಲೆಂದು ಹೇಳಿದೆನೇ ಹೊರತು it is not an aspersion or insinuation.

ಭೂಮಿಯನ್ನು ಕೊಂಡುಕೊಳ್ಳುವ ವಿಷಯದಲ್ಲಿ ಈ ಕಾನೂನಿನಲ್ಲಿ ಹತ್ತುವರ್ಷದ ಅವಧಿಯಲ್ಲಿ ಆರು ಕಂತುಗಳಲ್ಲಿ ಕೊಡಬೇಕೆಂದಿದೆ. ಇದರಲ್ಲಿ ಏನಾಗುತ್ತದೆಯೆಂದರೆ, ಅವನು ಗೇಣಿಯನ್ನು ಕೊಡಬೇಕು, ಈ ಕಂತುಗಳನ್ನೂ ಕೊಡಬೇಕು ; ಇದರಿಂದ ಕಷ್ಟವಾಗು

(ಶ್ರೀ ಎಸ್. ಗೋಪಾಲಗೌಡ)

ತ್ತದೆ. ಹೀಗಾಗಿ ಅನೇಕರಿಗೆ ಕೊಂಡುಕೊಳ್ಳುವುದಕ್ಕೆ ಕಷ್ಟವಾಗುತ್ತದೆ, ಅವರಿಗೆ ಶಕ್ತಿ ಇರುವುದಿಲ್ಲ. ಆದುದರಿಂದ ಇಷ್ಟುವರ್ಷ, ಇಷ್ಟು ಗೇಣಿಯನ್ನು ಕೊಟ್ಟರೆ ಅವನಿಗೆ ಭೂಮಿಯನ್ನು ಕೊಡುವುದಾಗಿ ನಮೂದು ಮಾಡಬೇಕು. ಏಕೆಂದರೆ, ಇದುವರೆಗಿದ್ದ ವ್ಯವಸ್ಥೆ ತನ್ನ ಅವಸಾನ ಕಾಲದಲ್ಲಿದೆ, ಇದೇ ವ್ಯವಸ್ಥೆ ಮುಂದುವರಿಯುತ್ತದೆ ಎಂದು ಯಾರೂ ನಂಬಿಕೆಯನ್ನಿಟ್ಟುಕೊಂಡಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ಕ್ರಮವಾಗಿ ಮಧ್ಯವರ್ತಿಗಳನ್ನು ತೊಡೆದುಹಾಕಬೇಕೆಂದರೆ ನಾನು ಹೇಳಿದ ಈ ಕ್ರಮವನ್ನನುಸರಿಸಬೇಕಾಗುತ್ತದೆ. ಇನ್ನೂ ಹತ್ತು ವರ್ಷ ಈಗ ಕೊಡತಕ್ಕ ಗೇಣಿಯನ್ನು ಕೊಟ್ಟರೆ ಮುಂದೆ ಬರಿಯ ಕಂದಾಯವನ್ನು ಕೊಟ್ಟುಕೊಂಡು ಆ ಜಮೀನನ್ನು ಅವನೇ ಮಾಡಿಕೊಳ್ಳಬಹುದೆಂದು ಹೇಳುವುದರಲ್ಲಿ ತಪ್ಪಿಲ್ಲ. ಹಾಗೆ ಮಾಡದಿದ್ದರೆ, ಅವನು ಕಂತುಗಳನ್ನು ಕೊಟ್ಟುಕೊಂಡು ಕೊಳ್ಳುವುದಕ್ಕಾಗುವುದಿಲ್ಲ. ಇದರಿಂದ ಬೇರೆಯವರು ಕೊಂಡುಕೊಳ್ಳುವುದಕ್ಕೂ ಅವಕಾಶವಾಗುತ್ತದೆ. ಇದಕ್ಕಾಗಿ ಹತ್ತು ವರ್ಷದ ಅವಧಿಯಲ್ಲಿ ಆರು ಕಂತುಗಳಲ್ಲಿ ಕೊಡಬೇಕೆಂದು ಏನಿದೆಯೋ ಅದನ್ನು ಸುಲಭಮಾಡಿ, ರೈತ ಕೊಂಡುಕೊಳ್ಳುವುದಕ್ಕೆ ಹೆಚ್ಚು ಅನುಕೂಲಗಳನ್ನೊದಗಿಸಿ ಕೊಡಬೇಕೆಂದು ಸರ್ಕಾರಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇತ್ತೀಚೆಗೆ ನನಗೆ ತಿಳಿವಿರುವ ಹಾಗೆ ಬೊಂಬಾಯಿನಲ್ಲಿ ಇನ್ನೂ ಕೆಲವು ವರ್ಷ ಕಾಲ protected tenancy ಆಗಿ ಮುಂದುವರಿದು ಅನಂತರ ಆ ಜಮೀನಿನ ಖಾತೆಯನ್ನು ಅವರವರ ಹೆಸರಿಗೇ ಬದಲಾಯಿಸುತ್ತಾರೆ. ಈ ಹೊತ್ತು ಟೆನೆಂಟ್ ಆಗಿದ್ದರೆ ಅಂಥವನು ಕಾಲಕ್ರಮದಲ್ಲಿ ಆ ಭೂಮಿಯ ಮಾಲೀಕನಾಗುತ್ತಾನೆ. ಮಧ್ಯವರ್ತಿಯು ಎಂಟು ಹತ್ತು ವರ್ಷಗಳಲ್ಲಿ ಕ್ರಮವಾಗಿ ಚಿತ್ರದಿಂದ ಹೊರಟು ಹೋಗುತ್ತಾನೆ. ಇದರಿಂದ ಯಾವುದೊಂದು ಘರ್ಷಣೆಯೂ ಇಲ್ಲದೆ ಈ ಈ ವ್ಯವಸ್ಥೆಯನ್ನು ತೊಡೆದು ಹಾಕುವುದು ಆ ಪದ್ಧತಿಯಿಂದ ಸಾಧ್ಯವಾಗಿದೆ.

ಇನ್ನು ಇದರಲ್ಲಿ, ಜಮೀನ್ದಾರನಿಗೆ 25 ಎಕರೆಯಿದ್ದರೆ ಅದರಲ್ಲಿ ಆರೂಕಾಲು ಎಕರೆಯನ್ನು ಸ್ವಂತ ಸಾಗುವಳಿಗೆ ಬಿಡಿಸಿಕೊಳ್ಳಬಹುದೆಂದಿದೆ. ಇದೇರೀತಿ 25 ಎಕರೆಯವರೆಗೆ ಬಿಡಿಸಿಕೊಳ್ಳಬಹುದು ಮತ್ತು ಅದನ್ನು ಸ್ವಂತ ಸಾಗುವಳಿ ಮಾಡಬಹುದೆಂದಿದೆ. ಜಮೀನ್ದಾರರ ದೃಷ್ಟಿಯಿಂದ ನಾವು ಇಂಥ ಒಂದು ಕ್ಲಾಜನ್ನು ಒಪ್ಪಬೇಕಾಗುತ್ತದೆ. ಏಕೆಂದರೆ, ಈ ಹೊತ್ತು ಕೆಲವರು ಬರಿಯ ಹತ್ತು ಹದಿನೈದು, ಇಪ್ಪತ್ತು ಎಕರೆ ಇರುವವರು ಕೂಡ ನಾನಾ ಕಾರಣಗಳಿಂದ ತಾವೇ ಸಾಗುವಳಿ ಮಾಡಲಾರದೆ ಬೇರೆಯವರಿಗೆ ಕೊಟ್ಟಿರುತ್ತಾರೆ. ಅಂಥ ಸಂದರ್ಭದಲ್ಲಿ ಸ್ವಂತ ಸಾಗುವಳಿ ಮಾಡಬೇಕೆಂದರೆ ಅವರಿಗೆ ಭೂಮಿಯೇ ಸಿಕ್ಕದೇ ಹೋಗಬಹುದು. ತಾವೇ ಸಾಗುವಳಿ ಮಾಡುತ್ತೇನೆನ್ನುವವರಿಗೆ ಅದಕ್ಕೆ ಅವಕಾಶವಿರಬೇಕು. ಇದರಲ್ಲಿ ಕೆಲವು ಮಾರ್ಪಾಡುಗಳನ್ನು ಕೂಡ ಮಾಡಬಹುದು. ಈಗಿರುವ ರೀತಿಯಲ್ಲಿ ನಮ್ಮಲ್ಲಿರತಕ್ಕ ಭೂಮಿಯನ್ನು ಹಂಚುವ ವ್ಯವಸ್ಥೆಯನ್ನು ಮಾಡಿದರೆ ಇನ್ನೊಂದು ಕಷ್ಟ ಬರಬಹುದು. ಅನೇಕ ಜನ ರೈತರಿಗೆ ನೀವು ಬೇರೆ ಜಮೀನನ್ನು ಕೊಟ್ಟು ವ್ಯವಸ್ಥೆಮಾಡಬಹುದು. ಒಂದು ಕಡೆಯಿಂದ ರೈತರಿಗೆ, ಗೇಣಿದಾರರಿಗೆ ರಕ್ಷಣೆಕೊಡುತ್ತಾ ಹೋದರೆ, ಅವರ ಹಕ್ಕನ್ನು ಕಾಪಾಡುತ್ತಾ ಹೋದಹಾಗೆಲ್ಲಾ ಜಮೀನ್ದಾರ ಕಳೆದುಕೊಳ್ಳುತ್ತಾ ಹೋಗುತ್ತಾನೆ. He becomes ultimately a landless man. ಬೊಂಬಾಯಿನಲ್ಲಿರುವ ಹಾಗೆ ಬರಿಯ ಹೆಸರು ಉಳಿಯುತ್ತದೆ, ಭೂಮಿ ಉಳಿಯುವುದಿಲ್ಲ. ಆದುದರಿಂದ ಇದಕ್ಕೆ ಬೇರೆ ವ್ಯವಸ್ಥೆಯನ್ನು ಕೂಡ ನೀವು ಮಾಡಬೇಕಾಗುತ್ತದೆ. ಇದರಲ್ಲಿ ಮುಖ್ಯವಾಗಿ 'ಸೀಲಿಂಗ್ ಲಿಮಿಟ್' ತರುವ ವ್ಯವಸ್ಥೆ ಬಹಳ ಮುಖ್ಯ. ಇದನ್ನು ಮಾಡಿದರೆ ಭೂಮಿಹಂಚಿಕೆ ಸರಾಗವಾಗಿ ನಡೆಯುತ್ತದೆ. ಆಗ ಭೂವ್ಯವಸ್ಥೆಯನ್ನು ಸ್ವಲ್ಪಮಟ್ಟಿಗೆ ಅನುಕೂಲವಾದ ರೀತಿಯಲ್ಲಿ ರೂಪಿಸಿಕೊಳ್ಳಬಹುದು.

ಈ ಮಸೂದೆಯಲ್ಲಿ ಇನ್ನು ಅಮಲ್ದಾರರಿಗೆ ಬದಲಾಗಿ ಅಸಿಸ್ಟೆಂಟ್ ಕಮಿಷನರ್‌ರವರಿಗೆ ಅಧಿಕಾರವನ್ನು ಕೊಡಲಾಗಿದೆ. ಇದುವರೆಗೆ ನಾನು ನೋಡುವ ಹಾಗೆ ಅಮಲ್ದಾರ್ ಆಗಿರತಕ್ಕಂಥವರು ತಮ್ಮ ಕಾರ್ಯ ಗೌರವದ ಜೊತೆಯಲ್ಲಿ ನ್ಯಾಯವಾದಿಗಳಾಗಿ ಈ ಕೋರ್ಟನ್ನು ನಡೆಸಿಕೊಂಡು ಕೆಲಸವನ್ನು ನಿರ್ವಹಿಸುವುದು ಬಹಳ ಕಷ್ಟವಾಗಿದೆ. ಸಾಗರ, ಸೊರಬ, ಹೊಸನಗರ, ತೀರ್ಥಹಳ್ಳಿ ಇತ್ಯಾದಿ ಕಡೆಗಳಲ್ಲಿ ಈಗಾಗಲೇ ನೂರಾರು ಕೇಸುಗಳು ಪೆಂಡಿಂಗ್ ಇದ್ದು ಅಲ್ಲಿ ಕೆಲಸ ನಡೆಯುತ್ತಾ ಇಲ್ಲ. ಇದನ್ನು ಮೊದಲು ಸುಧಾರಣೆ ತಂದಾಗ Special Amildar ರನ್ನು ನೇಮಿಸುತ್ತೇವೆಂದು ಸರ್ಕಾರದವರು ಹೇಳಿದರು. ಆದರೆ ಅವರನ್ನು ನೇಮಿಸಿಲ್ಲ. ಈ ತಿದ್ದುಪಡಿಮಾಡಿದ ಮುಂದಾದರೂ ಕೂಡ ಆ ಕೇಸುಗಳು ನಡೆಯುವಂತೆ ಅವಕಾಶ ಮಾಡಿಕೊಡಬೇಕು ಎಂಬ ಮುಖ್ಯ ಅಂಶವನ್ನು ಸರಕಾರದವರು ಗಮನಿಸಬೇಕೆಂದು ನಾನು ಹೇಳುತ್ತೇನೆ. ಅದಾದನಂತರ ಈಗ ಕಾರ್ಮಿಕ ಕಡೆಯವರು ವಕೀಲರನ್ನು ಇಟ್ಟರೆ ಮಾಲೀಕರ ಕಡೆಯವರೂ ವಕೀಲರನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಇಲ್ಲದಿದ್ದರೆ ಕಾರ್ಮಿಕರು ಅವರೇ ಕೇಸುಗಳನ್ನು ವಾದ ಮಾಡುತ್ತಾರೆ. ಹಾಗೆಯೇ ಮಾಲೀಕರೂ ಕೂಡ ವಾದ ಮಾಡುತ್ತಾರೆ. ಆರೀತಿ ಒಂದು ಅವಕಾಶವನ್ನು ಕೂಡ ಈ ಬಿಲ್ಲಿನಲ್ಲಿ ಕಲ್ಪಿಸಿಕೊಡಬಹುದು. ರೈತನು ಸಾಮಾನ್ಯವಾಗಿ ಇಂತಹ ಕೇಸಿನಲ್ಲಿ ತನ್ನ ಪರವಾಗಿ ವಾದ ಮಾಡುವುದಾದರೆ ರೈತರ ಸಂಘದ ಪ್ರತಿನಿಧಿಗಳು ಆ ಕೋರ್ಟಿನಲ್ಲಿ ಬಂದು ವಾದಮಾಡಬಹುದು. ಹಾಗೆ ರೈತನು ವಕೀಲರನ್ನು ಇಡುವುದಕ್ಕೆ ಶಕ್ತಿ ಇಲ್ಲದೆ ಇರುವ ಸಂದರ್ಭದಲ್ಲಿ ಜಮೀನ್‌ದಾರರು ವಕೀಲರನ್ನು ಇಡಕೂಡದು ಎನ್ನುವ ಒಂದು ನಿಯಮವನ್ನು ಈ ಮಸೂದೆಯಲ್ಲಿ ಅನುಮೋದಿಸುವುದು ಒಳ್ಳೆಯದು ಮತ್ತು ಉಚಿತವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ರೈತರಿಗೆ ವಕೀಲರನ್ನು ಇಡುವುದಕ್ಕೆ ಶಕ್ತಿಯಿಲ್ಲದೆ ಅವರು ಕೇಸುಗಳನ್ನು ಕಳೆದುಕೊಂಡಿದ್ದಾರೆ. ಜಮೀನ್‌ದಾರರು ವಕೀಲರನ್ನು ಇಡುತ್ತಾರೆ. ಆದರೆ ರೈತರಿಗೆ ಸರಿಯಾದ ರೀತಿಯಲ್ಲಿ ವಾದಮಾಡುವುದಕ್ಕೆ ಗೊತ್ತಾಗುವುದಿಲ್ಲ. Evidence ಕೊಡುವುದಕ್ಕೂ ಗೊತ್ತಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಅವರು ಕೇಸುಗಳನ್ನು ಕಳೆದುಕೊಂಡಿದ್ದಾರೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಒಬ್ಬ standing counsel ಇಟ್ಟುಕೊಳ್ಳಬಹುದು.

ಶ್ರೀ ಎಸ್. ಗೋಪಾಲಗೌಡ.—ಹಿಂದಿನ ಸಲ ನಾನು ಆ ರೀತಿಯಾಗಿ ಹೇಳಿದ್ದೆ. ಆರೀತಿ ಪ್ರಾಸಿಕ್ಯೂಟರುಗಳನ್ನು ಕೂಡ ಇಡುವುದು ಅಷ್ಟು ಸೂಕ್ತವಾಗಲಾರದು ಮತ್ತು ಅದರಿಂದ ಎಷ್ಟರಮಟ್ಟಿಗೆ ಕೆಲಸ ನಡೆಯಬಹುದು ಎಂಬ ಅನುಮಾನಕೂಡ ನನಗಿದೆ. ರೈತನು ಅನುಕೂಲವಿದ್ದ ಕಡೆ ವಕೀಲರನ್ನು ಇಟ್ಟುಕೊಳ್ಳಬಹುದು. ಸರ್ಕಾರದವರು ರೈತ ವರ್ಗದವರನ್ನೂ ಮತ್ತು ಬಡವರನ್ನೂ ಉದ್ಧಾರ ಮಾಡಬೇಕು, ರಕ್ಷಣೆ

ಮಾಡಬೇಕು, ಎಂದು ನಾನು ಹೇಳುತ್ತಿದ್ದೇನೆ. ಆ ದೃಷ್ಟಿಯಿಂದ ರೈತನ ಹಿತರಕ್ಷಣೆ ಮಾಡುವುದಕ್ಕೆ ಒಬ್ಬ counselನ್ನು ಸರ್ಕಾರದವರು ಕೊಟ್ಟರೂ ಅದರಲ್ಲಿ ತಪ್ಪೇನೂ ಇಲ್ಲ. ಅದನ್ನೂ ಕೂಡ ಪ್ರಯೋಗ ರೀತ್ಯಾ ಮಾಡಿನೋಡಬಹುದು.

ಅಧ್ಯಕ್ಷರು.—ಅದರಿಂದ ತೊಂದರೆಯಾಗುತ್ತದೆಂದು ತಾವು ಹೇಳಿದರಲ್ಲ ?

ಶ್ರೀ ಎಸ್. ಗೋಪಾಲಗೌಡ.—ನನ್ನ ಒಂದು ಅನುಭವದಿಂದ ಹಾಗೆ ತೊಂದರೆ ಆಗಬಹುದೋ ಏನೋ ಎಂಬ ಒಂದು ಶಂಕೆಯಿಂದ ಹಾಗೆ ಹೇಳಿದೆನು. ರೈತರಿಗೆ ಕೋರ್ಟಿನಲ್ಲಿ ಯಾವರೀತಿ ಆಗುತ್ತಿದೆ ಎಂಬುದನ್ನೂ ಬೇಕಾದರೆ ಈ ರೀತಿಯಿಂದ ಕಂಡುಕೊಳ್ಳಬಹುದು. ಅದು ಇಲ್ಲದೆ ಹೋದರೆ ಕಾನೂನಿನಲ್ಲಿ ಅನೇಕ ವಿಧವಾದ ರಕ್ಷಣೆಗಳನ್ನು ಕೊಟ್ಟರೂ ಅವುಗಳ ರಕ್ಷಣೆಯನ್ನು ಪಡೆಯುವುದಕ್ಕೆ ಶಕ್ತಿ ಸಾಮರ್ಥ್ಯ ಇಲ್ಲದೆ, ಅವುಗಳ ಉಪಯೋಗಗಳನ್ನು ಪಡೆಯಲಾಗದೆ ಹೋಗುತ್ತದೆ. ಇದರಿಂದ ರೈತರಿಗೆ ಬಹಳ ಕಷ್ಟವಾಗುತ್ತದೆ ಮತ್ತು ಅವರು ಬಹಳ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಮಲೆನಾಡು ಪ್ರದೇಶಗಳನ್ನು ನಾಲ್ಕು ತಾಲ್ಲೂಕುಗಳಾಗಿ ಮಾಡಿ ಒಂದೊಂದು ಸಲ ಒಂದೊಂದು ತಾಲ್ಲೂಕು ಹೆಡ್ ಕ್ವಾರ್ಟರ್ಸಿಗೆ ಹೋಗಿ ಈ ಕೋರ್ಟುಗಳನ್ನು ನಡೆಸಿ ನ್ಯಾಯವನ್ನು ಒದಗಿಸುವ ಪದ್ಧತಿಯನ್ನು ಜಾರಿಗೆ ತರಬಹುದು. ಈಗ ಶಿವಮೊಗ್ಗಾದಲ್ಲಿ ನಮ್ಮ Sub-division ಇರುವುದು. ಆಗುಂಬೆಯಿಂದ ಅಲ್ಲಿಗೆ ಸುಮಾರು 60 ಮೈಲಿಗಳಾಗುತ್ತವೆ. ಆದ್ದರಿಂದ ಒಬ್ಬ ರೈತ ಆಗುಂಬೆಯಿಂದ ಶಿವಮೊಗ್ಗಾಕ್ಕೆ ಬಂದು ರಕ್ಷಣೆ ಪಡೆಯುವುದಿಲ್ಲ, ವಕೀಲರನ್ನು ಇಡುವುದಿಲ್ಲ, ಕೋರ್ಟಿಗೆ ಬರುವುದಿಲ್ಲ. ಹೀಗಾದರೆ ಜಮೀನ್ದಾರರು ಅಕ್ರಮವಾಗಿ ಏನು ಕಾರ್ಯಕ್ರಮ ಕೈಗೊಳ್ಳಬಹುದೋ ಅದನ್ನು ಅನುಭವಿಸಿಕೊಂಡು ಅನಂತರ ರೈತರು ಜಮೀನುಬಿಟ್ಟು ಊರುಬಿಟ್ಟು ಹೋಗುವುದಕ್ಕೆ ಸಿದ್ಧರಾಗಿರುತ್ತಾರೆ. ಇಂತಹ ಅನೇಕ ವಿಚಾರಗಳು ಈಗ ನಡೆಯುತ್ತಿವೆ. ಆದ್ದರಿಂದ ಈಗ ಈ ಕಾನೂನನ್ನು ತಡಮಾಡಿ ತರುವುದರಿಂದ, ಈ ಕಾನೂನನ್ನು ತರುತ್ತೇವೆಂದು ಸ್ಪಷ್ಟವಾಗಿ ಹೇಳಿಕೊಂಡು ಓಡಾಡುತ್ತಿರುವುದರಿಂದ ಏನೇನು ದುಷ್ಪರಿಣಾಮಗಳು ಆಗಿವೆ ಎಂಬುದನ್ನು ಒಂದೆರಡು ಮಾತುಗಳಲ್ಲಿ ವಿವರಿಸಬೇಕಾಗಿದೆ. ಕಾನೂನು ಜಾರಿಗೆ ಬಂದು ಇದನ್ನು ಖಚಿತವಾಗಿ ಜಮೀನ್ದಾರರಾಗಲಿ, ರೈತರಾಗಲಿ ಅನುಭವಿಸಬೇಕೆನ್ನುವ ಅಭಿಪ್ರಾಯದಿಂದ ನಾವು ಜಾರಿಗೆ ತರಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳಿದ್ದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ತಾವು ಕಾನೂನನ್ನು ಏನೋ ಮಾಡಿದ್ದೀರಿ. ಆದರೆ ಅದನ್ನು ಜಾರಿಗೆ ಕೊಡುವ ವಿಷಯದಲ್ಲಿ ಎಷ್ಟರಮಟ್ಟಿಗೆ ಸಾಧ್ಯವಾಗಿದೆ ಎಂಬುದನ್ನು ನೋಡಬೇಕು. ಈ ಹೊತ್ತು ನಮ್ಮಲ್ಲಿ ಗೇಣಿಕಾರರು-ಇಲ್ಲ. ನಮ್ಮ ಪ್ರಾಂತ್ಯದಲ್ಲಿ ಗೇಣೀ ಪದ್ಧತಿ ಇದ್ದರೂ ಕೂಡ ಗೇಣೀಕಾರರು ಬರೆದುಕೊಡುವ ಪದ್ಧತಿ ಇಲ್ಲ. ಕಾಲದಿಂದಲೂ ಹಾಗೆಯೇ ಬಂದಿದೆ. ಕಾಗೋಡು ತಮಗೆಲ್ಲಾ ಗೊತ್ತಿರುವ ಹಾಗೆ ಇದಕ್ಕೆ ಸಾಕ್ಷಿ. ಹಿಂದಿನಿಂದಲೂ ಇದ್ದಂಥ ರೈತರನ್ನು ಆಮೇಲೆ ಬಂದಂಥ ಜಮೀನುದಾರರು ಹೇಗೆ ಅವರನ್ನು ಭೂಮಿ ಬಿಟ್ಟು ಓಡಿಸಿದರು ಎಂಬುದು ತಮಗೆ ಗೊತ್ತಿದೆ. ಈ ರೀತಿ ಎಷ್ಟೋ ನಿತ್ಯಜೀವನದಲ್ಲಿ ನಡೆಯುತ್ತಿವೆ. ಬೆಡಗೂರು ಗ್ರಾಮದಲ್ಲಿ ಈಗ ರೈತರನ್ನು ಓಡಿಸುತ್ತಿದ್ದಾರೆ. ಗುತ್ತಿಗೆಯನ್ನು ಅಳೆಸುವಾಗ $\frac{1}{3}$ ಭಾಗ ಬಿಡುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ಕೋರ್ಟಿಗೆ ಕಳುಹಿಸುವ ಹಾಗೆ ಏರ್ಪಾಡುಮಾಡಬೇಕು.

ಶ್ರೀ ಎಸ್. ಗೋಪಾಲಗೌಡ.—ಅದನ್ನು ತಮ್ಮ ಪಾರ್ಟಿಯವರು ಮಾಡಬೇಕು. ಹಾಗೆ ಮಾಡದಿದ್ದರೆ ಹೇಗೆ ಆಗುತ್ತದೆ ? ಕಾನೂನು ಮಾಡುವಾಗ ಜನತೆಗೆ ಅನುಕೂಲವಾಗಲಿ ರಕ್ಷಣೆಯಾಗಲಿ ಇರುವಂತೆ ಮಾಡಬೇಕು. ಜಮೀನ್ದಾರರ ಸಂಖ್ಯೆ ಕಡಿಮೆ ಆದರೆ ರೈತರ ಸಂಖ್ಯೆ ಜಾಸ್ತಿ. ಈ ಜಮೀನ್ದಾರರಿಗೆ ಖಾತೆ ಇದೆ, ಪಟ್ಟಾ ಇದೆ. ಯಾರು ಯಾರಿಗೆ ಭೂಮಿ ಕೊಟ್ಟಿದ್ದಾರೆ, ಎಷ್ಟೆಷ್ಟು ಕೊಟ್ಟಿದ್ದಾರೆ, ಎಷ್ಟು ಗೇಣಿಯನ್ನು ಅಳೆಸುತ್ತಿದ್ದಾರೆಂಬುದನ್ನು ಅವರ ಹತ್ತಿರ ಕೇಳಿ ತಿಳಿದುಕೊಳ್ಳುವುದಕ್ಕೆ ಒಂದು ನೋಟಿಫಿಕೇಷನನ್ನು ತಾವು ಏತಕ್ಕೆ ಮಾಡಬಾರದು ? ಈ ಹೊತ್ತಿಗೂ ಕೂಡ ಆ ಕಾನೂನು ಜಾರಿಯಲ್ಲಿದ್ದರೂ ಅದು null and void ಆಗಿದೆ. ಈ ಹೊತ್ತಿಗೂ ಕೂಡ ಜಾಲ ಗೇಣಿಕಾರರು ಬರೆಸಿಕೊಂಡಿದ್ದಾರೆ.

ಅಧ್ಯಕ್ಷರು.—ಅವರು ಕೋರ್ಟಿಗೆ ಹೋಗುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಕೋರ್ಟಿಗೆ ರೈತನನ್ನು ಯಾರು ಕರೆದುಕೊಂಡು ಹೋಗಬೇಕೆಂಬುದೇ ಈಗಿರುವ ಪ್ರಶ್ನೆ.

ಶ್ರೀ ಕಡಿದಾಳ್ ಮಂಜಪ್ಪ.—Assembly ಸದಸ್ಯರು (ನಗು).

ಶ್ರೀ ಎಸ್. ಗೋಪಾಲಗೌಡ.—ಇಲ್ಲಿ ಕಾನೂನನ್ನು ಮಾಡುವುದು ಎಷ್ಟು ಅವಶ್ಯಕವೋ ಅದನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರುವುದು ಮತ್ತು ಸಕಾಲದಲ್ಲಿ ಅವರಿಗೆ ನ್ಯಾಯವನ್ನು ಒದಗಿಸಿಕೊಡುವುದು ಕೂಡ ಅಷ್ಟೇ ಅವಶ್ಯಕ ಎನ್ನುವುದನ್ನು ನಾನು ಇಲ್ಲಿ ಒತ್ತಿ ಹೇಳುತ್ತೇನೆ. ಶ್ರೀಮಾನ್ ಭೀಮಪ್ಪನಾಯಕ್ ಅಂಥವರು ತಪ್ಪು ತಿಳಿದುಕೊಳ್ಳುವುದಕ್ಕೆ ಸಾಧ್ಯವಿದೆಯೇ ? ಅವರು ceiling limit ಏನು ಎನ್ನುವ ಬಗ್ಗೆ ವಾದ ಮಾಡಿದ್ದಾರೆ. ದೇಶದಲ್ಲಿ ಗೊಂದಲ ಎದ್ದಿರುವುದು "ಶ್ರೀಮಾನ್ ಮಂಜಪ್ಪಗೌಡರು ceiling limit ಮಾಡುತ್ತಾರೆ. ಅದು 100 ಎಕರೆಯಂತೆ. 100 ಎಕರೆಗಿಂತ ಜಾಸ್ತಿ ಇರುವವರಿಗೆ ಯಾರ ಯಾರ ಹೆಸರಿಗೆ ಜಮೀನನ್ನು ಬರೆಯುವುದಕ್ಕೆ ಸಾಧ್ಯ" ಎಂದು ಈರೀತಿಯಾಗಿ ಈಗಾಗಲೇ ಹಿಸ್ಸೆಗಳು ನಡೆಯುತ್ತಿವೆ. ಹೆಣ್ಣು ಮಕ್ಕಳಿಗೂ ಹಿಸ್ಸೆಗಳನ್ನು ಕೊಡೋಣ ಎನ್ನುತ್ತಿದ್ದಾರೆ. ಒಪ್ಪಂದದಲ್ಲಿ 100 ಎಕರೆ ಇದ್ದರೆ ಅದನ್ನು ಹದ್ದುಬಸ್ತು ಮಾಡೋಣ ಎಂದು ಈರೀತಿ ಮಾಡುತ್ತಿದ್ದಾರೆ. ಆ ಕಾನೂನು ಬರುತ್ತದೆಂದು ಸುಮ್ಮನೆ ಪ್ರಚಾರಮಾಡಿ ಹೀಗೆಲ್ಲಾ ತೊಂದರೆಯಾಗುತ್ತಿದೆ. ಕರಾರು ಬರೆದುಕೊಡಿ ಎಂದು ಹೆಸರಿಸಿದ ಕಾನೂನು ನನ್ನ ಗಮನಕ್ಕೆ ಬಂದಿದೆ. ಒಬ್ಬರನ್ನು ಜಮೀನ್ದಾರರು ಕರೆಸಿಕೊಂಡು ನಿಮ್ಮಿಂದ ಬಾಕಿ ಬರುವುದು ಇದೆ. ನಿಮ್ಮಿಂದ ಎರಡು ಖಂಡುಗ ಬತ್ತಬಾಕಿ ಬರುವುದು ಇದೆ, ಅದನ್ನು ಬರೆದಿದ್ದೇನೆ, ಅದಕ್ಕೆ ರುಜುಹಾಕಿ ಎಂದು ಒಬ್ಬ ರೈತನಿಗೆ ಹೇಳಿದರು. ಆ ರೈತ ಅದಕ್ಕೆ ರುಜು ಹಾಕಿದ. ತಕ್ಷಣ ಜಮೀನುದಾರರು ನಾಳೆಯಿಂದ ತೋಟಕ್ಕೆ ಕಾಲು ಇಟ್ಟರೆ ನಿನ್ನ ಕಾಲನ್ನು ಮುರಿಯುತ್ತೇನೆ ಎಂಬುದಾಗಿ ಹೇಳಿದರಂತೆ.

ಶ್ರೀ ಕಡಿದಾಳ್ ಮಂಜಪ್ಪ.—Crescent Houseನ ಹತ್ತಿರ ಒಬ್ಬ ವ್ಯಕ್ತಿ ಬಂದು ತಮ್ಮನ್ನು ಬರೆದ ಕೊಡಿ ಎಂದು ಕೇಳಿದಾಗ ನೀವು ಸುಮ್ಮನೆ ಕಣ್ಣು ಮುಚ್ಚಿಕೊಂಡು ಬರೆದುಕೊಟ್ಟರೆ ಆಗ ಸರ್ಕಾರ ಏನುತಾನೇ ಮಾಡುವುದಕ್ಕಾಗುತ್ತದೆ ?

ಶ್ರೀ ಎಸ್. ಗೋಪಾಲಗೌಡ.—ಜನರನ್ನು ಅಂತಹ ಸ್ಥಿತಿಯಲ್ಲಿ ಇಟ್ಟಿದ್ದೀರಲ್ಲಾ ! ಅದಕ್ಕೆ ತಾವೇ ಕಾರಣರು. ಈ ಕೇಸು ಬರುತ್ತದೆ. ಅವರು ತಮ್ಮ ಸ್ನೇಹಿತರೇ ; ಒಳ್ಳೆಯ ವಕೀಲರು ಮತ್ತು ಒಳ್ಳೆ Advocateರು. ಅವರು ಸತ್ಯನಾರಾಯಣ ವ್ರತಕ್ಕೆ ನಮ್ಮ ಮನೆಗೆ ಬನ್ನಿ ಎಂದು ಕರೆಸಿಬಿಟ್ಟು ಈರೀತಿ ಬರೆದುಕೊಡು, ಇಲ್ಲದಿದ್ದರೆ ಕಾಲು ಮುರಿಯುತ್ತೇನೆ ಎಂದು ಹೇಳಿದರಂತೆ. ಇಂತಹ ಉದಾಹರಣೆಗಳು ಅಪರೂಪವಲ್ಲ. ಆದುದರಿಂದ ಈ ಪದ್ಧತಿಯನ್ನು ತೊಡೆದು ಹಾಕಬೇಕಾದರೆ ಈ ಕಾನೂನು ಬಹಳ ತೀವ್ರವಾದ ರೀತಿಯಲ್ಲಿ ಬರಬೇಕು, ಅದು ಎಲ್ಲರಿಗೂ ಅನ್ವಯಿಸುವಂಥದ್ದಾಗಿರಬೇಕು, ಮತ್ತು ಅದನ್ನು ಜಾರಿಗೆ ಕೊಡುವಾಗ ಅದಕ್ಕೆ ಒಂದು ಬೇರೆ ಕೋರ್ಟನ್ನೇ ಮಾಡಬೇಕು. ಹಾಗಿಲ್ಲದೆ Amildarರಿಗೆ ಈ ಕೇಸುಗಳನ್ನು ಒಪ್ಪಿಸಿಬಿಟ್ಟರೆ ಇದರಿಂದ ತೊಂದರೆಯಾಗುತ್ತದೆ. ಅವರಿಗೆ ಕೆಲಸ ಜಾಸ್ತಿ ಇರುತ್ತದೆ. ಅವರು ತಮ್ಮ ಕೆಲಸದ ಜೊತೆಗೆ ಈ ಕೇಸುಗಳಿಗೆ ಸಂಬಂಧಪಟ್ಟಂತೆ spot inspection ಮಾಡಿ evidence ತೆಗೆದುಕೊಂಡು ಈ ಕೇಸುಗಳನ್ನು ಇತ್ಯರ್ಥ ಮಾಡುವುದಕ್ಕೆ ಕಷ್ಟವಾಗುತ್ತದೆ. ಈಗ ಅನೇಕ ಕೇಸುಗಳು ಪೆಂಡಿಂಗ್‌ನಲ್ಲಿ ಇಲ್ಲವೇ ? ಅಸಿಸ್ಟೆಂಟ್ ಕಮೀಷನರ್‌ರವರಿಗೆ ಅಧಿಕಾರ ಕೊಟ್ಟು ಅವರು Shimogaದಲ್ಲಿ ಇರುವುದಾದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಆಗಲೇ ನಾನು ಹೇಳಿದ್ದೇನೆ. ಎಲ್ಲಿ ಈ ಸಮಸ್ಯೆ ಇದೆಯೋ ಅಲ್ಲಿ ಘರ್ಷಣೆ ಮತ್ತು ವಾದ ವಿವಾದಗಳು ನಡೆಯುತ್ತವೆ. ಎಲ್ಲಿ ಈ ತರಹ ಕೇಸುಗಳು ಹೆಚ್ಚಾಗಿವೆಯೋ ಅಂತಹ ಸ್ಥಳಗಳಲ್ಲಿ ಈ ಕೋರ್ಟು ಒಂದು ವಾರ ಅಥವಾ ಎರಡು ವಾರಗಳು ಕುಳಿತುಕೊಂಡು ಅಲ್ಲಿ ಆ ಕೇಸುಗಳನ್ನು ವಿಚಾರಮಾಡಿ ತೀರ್ಮಾನಕೊಡುವ ರೀತಿಯಲ್ಲಿ ಮಾಡಬೇಕು ಎನ್ನುವ ಒಂದು ವಿಧಾನವನ್ನು ಈ ಮಸೂದೆಯಲ್ಲಿ ಸೇರಿಸುವುದು ಬಹಳ ಒಳ್ಳೆಯದೆಂದು ನಾನು ಸರಕಾರಕ್ಕೆ ಸಲಹೆ ಮಾಡುತ್ತೇನೆ. ಆಮೇಲೆ eviction ವಿರುದ್ಧವಾಗಿ ಇದರಲ್ಲಿ ಸ್ವಲ್ಪಮಟ್ಟಿಗೆ ಮೂಲ ಕಾನೂನಿನಲ್ಲಿರುವುದಕ್ಕಿಂತ ಹೆಚ್ಚಾಗಿ ಅವಕಾಶಕೊಟ್ಟಿದೆ,

"ಯಾವುದೇ ಒಂದು ಒಪ್ಪಂದ, ಸಂಪ್ರದಾಯ, ಕೋರ್ಟಿನ ಡಿಕ್ರಿ, ಅಥವಾ ಹುಕುಂ ಇದ್ದಾಗ್ಯೂ ಸಹ ಒಬ್ಬ ಷಿಕ್ಮಿದಾರನು—

(*a*) (i) ತಾನು ಷಿಕ್ಮಿದಾರನಾಗಿರತಕ್ಕ ಯಾವುದಾದರೂ ಜಮೀನಿನ ಯಾವುದಾದರೂ ಸಾಲಿನ ಗುತ್ತಾ ಮೊಬಲಗನ್ನು ಪಾವತಿಮಾಡಲು ತಪ್ಪಿದ್ದ ಹೊರತು, ಅಥವಾ

(ii) ಹನ್ನೆರಡನೆ ಪ್ರಕರಣದ ಮೇರೆಗೆ, ನ್ಯಾಯವಾದ ಗುತ್ತಾವನ್ನು ನಿರ್ಧರಿಸುವುದಕ್ಕಾಗಿ 12ನೆ ಪ್ರಕರಣದ ಮೇರೆಗೆ ಹಾಕಿಕೊಂಡ ಅರ್ಜಿಯು ಅಮಲ್ದಾರ್‌ರವರಲ್ಲಿ ಅಥವಾ ಅಸಿಸ್ಟೆಂಟ್ ಕಮೀಷನರ್‌ರವರಲ್ಲಿ ಅಥವಾ ಡೆಪ್ಯುಟಿ ಕಮಿಷನರ್‌ರವರಲ್ಲಿ ಇತ್ಯರ್ಥವಾಗದೆ ಉಳಿದಿರತಕ್ಕ ಸಂದರ್ಭದಲ್ಲಿ, ಅಂಥ ಷಿಕ್ಮಿದಾರನು ಒಂದುವೇಳೆ ಅಂಥ ಯಾವ ಅರ್ಜಿಯನ್ನೂ ಸಲ್ಲಿಸದೇ ಇದ್ದಿದ್ದ ಪಕ್ಷಕ್ಕೆ ಆ ಸಾಲಿಗೆ ಯಾವ ಗುತ್ತಾವನ್ನು ಪಾವತಿಮಾಡಲು ಬದ್ಧನಾಗಿರುತ್ತಿದ್ದನೋ ಆ ಮೊಬಲಗಿಗೆ ಸಮವಾದ ಒಂದು ಮೊಬಲಗನ್ನು ಆಯಾ ಸಂದರ್ಭಾನುಸಾರ ಅಮಲ್ದಾರ್‌ರವರಲ್ಲಿ ಅಥವಾ ಅಸಿಸ್ಟೆಂಟ್ ಕಮಿಷನರ್‌ರವರಲ್ಲಿ ಡೆಪ್ಯುಟಿ ಕಮಿಷನರ್‌ರವರಲ್ಲಿ ಠೇವಣಿ ಪಡೆಯಲು ತಪ್ಪಿದ್ದ ಹೊರತು, ಅಥವಾ

(iii) ಹನ್ನೆರಡನೆಯ ಪ್ರಕರಣದ ಮೇರೆಗೆ ನಿರ್ಧರಿಸಲ್ಪಟ್ಟಿರತಕ್ಕ ನ್ಯಾಯವಾದ ಗುತ್ತಾ ಮೊಬಲಗು ಷಿಕ್ಮಿದಾರನು ಠೇವಣಿಯಿಟ್ಟಿರತಕ್ಕ ಮೊತ್ತಕ್ಕಿಂತಲೂ ಅಧಿಕವಾಗಿದ್ದ ಸಂದರ್ಭದಲ್ಲಿ, ಆಯಾ ಸಂದರ್ಭಾನುಸಾರ ಅಮಲ್ದಾರ್‌ರವರು ಅಥವಾ ಅಸಿಸ್ಟೆಂಟ್ ಕಮಿಷನರ್‌ರವರು ಅಥವಾ ಡೆಪ್ಯುಟಿ ಕಮಿಷನರು, ತೀರ್ಮಾನಿಸತಕ್ಕ ತಾರೀಖಿನಿಂದ ಎರಡು ತಿಂಗಳುಗಳೊಳಗಾಗಿ ತನ್ನಿಂದ ಸಲ್ಲಬೇಕಾಗಿರತಕ್ಕ ಬಾಕಿ ಮೊಬಲಗನ್ನು ಪಾವತಿಮಾಡಲು ಅವನು ತಪ್ಪಿದ ಹೊರತು,

(*b*) ಜಮೀನಿಗೆ ನಾಶಕರವಾದಂಥ ಅಥವಾ ಖಾಯಮಾಗಿ ನಷ್ಟವನ್ನುಂಟು ಮಾಡುವಂಥ ಯಾವುದಾದರೂ ಕೆಲಸವನ್ನು ಮಾಡಿದ್ದ ಹೊರತು,

(*c*) ಜಮೀನನ್ನು ಒಳವಿಭಾಗ ಮಾಡಿದ್ದ ಹೊರತು,

(*d*) ಜಮೀನನ್ನು ಒಳಗೇಣಿಗೆ ಕೊಟ್ಟಿದ್ದ ಹೊರತು ಅಥವಾ ಅದನ್ನು ತಾನೇ ಸ್ವಂತವಾಗಿ ವ್ಯವಸಾಯ ಮಾಡಲು ತಪ್ಪಿದ್ದ ಹೊರತು,

(*c*) ಜಮೀನನ್ನು ವ್ಯವಸಾಯ ಮಾಡದೆ ಬಂಜರು ಬಿಟ್ಟಿದ್ದ ಹೊರತು ಅಥವಾ

(*f*) ವ್ಯವಸಾಯದ ಉದ್ದೇಶವಲ್ಲದ ಇತರ ಉದ್ದೇಶಕ್ಕಾಗಿ ಅಂಥ ಜಮೀನನ್ನು ಉಪಯೋಗಿಸಿದ್ದ ಹೊರತು . . ."—ಎಂಬುದಾಗಿ ಹೇಳಿ ಷಿಕ್ಮಿಯನ್ನು ಬಿಡಿಸುವುದನ್ನು ಹೇಳಿದೆ. ನಾನಾಗಲೇ ಹೇಳಿದಂತೆ 'ಎರಡು ತಿಂಗಳೊಳಗಾಗಿ' ಎಂದಿರುವುದನ್ನು ತೆಗೆದು ಒಂದು ವರ್ಷ ಎಂದು ಮಾಡುವುದರಿಂದ ರೈತನಿಗೆ ಬಹಳ ಅನುಕೂಲ ಮಾಡಿದಂತಾಗುತ್ತದೆ. ಇಲ್ಲದಿದ್ದರೆ, ತೀರ್ಮಾನಕೊಟ್ಟ ಎರಡು ತಿಂಗಳೊಳಗೆ ಸಲ್ಲಿಸುವುದು ಬಹಳಕಷ್ಟ. ಇದರಿಂದ ಭೂಮಿಯನ್ನು ಬಿಡಿಸುವುದಕ್ಕೆ ಜಮೀನ್ದಾರರಿಗೆ ಅನುಕೂಲ ಮಾಡಿದಂತಾಗುತ್ತದೆ.

ಒಬ್ಬ ಸದಸ್ಯರು.—ಒಂದು ವರ್ಷ ಎಂದು ಹೇಳಿದರೆ, ಅಷ್ಟುಹೊತ್ತಿಗೆ ಇನ್ನೊಂದು ವರ್ಷ ಬರುತ್ತದೆಯಲ್ಲವೇ ?

ಶ್ರೀ ಎಸ್. ಗೋಪಾಲಗೌಡ.—ಇಲ್ಲದಿದ್ದರೆ ಕಂತುಗಳಲ್ಲಿ ತೆಗೆದುಕೊಳ್ಳುವಂತೆ ಮಾಡಿ. ಎಲ್ಲಿ ಜಮೀನ್ದಾರರು ಗೇಣಿಯನ್ನೇ ಅವಲಂಬಿಸಿಕೊಂಡು ಜೀವನ ಮಾಡುತ್ತಿರುತ್ತಾರೋ ಅಲ್ಲಿ ಮಾತ್ರ ಇದರಿಂದ ಸ್ವಲ್ಪ ಕಷ್ಟವಾಗಬಹುದು, ಅಷ್ಟೆ.

ಒಬ್ಬ ಸದಸ್ಯರು.—ಅಂಥವರಿಗೂ ಕೊಡದೆ ಹೋದರೆ !

ಶ್ರೀ ಎಸ್. ಗೋಪಾಲಗೌಡ.—ತಾವೇ ಎಲ್ಲರೂ 'ಉದಾರವಾಗಿ ಬಿಟ್ಟುಕೊಟ್ಟಿದ್ದೇವೆ, ವಿನೋಬಾ ಭಾವೆಯವರಿಗೆ ಧಾರೆಯೆರೆದಿದ್ದೇವೆ' ಎಂದು ಹೇಳಿದ್ದರೆ ಲೋಕಕಲ್ಯಾಣವಾಗುತ್ತಿತ್ತು. ಅವರ ಮಾತಿಗೆ ಬೆಲೆಕೊಟ್ಟು ಜಮೀನ್ದಾರರು ತಮ್ಮ ಜಮೀನನ್ನು ಬಿಟ್ಟುಕೊಡುವುದಾದರೆ, ಇಂಥ ಕಾನೂನು ಮಾಡುವ ಅವಶ್ಯಕತೆಯೇ ಇರುತ್ತಿರಲಿಲ್ಲ. ಅಂಥವರಿದ್ದರೆ ಮುಂದೆ ಬಂದು ಈ ಸಭೆಯಲ್ಲಿ ಬೇಕಾದರೆ 'ತಾನು ಇಷ್ಟು ಬಿಟ್ಟುಕೊಟ್ಟೆ' ಎಂದು declare ಮಾಡಿಕೊಳ್ಳಬಹುದು. ಅದು ಎಲ್ಲಾ ದೇಶಕ್ಕೂ ಮಾದರಿಯಾಗಿರುತ್ತದೆ. ಆ ರೀತಿ ಹೆಚ್ಚಿಗೆ ಜಮೀನಿರುವವರೆಲ್ಲರೂ ತಮಗಾಗಿ ಹತ್ತಿಪ್ಪತ್ತು ಎಕರೆಗಳನ್ನು ಮಾತ್ರ ಇಟ್ಟುಕೊಂಡು, ಮಿಕ್ಕದ್ದನ್ನೆಲ್ಲಾ ಇತರರಿಗೆ ಬಿಟ್ಟುಕೊಟ್ಟು ತಾವು ಆ ಹತ್ತಿಪ್ಪತ್ತು ಎಕರೆಗಳಿಗೆ ಮಾತ್ರ ಕಂದಾಯ ಕೊಡಲು ಬದ್ಧರು, ಮಿಕ್ಕದ್ದನ್ನು ಬೇರೆಯವರಿಂದ ತಗೆದುಕೊಳ್ಳಬಹುದು ಎಂದು ಹೇಳುವುದಾದರೆ ಅದಕ್ಕಿಂತ ಹೆಚ್ಚಿನ ಕ್ರಾಂತಿ ಇರುತ್ತದೆಯೇ ? ನಮಗೂ ಈ ಮಸೂದೆಗಳ ತೊಂದರೆ ಯಿರುವುದಿಲ್ಲ. ಜನರು ಅದನ್ನು ಮಾಡುವುದು ಸೂಕ್ತ. ಮುಂದೆ ಆ ರೀತಿ ಮಾಡಿಯಾರು ಎಂದು ಕಾದು ಈ ಮಸೂದೆಯನ್ನು

ಮಾಡದೆ ಇರುವುದಕ್ಕಾಗುವುದಿಲ್ಲ. ಅದರ ಅಗತ್ಯ ಈಗ ಬಹಳವಾಗಿದೆ. ಏಕೆಂದರೆ, ಈಗಿರತಕ್ಕ ಪದ್ಧತಿಯಿಂದ ರೈತನನ್ನು ರಕ್ಷಿಸಬೇಕಾದರೆ ಈ ಕಾನೂನು ಮತ್ತಷ್ಟು ತೀವ್ರವಾಗಿರಬೇಕು. ಆದ್ದರಿಂದ ನಾನು ಮೊದಲೇ ಹೇಳಿದ ಹಾಗೆ, ಟೆನೆನ್ಸಿಯನ್ನು ರೈತನು ತಾನಾಗಿ ವಾಪಸ್ಸು ಕೊಟ್ಟರೆ, ಅಥವಾ ತಾನು ಉಳುಮೆ ಮಾಡದೆ ಹಾಳುಬಿಟ್ಟರೆ ಅಥವಾ ಗೇಣಿಯನ್ನು ಕೊಡುವುದಕ್ಕೆ ನಿರಾಕರಿಸಿದರೆ ಅಂಥ ಸಮಯಗಳಲ್ಲಿ ಗೇಣಿಯನ್ನು ಕಿತ್ತುಕೊಳ್ಳುವುದಕ್ಕೆ ಹಕ್ಕಿರಬೇಕೇ ವಿನಾ ಬಾಕಿ ಸಂದರ್ಭಗಳಲ್ಲಿ ಅವಕಾಶವೇ ಇರಕೂಡದು.

ಆಮೇಲೆ, ಟೆನೆನ್ಸಿ ಅವಧಿಯ ವಿಷಯದಲ್ಲಿ ಹತ್ತು ವರ್ಷ ಎಂದು ಹೇಳಿದ್ದಾರೆ. ಇದನ್ನೇಕೆ ಹೀಗೆ ಮೊಟಕು ಮಾಡಬೇಕಾಗಿತ್ತು? ನಮ್ಮ ಕಡೆಗಳಲ್ಲಿ ಈಗಲೂ ವಂಶಪಾರಂಪರ್ಯ ಗೇಣಿ ಪದ್ಧತಿಯಿರಲಿಲ್ಲವೇ?

Sri Kadidal MANJAPPA.—That is not affected by this.

ಶ್ರೀ ಎಸ್. ಗೋಪಾಲಗೌಡ.—ಹೌದು, ಹೌದು; ಹಾಗೆಯೇ ಅಲ್ಲಿನ weights ಮತ್ತು measures ಕೂಡ affect ಆಗಿಲ್ಲ.

ನಮ್ಮ ಕಡೆಯಲ್ಲಿ ಸರಿಯಾದ ಪತ್ರಗಳ ಆಧಾರದ ಮೇಲೆ ಈ ರೀತಿಯಾಗಿ ವಂಶಪಾರಂಪರ್ಯವಾಗಿ ಷಿಕ್ಮಿಗಳು ರೂಢಿಸಿಕೊಂಡು ಬರುತ್ತಿರುವ ಸಂದರ್ಭಗಳಿವೆ. ಈ ಬಿಲ್ಲಿನಲ್ಲಿಯೂ ಕೂಡ ಅಂಥ ಅವಕಾಶವನ್ನು ಕೊಡುವುದರಿಂದ ಏನು ತಪ್ಪಾಗುತ್ತದೆ? ಬೇಕಾದರೆ ತಾವು ಹೇಳುವ ಪ್ರಕಾರ ಸ್ವಂತ ಸಾಗುವಳಿಗೆ $6\frac{1}{4}$ ಭಾಗ ಬಿಡಿಸಿಕೊಳ್ಳಬಹುದೆಂದು ಮಾಡಬಹುದು. ಆದರೆ, ಹತ್ತು ವರ್ಷ ಎಂದು ಒಂದು ನಿಗದಿಮಾಡುವುದಕ್ಕೆ ಕಾರಣವಾದರೂ ಏನಿದೆ? ರೈತನು ಹಾಗೆಯೇ ಮುಂದುವರಿದುಕೊಂಡು ಹೋಗುವುದಕ್ಕೆ ಈ ಮಸೂದೆಯಲ್ಲಿ ಅದಷ್ಟು ಅವಕಾಶ ಮಾಡಿಕೊಡಬೇಕು. ಹೀಗೊಂದು ಅವಧಿ ಮಾಡಿಬಿಟ್ಟರೆ ಅದರ ಪರಿಣಾಮವೇನಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಆ ಅವಧಿಯಷ್ಟಕ್ಕೇ ಅವನ ಮನಸ್ಸು ಓಡುತ್ತಿದೆಯೇ ಹೊರತು ಶಾಶ್ವತವಾಗಿ ಯಾವ ಅಭಿವೃದ್ಧಿ ಕಾರ್ಯವನ್ನು ಮಾಡುವುದಕ್ಕೂ ಅವನು ಕೈಹಾಕುವುದಿಲ್ಲ. ಏಕೆಂದರೆ, ಹತ್ತು ವರ್ಷವಾದಮೇಲೆ ತನ್ನನ್ನು ಬಿಡಿಸಿಬಿಡಬಹುದೆಂಬ ಭಯ ಅವನಿಗೆ ಉಂಟಾಗುತ್ತದೆ. ಈ ಅಂಶವನ್ನು ತಾವು ಮುಖ್ಯವಾಗಿ ಪರಿಶೀಲನೆ ಮಾಡಿ ಆದಷ್ಟು ದೀರ್ಘಾವಧಿ tenancyಯನ್ನು ಕೊಡುವುದಕ್ಕೆ ಈ ಮಸೂದೆಯಲ್ಲಿ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಆಮೇಲೆ ಲಿಮಿಟೇಷನ್ ವಾಯಿದೆ ಎಂದು ಹೇಳಿ ಬಿಲ್ಲಿನಮೇಲೆ ಪುನರ್ವಿಮರ್ಶೆ ಅರ್ಜಿಗೆ ಅವಕಾಶ ಮಾಡಿಕೊಟ್ಟಿದೆ. ಈ ಅರ್ಜಿಯನ್ನು ಸಲ್ಲಿಸುವುದಕ್ಕೆ ಅರವತ್ತು ದಿನಗಳ ಅವಧಿಯನ್ನು ಕೊಟ್ಟಿದೆ. ಈ ಕಾಲಾವಧಿಯನ್ನು ಕೂಡ ಹೆಚ್ಚಿಸುವುದು ಬಹಳ ಅಗತ್ಯ. ತಿದ್ದುಪಡಿ ಮಾಡುವಾಗ ಇದನ್ನು ಕೈಬಿಟ್ಟಿರುವಂತೆ ಕಾಣುತ್ತದೆ. ಈಗಲಾದರೂ ಕಂದಾಯ ಮಂತ್ರಿಗಳು ಇದರ ಬಗ್ಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ರೈತರಿಗೆ ಸ್ವಲ್ಪ ಜಾಸ್ತಿ ವಾಯಿದೆ ಕೊಡಬೇಕಾದ್ದು ಅವಶ್ಯಕ. ಮೂವತ್ತು ದಿವಸಗಳಲ್ಲಿ ಕೊಡಬೇಕು ಎಂದು ಹೇಳಿ ಲೆಕ್ಕ ಹಾಕಿಕೊಳ್ಳುವುದಕ್ಕೆ calendar ಇರುವುದಿಲ್ಲ. ಅವರೇನಿದ್ದರೂ ದೀಪಾವಳಿಯಿಂದ ದೀಪಾವಳಿಯವರೆಗೆ ಎಂದರೆ ನೆನಪಿಟ್ಟುಕೊಳ್ಳಬಹುದು. ಲಿಮಿಟೇಷನ್ ವಿಚಾರದಲ್ಲಿ ಆ ಆಕ್ಟಿನ 14, 15, 16ನೆಯ ವಿಧಿಗಳು ಅನ್ವಯಿಸುವುದಿಲ್ಲವೆಂದು ಹೇಳಿದ್ದೀರಿ. ಹಾಗೆಯೇ ಇನ್ನೂ ಇತರ ನಿಯಮಗಳೂ ಅನ್ವಯಿಸುವುದಿಲ್ಲವೆಂದು ಹೇಳಿದ್ದರೆ ರೈತನಿಗೆ ಮತ್ತಷ್ಟು ಅನುಕೂಲ ಮಾಡಿದಹಾಗಾಗುತ್ತಿತ್ತು.

ಈ ಮಸೂದೆ ಬಹುಶಃ ಪರಿಶೀಲನಾ ಸಮಿತಿಗೆ ಕಳುಹಿಸಲ್ಪಡಬಹುದೆಂದು ಕಾಣುತ್ತದೆ. ಏಕೆಂದರೆ, ಅನೇಕ ತಿದ್ದುಪಡಿಗಳನ್ನು ಮಾನ್ಯ ಸದಸ್ಯರು ಕಳುಹಿಸಿದ್ದಾರೆ. ಅವೆಲ್ಲಾ ಪರಿಶೀಲನೆಯಾಗಿ ಬಹುಶಃ ಈ ಅಧಿವೇಶನದಲ್ಲೇ ಬರಲಾರದು. ಆದ್ದರಿಂದ ಈ ತಿದ್ದುಪಡಿಗಳನ್ನು ಪುನಃ ಅಮೂಲಾಗ್ರವಾಗಿ ಪರಿಶೀಲನೆಮಾಡಿ, ನಾನು ಕೆಲವು ಸೂಚನೆಗಳನ್ನು ಕೊಟ್ಟ ಪ್ರಕಾರ, ಅದರಲ್ಲೂ ಮುಖ್ಯವಾಗಿ 1/6 ಭಾಗದಷ್ಟು ಅಂಶ ಮಾತ್ರ ಜಮೀನ್ದಾರರಿಗೆ ಸಲ್ಲಬೇಕೆಂಬುದನ್ನು ಪರಿಗಣಿಸಲೇಬೇಕು. ಇದನ್ನು ಸರ್ಕಾರದವರ ನೋಟಿಫಿಕೇಷನ್ ಮುಖಾಂತರ ಮಾಡುತ್ತೇವೆಂದರೆ ಏನೂ ಪ್ರಯೋಜನವಿಲ್ಲ. Weights and measures ವಿಷಯದಲ್ಲೂ ಕೂಡ ನಾನು ಹೇಳಿದ ಲೋಪದೋಷಗಳನ್ನು ಮನಗಂಡು ಸರಿಯಾದ ರೀತಿಯಲ್ಲಿ ಜಾರಿಗೆ ಬರುವಂತೆ ಮಾಡಬೇಕು. ನಮ್ಮ ಸ್ನೇಹಿತರು ಕೆಲವರು ಈ ಸಮಸ್ಯೆ ತಮ್ಮ ಕಡೆ ಇಲ್ಲವೆಂದು ಹೇಳಿ ಈ ಮಸೂದೆಯನ್ನು ಹಿಂದಕ್ಕೆ ಹಾಕುವುದಾದರೆ, ಕೊನೆಯ ಪಕ್ಷ ನಮ್ಮ ಮಲೆನಾಡಿನಲ್ಲಾದರೂ ಇದನ್ನು ತಂದು ಅಲ್ಲಿನ ಸಮಸ್ಯೆಯನ್ನು ಪರಿಹರಿಸಲೆಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ evictionಗಳಾಗಿ ಅಲ್ಲಿ ಬಹಳ ಅನ್ಯಾಯವಾಗುತ್ತದೆ. ರಶೀದಿಗಳನ್ನೇ ಕೊಟ್ಟಿರುವುದಿಲ್ಲ; ಐದು ವರ್ಷದ ಗೇಣಿ ಪತ್ರವನ್ನು ಯಾರೂ ಬರೆದು ಕೊಡುತ್ತಿಲ್ಲ. ಇದರಿಂದಾಗಿ ಬಹಳ ತೊಂದರೆಗೆ ಅವಕಾಶವಾಗಿದೆ. ಈ ಕಾನೂನು ಒಂದು ಸಾಮರಸ್ಯದಿಂದ ನಡೆದುಕೊಂಡು ಹೋಗುತ್ತಿದ್ದುದೂ ವಿರಸಕ್ಕಿಟ್ಟುಕೊಂಡಿದೆ. ಇಂಥ ಸಂದರ್ಭದಲ್ಲಿ ಸರ್ಕಾರದವರು ಹೆಚ್ಚು ವಿಳಂಬಮಾಡದೆ ಈ ಕಾನೂನನ್ನು ಸರಿಯಾಗಿ ತಿದ್ದುಪಡಿಮಾಡಿ ಜಾರಿಗೆ ತರಬೇಕಾದ್ದು ಅವಶ್ಯಕ. ಆ ರೀತಿ ತಂದು ಈ ಹೊತ್ತು ರೈತರಿಗೆ ರಕ್ಷಣೆ ಕೊಟ್ಟು ಕ್ರಮವಾಗಿ ಮಧ್ಯವರ್ತಿ ಪದ್ಧತಿಯನ್ನು ತೊಡೆದುಹಾಕಿ, ಯಾರು ಉಳುಮೆ ಮಾಡುತ್ತಾನೋ ಅವನಿಗೆ ಬೆಳೆದ ಫಸಲಿನಮೇಲೆ ಪೂರ್ಣ ಅಧಿಕಾರ ಬರುವಂತೆ ಸರ್ಕಾರದವರು ಸರಿಯಾದ ಏರ್ಪಾಡನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಮಸೂದೆಯನ್ನು ಸರ್ಕಾರದವರು ಸಭೆಯ ಮುಂದೆ ಮಂಡಿಸಿರತಕ್ಕದ್ದು ಬಹಳ ಸಮಯೋಚಿತವಾಗಿದೆ. ಬಹಳ ದಿನಗಳಿಂದ ಈ ರೀತಿಯ ಮಸೂದೆ ಗೇಣಿದಾರರಿಗೆ ಅಗತ್ಯವಾಗಿ ಬೇಕಾಗಿದ್ದಿತು. . .

4-30 P.M.

ಆದರೆ ಇದರಲ್ಲಿರತಕ್ಕಂಥ ನ್ಯೂನತೆಗಳ ಬಗ್ಗೆ ಈಗಾಗಲೇ ಮಾತನಾಡಿರತಕ್ಕಂಥ ಕೆಲವು ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ನನಗಾದರೋ ಇದು ಹೇಗೆ ತೋರುತ್ತಿದೆಯೆಂದರೆ—ಈ ಗೇಣೀ ಮಸೂದೆಯು ಎಷ್ಟು ಉದಾರಭಾವನೆಯಿಂದ ಕೂಡಿದ್ದಾಗಿರಬೇಕಾಗಿತ್ತೋ ಅಷ್ಟು ಉದಾರಭಾವನೆಯಿಂದ ಈ ಭೂ ಸುಧಾರಣೆಯ ಕಾನೂನು ಆಗಿರುವಂತೆ ನನಗೆ ಕಂಡುಬರುವುದಿಲ್ಲ. ಏತಕ್ಕೆಂದರೆ ರೈತನಾದವನಿಗೆ, ನೆಲ ಉಳತಕ್ಕಂಥ ವ್ಯಕ್ತಿಗೆ, ಸಾಕಷ್ಟು ರಕ್ಷಣೆಗಳನ್ನು ಕೊಟ್ಟು ಕೊಂಡು, ಆತನಿಗೆ ಯಾವ ಒಂದು ತೊಂದರೆಯೂ ಉಂಟಾಗದಂತೆ ಇರುವಹಾಗೆ

(ಶ್ರೀ ಬಿ. ಟಿ. ಕೆಂಪರ್ರಾಜ್.)

ಈ ಕಾನೂನನ್ನು ಕಲ್ಪಿಸುವುದು ನ್ಯಾಯ ಮತ್ತು ಅತ್ಯಾವಶ್ಯಕ. ಆದರೆ ಹಾಗೆ ಮಾಡದೆ, ನಾವೀಗ ಮಾಡುತ್ತಿರುವಹಾಗೆ ಈ ಕಾನೂನುಗಳನ್ನು ಆಗಾಗ್ಗೆ ಸ್ವಲ್ಪ ಸ್ವಲ್ಪವಾಗಿಯೇ ಅಂದರೆ ಪೀಸ್‌ಮೀಲ್ ಲೆಜಿಸ್ಲೇಷನ್ ಎನ್ನುವಹಾಗೆ ಮಾಡುತ್ತಾ ಹೋದರೆ ಆ ರೈತನಿಗೆ, ಜಮೀನು ಉಳತಕ್ಕ ವ್ಯಕ್ತಿಗೆ, ನಾವು ಸಾಕಷ್ಟು ರಕ್ಷಣೆಯನ್ನು ಕೊಟ್ಟಂತಾಗುತ್ತದೆಯೆ? ಅವರಿಗೆ ಆಗುತ್ತಿರುವಂಥ ಅನ್ಯಾಯಗಳನ್ನೆಲ್ಲಾ ಇದರಿಂದ ತಡೆಗಟ್ಟಲು ಸಾಧ್ಯವಾಗುತ್ತದೆಯೇ? ಇಂಥ ಒಂದು ಕಾನೂನನ್ನು ಮಾಡುವುದರಿಂದ ನಾವು ಅವರಿಗೆ ಅನುಕೂಲ ಕಲ್ಪಿಸಿಕೊಟ್ಟಹಾಗೆ ಆಗುತ್ತದೆಯೇ ಎಂಬುದನ್ನು ಆಲೋಚಿಸಿ ನೋಡಿದರೆ ಇದು ಅಷ್ಟೊಂದು ಆ ವಿಷಯಗಳಿಗೆ ಸಮಂಜಸವಾಗಿದ್ದಹಾಗೆ ನನಗಂತೂ ಕಂಡು ಬರುವುದಿಲ್ಲ. ಈ ಮೊದಲು ಗೇಣಿಗಾಗಿ ಭೂಮಿಯನ್ನು ಉಳತಕ್ಕವನ ಹಿತದೃಷ್ಟಿಯಿಂದ ಐದು ವರ್ಷಗಳ ಒಂದು ಅವಧಿಯನ್ನಿಟ್ಟು—ಜಮೀನಿನ ಮಾಲೀಕರು ಐದು ವರ್ಷಗಳ ಅವಧಿ ಪೂರೈಸುವತನಕ ಉಳುಮೆ ಮಾಡತಕ್ಕಂಥ ರೈತನನ್ನು ಬಿಡಿಸಬಾರದೆಂದು ಈ ಹಿಂದೆಯೇ ಕಾನೂನು ಮಾಡಿದ್ದಾಯಿತು. ಆದರೆ ಈಗ ನಮ್ಮ ಮುಂದೆ ಬಂದಿರತಕ್ಕಂಥ ಮಸೂದೆಯಲ್ಲಾದರೋ ನಾವು ಬಹು ಮುಖ್ಯವಾದಂಥ ಎರಡು ವಿಷಯಗಳನ್ನು ಮಾತ್ರ ಕಾಣಬಹುದಾಗಿದೆ. ಅವುಗಳು ಯಾವುವೆಂದರೆ—ಈ ಐದು ವರ್ಷಗಳ ಗೇಣೀ ಅವಧಿಯನ್ನು 10 ವರ್ಷಗಳಿಗೆ ಹೆಚ್ಚಿಸಿರತಕ್ಕದ್ದು ಒಂದು. ಮತ್ತೊಂದು ಪರ್ಮಿಸಿಬಲ್ ಹೋಲ್ಡಿಂಗ್ಸ್ ಎಂಬುದಾಗಿ ಒಂದು ಹೊಸ ಪರಿಮಿತಿಯನ್ನು ಇದರಲ್ಲಿ ಅಳವಡಿಸಿ ತಂದಿರುವುದು. ಇಷ್ಟುವಿನಾ ಈ ಮಸೂದೆಯಲ್ಲಿ, ನಾವಿನ್ನು ಯಾವ ಹೆಚ್ಚು ಬದಲಾವಣೆಗಳನ್ನೂ ಕಾಣಲಾರೆವು. ರೈತನಾದವನಿಗೆ, ನೆಲ ಉಳತಕ್ಕ ಮನುಷ್ಯನಿಗೆ ಎಷ್ಟರಮಟ್ಟಿಗೆ ಹಿತರಕ್ಷಣೆ ಮಾಡಬೇಕಾಗಿತ್ತೋ ಅಷ್ಟರ ಮಟ್ಟಿಗೆ ಹಿತರಕ್ಷಣೆ ಮಾಡಲಿಕ್ಕೆ ಈ ಕಾನೂನಿನಿಂದ ಸಾಧ್ಯವಾಗಲಾರದೆಂದು ಕಂಡು ಬರುತ್ತದೆ. ನಾವು ಈ ಹಿಂದೆ ರೈತನಾಗಿರತಕ್ಕವನಿಗೆ—ನೆಲವನ್ನು ಉಳತಕ್ಕವನಿಗೆ—ಆದಷ್ಟು ಜಮೀನಿನ ಮೇಲೆ ಒಂದು ನಿರ್ದಿಷ್ಟವಾದ ಹಕ್ಕು ಬಾಧ್ಯತೆಯನ್ನು ಒಂದು ಭೂಸ್ವಾಮ್ಯವನ್ನು ಕಲ್ಪಿಸಿ ಕೊಡಬೇಕು ಎಂಬ ತತ್ವವನ್ನು ಒಪ್ಪಿಕೊಂಡನಂತರ ನಾವು ಈ ಕಾನೂನನ್ನು ಮಾಡಿದೆವು. ಆದರೆ ನಾವು ಆ ದಿವಸ ಈ ಕಾನೂನಿನ ಬಗ್ಗೆ ಏನೊಂದು ಧೈರ್ಯ ಮತ್ತು ಸಾಹಸಗಳನ್ನು ಮಾಡಿದ್ದೆವೋ ಅಂಥ ಧೈರ್ಯ ಮತ್ತು ಸಾಹಸಗಳನ್ನು ಮಾಡಿ ಈ ದಿವಸ ಈ ಕಾನೂನನ್ನು ತಂದಿಲ್ಲವೆಂದರೆ ಅದೇನೂ ಒಂದು ಅತಿಶಯೋಕ್ತಿಯಾಗಲಾರದು. ಜಮೀನ್ದಾರರು ಗೇಣೀದಾರರಿಗೆ ಅಂದರೆ ಜಮೀನನ್ನು ಉಳತಕ್ಕಂಥ ರೈತರಿಗೆ ಒಂದಾವರ್ತಿ ಜಮೀನನ್ನು ಕೊಟ್ಟರೆ ಆತನು ಐದು ವರ್ಷಗಳತನಕ ಆ ರೈತರಿಗೆ ಯಾವ ತೊಂದರೆಗಳನ್ನೂ ಉಂಟು ಮಾಡಬಾರದು, ಆತನು ವ್ಯವಸಾಯದಿಂದ ತಪ್ಪಿಸಿ ಬೇರೆಯವರಿಗೆ ಜಮೀನ್ ಕೊಡಕೂಡದು ಎಂದು ಈ ಹಿಂದೆಯೇ ಕಾನೂನು ಮಾಡಿದ್ದೇವೆ. ಅಥವಾ ಜಮೀನ್ದಾರರು ಇದಕ್ಕೇನಾದರೂ ಮೀರಿ ನಡೆದರೆ ಆಗ ತೊಂದರೆಗೊಳಗಾದವರು ಸಂಬಂಧಪಟ್ಟ ಅಧಿಕಾರಿಗಳಲ್ಲಿ ದೂರನ್ನು ತೆಗೆದುಕೊಂಡುಹೋಗಿ ತಮ್ಮ ಹಕ್ಕನ್ನು ರಕ್ಷಣೆ ಮಾಡಿಕೊಳ್ಳಲು ಒಂದು ಅವಕಾಶವನ್ನು ಕಾನೂನು ಮೂಲಕ ಇಲ್ಲಿಗೆ ಎರಡು ವರ್ಷಗಳ ಹಿಂದೆಯೇ ಮಾಡಿದ್ದೇವೆ. ಆದರೆ ಅದಕ್ಕಿಂತಲೂ ಹೆಚ್ಚಾಗಿ ಆತನ ರಕ್ಷಣೆಯ ಬಗ್ಗೆ ಈ ಕಾನೂನಿನಲ್ಲಿ ಮತ್ತೇನೂ ಕಂಡುಬರುವುದಿಲ್ಲ. ಆದರೆ ಈಗ ಇವರು ಈ ಕಾನೂನನ್ನು ತಂದಿರುವುದನ್ನು ನೋಡಿದರೆ ನಾವು ಈ ಹಿಂದೆ ಮಾಡಲಾಗಿದ್ದಂಥ ಕಾನೂನು ರೈತನಿಗೆ ಅಷ್ಟೇನೂ ಅನುಕೂಲವಾಗಿಲ್ಲ—ಅದಕ್ಕಾಗಿ ಇದನ್ನು ತಂದಿರಬಹುದೆಂದು ಕಾಣುತ್ತದೆ

ಆದರೆ ಈ ಪರ್ಮಿಸಿಬಲ್ ಹೋಲ್ಡಿಂಗ್ಸ್‌ನ ಬಗ್ಗೆ ಯಾವುದೋ ಒಂದು ಲೆಕ್ಕಾಚಾರ ಹಾಕಿಕೊಂಡು ಎಂಟು ಪಲ್ಲ ರಾಗಿ, ಎಂಟು ಪಲ್ಲ ಭತ್ತ ಬೆಳೆಯುವ ಜಮೀನು ಒಂದು ಸ್ಟಾಂಡರ್ಡ್ ಎಕರೆ ಎಂದೂ ಆ ರೀತಿಯ ಸ್ಟಾಂಡರ್ಡ್ ಎಕರೆಗಳು ಸುಮಾರು 25 ಎಕರೆ ಜಮೀನು ಒಬ್ಬ ವ್ಯಕ್ತಿಗೆ ಇರಬಹುದು ಎಂದೂ ಮಾಡಿದ್ದಾರೆ. ಎಂಟು ಪಲ್ಲಾ ರಾಗಿಯನ್ನು ಬೆಳೆಯುವಂಥ ಭೂಮಿಯನ್ನು ಒಂದು ಸ್ಟಾಂಡರ್ಡ್ ಎಕರೆ ಎಂಬುದಾಗಿ ಮಾಡಿದ್ದಾರೆ. ಆದರೆ ಒಂದು ಎಕರೆ ಭೂಮಿಯಲ್ಲಿ ಸಾಧಾರಣವಾಗಿ ಒಂದೂವರೆ ಪಲ್ಲದಿಂದ ಹಿಡಿದು ಮೂರು ಪಲ್ಲದವರೆಗೂ ರಾಗಿಯನ್ನು ಬೆಳೆಯಬಹುದು. ಅಂದರೆ ಎಂಟು ಪಲ್ಲ ರಾಗಿ ಬೆಳೆಯುವಂಥ ಒಂದು ಎಕರೆ ಜಮೀನು ಎಂಬುದಾಗಿ ಇವರು ಏನು ಹೇಳಿದ್ದಾರೋ—ಆ ಒಂದು ಜಮೀನಿನಲ್ಲಿ ಒಬ್ಬ ಮನುಷ್ಯ ಸುಮಾರು ಒಂದೂವರೆ ಪಲ್ಲದಿಂದ ಮೂರು ಪಲ್ಲದವರೆಗೂ ಬೆಳೆಯಬಹುದು. ಇಲ್ಲವೇ ಆತನು ಎಂಟು ಪಲ್ಲ ರಾಗಿಯನ್ನೇ ಬೆಳೆಯುವಷ್ಟು ಜಮೀನಿರಬೇಕೆಂದರೆ—ಅದು ಸುಮಾರು ಎರಡೂವರೆ ಎಕರೆಗಳಿಂದ ಮೂರು ಎಕರೆಗಳಷ್ಟು ಜಮೀನಿರಬೇಕೆಂದು ಹೇಳಿದಹಾಗೆ ಆಯಿತು. ಅಂದರೆ ಸಾಮಾನ್ಯವಾಗಿ ಈ ಎಂಟು ಪಲ್ಲ ರಾಗಿ ಬೆಳೆಯುವಂಥ ಜಮೀನಿನ ವಿಸ್ತೀರ್ಣ ಸುಮಾರು ಐದು ಎಕರೆಗಳಿಂದ ಏಳು ಎಕರೆಗಳವರೆಗೂ ಇರುತ್ತೆಂದು ನಾವು ಅಂದಾಜ ಮಾಡಬಹುದು. ಹೀಗೆ ಅಂದಾಜ ಮಾಡಿದಲ್ಲಿ—ಅವರು ಹೇಳತಕ್ಕಂಥ 25 ಎಕರೆ ಜಮೀನಿಗೆ—ಸುಮಾರು 150 ಎಕರೆಗಳನ್ನು ಹಾಕಿದರೆ ಆಗ ಅದು ಸರಿಹೋಗಬಹುದು. ಅಂದರೆ ಅಲ್ಲಿಗೆ ಒಬ್ಬ ವ್ಯಕ್ತಿ ಸಾಮಾನ್ಯವಾಗಿ 150 ಎಕರೆಗಳವರೆಗೂ ಜಮೀನನ್ನು ಇಟ್ಟುಕೊಳ್ಳಬಹುದೆಂದು ಹೇಳಿದಹಾಗಾಯಿತು. ಆದರೆ ಇದರ ಮೇಲೆ ಒಂದು ಪರಿಮಿತಿ ಹೇಳಿದ್ದಾರೆ. ಒಂದು ಸಂಸಾರದಲ್ಲಿ ಇರತಕ್ಕಂಥ ವ್ಯಕ್ತಿಗಳಿಗೆಲ್ಲಾ ಸೇರಿಕೊಂಡು ಇಷ್ಟು ಜಮೀನಿರಬಹುದು ಎಂದು ಹೇಳಿದ್ದಾರೆ. ಈರೀತಿ ಒಂದು ಅಂದಾಜನ್ನು ನಾವು ಹಾಕಿದರೆ ಒಬ್ಬೊಬ್ಬ ವ್ಯಕ್ತಿಯೂ ಸಾಧಾರಣವಾಗಿ 400 ಎಕರೆಗಳವರೆಗೂ ಜಮೀನನ್ನು ಇಟ್ಟುಕೊಳ್ಳಬಹುದು. ಆತನು ಜಮೀನನ್ನು ಹೊಂದಬಹುದು ಎಂದು ನಾವು ಹೇಳಿದಹಾಗಾಯಿತು. ಹೀಗೆ ಒಬ್ಬೊಬ್ಬರಿಗೂ 400 ಎಕರೆಗಳಷ್ಟು ಜಮೀನಿರಬಹುದೆಂದು ನಾವು ಒಂದು ಕಾನೂನುಮಾಡಿದ ಪಕ್ಷದಲ್ಲಿ ನಾವು ಗೇಣೀದಾರರಿಗೆ ಏನಾದರೂ ಒಂದು ಅನುಕೂಲ ಕಲ್ಪಿಸಲು ಇದರಿಂದ ಸಾಧ್ಯವಿದೆಯೇ ಎಂಬುದನ್ನು ನಾನೀಗ ಪ್ರಶ್ನಿಸಬೇಕಾಗಿದೆ. ನಾವು ರೈತರಿಗೆ ನ್ಯಾಯವಾಗಿ ದೊರಕಿಸಿ ಕೊಡಬೇಕಾದಂಥ ರಕ್ಷಣೆಗಳನ್ನು ದೊರಕಿಸಿಕೊಡಲು ಒಂದು ಕಾನೂನನ್ನು ಮಾಡುವುದಕ್ಕೆ ಹೊರಟು ಆ ರೈತರಿಗೆ ಹಿತಸಾಧನೆ ಮಾಡಲಾರದಂಥ ಅಂಶಗಳನ್ನು ಈ ಕಾನೂನಿನಲ್ಲಿ ಅಡಕಮಾಡಲು ಪ್ರಯತ್ನಿಸುತ್ತಿರುವಾಗ ನಾವು ಇಂಥ ಮಸೂದೆಗೆ ಬೆಂಬಲ ಕೊಡಬಹುದೇ ಎಂಬ ಅಂಶವನ್ನು ಪರಿಶೀಲನೆ ಮಾಡಬೇಕಾದಂಥ ಪ್ರಸಂಗ ಒದಗಿದೆ. ಆ ಪ್ರಸಂಗ ಈಗಲೇ ನಮ್ಮ ಮುಂದೆ ಬಂದಿದೆ. ಈಗ ಈ ಮಸೂದೆಯನ್ನು ಪಾಸ್ ಮಾಡುವುದೇನೋ ಬಹಳ

ಸುಲಭ. ಆದರೆ ಇದು ಕಾನೂನಾದ ಮೇಲೆ ರೈತರ ಇಂದಿನ ಕಷ್ಟಪರಿಸ್ಥಿತಿಗಳು ಬದಲಾವಣೆ ಆಗಬಹುದೇ ಅಥವಾ ಅವರಿಗೇನು ರಕ್ಷಣೆ ದೊರೆಯಬೇಕೋ ಅದು ಇದರಿಂದ ದೊರೆಯಲು ಸಾಧ್ಯವಿದೆಯೇ ಎಂಬುದನ್ನೂ ಕೂಡ ನಾವೀಗ ಆಲೋಚನೆ ಮಾಡತಕ್ಕದ್ದು ತೀರ ಅಗತ್ಯ. ಏತಕ್ಕೆಂದರೆ ಈ ಕಾನೂನು ಬಂದ ಮೇಲೆ ಜಮೀನಿನ ಒಡೆಯರಿಗೂ ಮತ್ತು ಗೇಣಿದಾರರಿಗೂ ಈ ಹಿಂದಿನಿಂದ ಇದ್ದಂಥ ಒಂದು ಮಧುರ ಬಾಂಧವ್ಯ ತಪ್ಪಿಹೋಗಿ ಅವರಲ್ಲಿ ಈಗ ವಿಶೇಷ ಭಿನ್ನಾಭಿಪ್ರಾಯಗಳುಂಟಾಗಿವೆ. ಈ ಭಿನ್ನಾಭಿಪ್ರಾಯಗಳು ಅನೇಕ ರೀತಿಯಲ್ಲಿ ದಿನೇದಿನೇ ವೃದ್ಧಿ ಹೊಂದುತ್ತಿವೆ. ಈ ಕಾನೂನು ಬರುವುದಕ್ಕೆ ಮುಂಚೆ ಅವರು ಒಳ್ಳೆಯ ಸ್ಥಿತಿಯಲ್ಲೇ ಇದ್ದರು. ಆಗಿನ ವಾತಾವರಣ ಚೆನ್ನಾಗಿತ್ತು. ಆದರೆ ನಾವೀದಿವಸ ಏನೋ ರೈತರನ್ನು ಉದ್ಧಾರಮಾಡುತ್ತೇವೆಂದು ಹೇಳಿ ಈರೀತಿಯಾಗಿ ಅವರಿಗೆ ಅನುಕೂಲವಿಲ್ಲದಂಥ ಒಂದು ಮಸೂದೆಯನ್ನು ತಂದು ಅವರು ಸುಖವಾದಂಥ ವಾತಾವರಣದಲ್ಲಿ ತಮ್ಮ ತಮ್ಮ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದುದ್ದನ್ನೂ ತಪ್ಪಿಸಿ, ನಾವು ಅವರಿಗೆ ಅನುಕೂಲಗಳನ್ನು ಮಾಡುವುದಕ್ಕೆ ಪ್ರತಿಯಾಗಿ ಇದರಿಂದ ಅನಾನುಕೂಲ ಮಾಡಿದಂತಾಗುವುದಿಲ್ಲವೇ ಎಂಬುದನ್ನು ನಾವೀಗ ತೀವ್ರವಾಗಿ ಆಲೋಚಿಸಬೇಕಾಗಿದೆ. ಈ ಮಸೂದೆ ಪಾಸಾದ ಮೇಲಂತೂ ಜಮೀನ್ದಾರರು ರೈತರಿಗೆ ತುಂಬ ಕಿರುಕುಳವನ್ನು ಕೊಡುತ್ತಿದ್ದಾರೆ. ಅವರಿಂದ ಜಮೀನನ್ನು ಕಿತ್ತುಕೊಳ್ಳುವಂಥ ಅವಕಾಶಗಳೇ ಎಲ್ಲೆಲ್ಲೂ ಜಾಸ್ತಿಯಾಗುತ್ತಿವೆ. ಈ ರೈತರ ಬಳಿ ಈ ದಿವಸ ಅವರು ತಮ್ಮ ಹಕ್ಕುಬಾಧ್ಯತೆಗಳನ್ನು ಸ್ಥಿರಪಡಿಸಿಕೊಳ್ಳಲು ಅವರಲ್ಲಿ ಯಾವ ವಿಧವಾದ ದಾಖಲಾತಿಗಳೂ ಇಲ್ಲವೆಂಬುದಾಗಿ ಶ್ರೀ ಗೋಪಾಲಗೌಡರು ಹೇಳಿದ್ದು ಅಕ್ಷರಶಃ ನಿಜವಾಗಿದೆ. ಮೊದಲು ಜಮೀನ್ದಾರರು ಅವರ ಜಮೀನನ್ನು ವಾರಕ್ಕೋ ಅಥವಾ ಗುತ್ತಿಗೆಗೋ ಕೊಟ್ಟದ್ದು ಅದನ್ನು ಒಬ್ಬನಿಗೇ ಸಾರೋದ್ಧಾರವಾಗಿ ಕೊಟ್ಟುಕೊಂಡು ಹೋಗುತ್ತಿದ್ದರು. ಈ ಕಾನೂನು ಬಂದ ಮೇಲೆ ಈಗ ವರ್ಷವರ್ಷಕ್ಕೂ ಅದನ್ನು ಬದಲಾಯಿಸಲು ಪ್ರಯತ್ನಪಡುತ್ತಿದ್ದಾರೆ. ಈ ಎಲ್ಲ ದೃಷ್ಟಿಗಳಿಂದಲೂ ಈ ಕಾನೂನನ್ನು ನಾವೀಗ ವಿಮರ್ಶೆಮಾಡಿ ನೋಡಿದರೆ ರೈತನಿಗೆ ನಾವು ಕಲ್ಪಿಸುವ ಅನುಕೂಲಗಳಿಗಿಂತಲೂ ಇದರಿಂದ ಆತನಿಗೆ ತೊಂದರೆಗಳು ಮತ್ತು ಅನಾನುಕೂಲಗಳೇ ಜಾಸ್ತಿಯಾಗಿರುತ್ತವೆ. ಹಾಗೆ ಈ ಕಾನೂನು ಬಂದ ಮೇಲೆ ರೈತರಿಗೆ ತೊಂದರೆಗಳು ಕಡಮೆಯಾದುದನ್ನು ನಾನಂತೂ ಈ ತಹಲ್‌ವರೆಗೂ ಎಲ್ಲಿಯೂ ನೋಡಿಲ್ಲ. ಇಷ್ಟೇ ಅಲ್ಲದೆ ದೂರಪ್ರಾಂತ್ಯದಲ್ಲಿರತಕ್ಕಂಥ ಆ ಬಡ ರೈತನಿಗೆ ನಾವಿಲ್ಲಿ ಮಾಡತಕ್ಕಂಥ ಕಾನೂನು ಬೇಗ ಗೊತ್ತಾಗುವುದಿಲ್ಲ. ಯಾವಾಗ ಆ ರೈತ ಈ ಹೊಸ ಹೊಸ ಕಾನೂನುಗಳಿಗೆ ಬೇಗ ಹೊಂದಾವಣಿಕೆಯಾಗಲು ಅವಕಾಶವಿರುವುದಿಲ್ಲವೋ, ಎಲ್ಲಿಯುವರಿಗೆ ಆತನಿಗೆ ಇದು ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೂ ಜಮೀನಿನ ಮಾಲೀಕನು ಬುದ್ಧಿವಂತನಾಗಿರುವುದರಿಂದ ಈ ಕಾನೂನುಗಳನ್ನೆಲ್ಲಾ ಬೇಗ ಅರಿತುಕೊಂಡು ತನ್ನ ಹಕ್ಕುಬಾಧ್ಯತೆಗಳನ್ನು ಸ್ಥಿರಪಡಿಸಿಕೊಳ್ಳಲು ಪ್ರಯತ್ನ ಮಾಡುತ್ತಾನೆ. ಇದರಿಂದ ರೈತನ ಪರಿಸ್ಥಿತಿ ತೀರ ಚಿಂತಾಜನಕವಾಗಿರುತ್ತದೆ. ಅಲ್ಲದೆ ಹಾಗೇನಾದರೂ ಒಂದು ವೇಳೆ ರೈತನಾದವನು ತನಗೆ ಉಂಟಾದ ತೊಂದರೆಗಳ ಬಗ್ಗೆ ರೆವಿನ್ಯೂ ಅಧಿಕಾರಿಗಳಿಗೇನಾದರೂ ತನ್ನದೂರಿನ ಒಂದು ಅರ್ಜಿಯನ್ನು ಕೊಟ್ಟರೆ ಆಗ ಊರಿನವರೆಲ್ಲರೂ ಒಂದಾಗಿಬಿಡುತ್ತಾರೆ. ಹೀಗಾಗಿ ಅರೈತ ಆ ಊರನ್ನೇ ಬಿಡಬೇಕಾದಂಥ ಪ್ರಸಂಗ ಕೂಡ ಒದಗುತ್ತದೆ. ಈ ನಾನಾ ಕಾರಣಗಳಿಂದ ನಾವು ಈ ಮೊದಲೇ ಯಾವ ಒಂದು ದೃಷ್ಟಿಯನ್ನಿಟ್ಟುಕೊಂಡು ಆ ರೈತನ ಹಿತರಕ್ಷಣೆ ಮಾಡಬೇಕೆಂದು ಉದ್ದೇಶಿಸಿ ಈ ಕಾನೂನು ಮಾಡಲು ಹೊರಟೆವೋ ಅಂಥ ಸದುದ್ದೇಶಗಳು ಈಗ ಈ ಮಸೂದೆಯಲ್ಲಿ ಅಡಕವಾಗಿರುವಂತೆ ಕಂಡುಬರುವುದಿಲ್ಲ. ಈ ಕಾನೂನನ್ನು ಯಾವ ವ್ಯಕ್ತಿಗಳಿಗೆ ಅನ್ವಯಿಸಬೇಕೆಂದು ಸರ್ಕಾರ ಆಲೋಚನೆ ಮಾಡಿದೆಯೋ ಅಂಥವರಿಗೆ ಇದರಿಂದ ಒಂದು ಅನುಕೂಲ ಮತ್ತು ಪ್ರಯೋಜನ ಆಗುವಹಾಗೆ ಮಾಡಬೇಕೆಂಬ ಒಂದು ಇರಾದೆಯು ಅವರಿಗೆ ಇದ್ದಪಕ್ಷದಲ್ಲಿ ಈ ಹಿಂದೆ ನಾವು ಯಾವ ಒಂದು ತತ್ವವನ್ನು ಈ ಭೂಸುಧಾರಣೆ ಬಗ್ಗೆ ತರಲು ನಿಶ್ಚಯಿಸಿದ್ದೆವೋ ಆ ತತ್ವಗಳನ್ನೇ ಇದರಲ್ಲಿ ಅಡಕಮಾಡಿ, ಅವುಗಳು ಬೇಗ ಸಾಧನೆಯಾಗುವಂತೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡರೆ, ಆಗ ಅದಷ್ಟೂ ಈ ಜಮೀನು ಪರಿಮಿತಿಯ ಪ್ರಶ್ನೆ ಇತ್ಯರ್ಥವಾಗುತ್ತದೆ. ಆರೀತಿ ಅದನ್ನು ಮೊದಲು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರೈತರಿಗೆ ಅನುಕೂಲ ಕಲ್ಪಿಸಬೇಕೆಂಬ ಒಂದು ದೃಢ ಮನಸ್ಸಿನಿಂದ ರೈತರ ಹಿತರಕ್ಷಣೆ ಮಾಡಿಯೇ ತೀರುತ್ತೇವೆಂಬ ಒಂದು ದೃಢ ಚಿತ್ತ ಅವರಿಗೆ ಇದ್ದರೆ ಅವರು ಕೂಡಲೇ ಈ ಎಲ್ಲಾ ಅಂಶಗಳನ್ನು ಒಳಗೊಂಡಂಥ ಒಂದು ಪೂರ್ಣ. ಕಾನೂನನ್ನು ಬೇಗ ತರಲಿ. ಹಾಗಿಲ್ಲದಿದ್ದರೆ ಇಂಥ ಕಾನೂನುಗಳಿಂದ ರೈತನಿಗೆ ಅನಾವಶ್ಯಕವಾಗಿ ಅನೇಕ ತೊಂದರೆಗಳುಂಟಾಗುತ್ತವೆ. ಇಂಥ ಕಾನೂನುಗಳನ್ನು ತರಲು ಇದರಿಂದ ರೈತರ ಸಂರಕ್ಷಣೆ ಆಗುತ್ತದೆಂದು ಯಾರಾದರೂ ಹೇಳಿದರೆ ನನಗಂತೂ ಇದರಬಗ್ಗೆ ಇರತಕ್ಕ ನಂಬಿಕೆಯಲ್ಲಾ ಏಕೋ ದೂರವಾಗಿ ಹೋಗುತ್ತಿದೆ. ಇನ್ನು ಈ ಪರ್ಮಿಸಿಬಲ್ ಹೋಲ್ಡಿಂಗ್ಸ್ ಬಗ್ಗೆ ಇವರು ಒಬ್ಬೊಬ್ಬ ವ್ಯಕ್ತಿಯೂ 500 ಎಕರೆಗಳಿಂದ ಹಿಡಿದು 800 ಎಕರೆಗಳ ವರೆಗೂ ಇಟ್ಟುಕೊಳ್ಳಬಹುದೆಂದು ಹೇಳಿದ್ದಾರೆ.

Sri Kadidal MANJAPPA.—With your kind permission, Sir, may I know from the Hon'ble Member what his conception of the permissible holding is?

Sri B. T. KEMPARAJ.—My conception of 'permissible holding' is that the members of a joint family can retain an extent of land amounting to 100 standard acres for cultivation for that family.

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಅಭಿಪ್ರಾಯದ ಪ್ರಕಾರ ಎಷ್ಟು ಎಕರೆಗಳನ್ನು ಇಟ್ಟುಕೊಳ್ಳಬಹುದು ಎಂಬುದನ್ನಾದರೂ ತಿಳಿಸುತ್ತೀರಾ!

ಶ್ರೀ ಬಿ. ಟಿ. ಕೆಂಪರಾಜ್.—ಗೇಣೀದಾರರಿಗೆ ಜಮೀನಿನ ಬಗ್ಗೆ ಒಂದು ಹಕ್ಕನ್ನು ಕಲ್ಪಿಸಿಕೊಡಬೇಕು ಎಂಬ ಅಂಶ ಈ ಮಸೂದೆಯಲ್ಲಿ ಅಡಕವಾಗಿದೆ. ಈ ಅಂಶದ ಪ್ರಕಾರ ಇಲ್ಲಿ ತಾವು ಹೇಳಿರತಕ್ಕದ್ದೇನೆಂದರೆ:—

"Their permissible holding in respect of any one person shall be an extent of arable land equal to twenty-five standard acres:

(SRI B. T. KEMPARAJ.)

"Provided that where land is held by a person on behalf of himself and the other members of his family who are legally entitled to such land, the permissible holding shall be the extent of arable land determined on the basis of twenty-five standard acres per each member of the family subject to the condition that the total extent shall not in any case exceed one hundred standard acres."

I wish to draw the kind attention of the Hon'ble Minister through you, Sir, that a member of the family, subject to the condition of the total extent, shall not in any case have more than 100 standard acres. Therefore, it implies that the total number of standard acres that a person, who is a member of the joint family, can have may be 100 standard acres.

Sri Kadidal MANJAPPA.—You agree with the . . . .

Sri B. T. KEMPARAJ.—I am trying to clarify.

Sri Kadidal MANJAPPA.—I wanted to know the opinion of the Hon'ble Member in the matter.

Sri B. T. KEMPARAJ.—I shall express my opinion. It is implied that one standard acre will be a land which gives an yield of eight pallas of ragi or paddy. According to the explanation that I have already given, in one acre, the acreage yield may be between 1½ pallas of ragi to three pallas. Therefore, the number of acres that is required to get six to eight pallas of ragi or paddy will be between five to six acres. Eight pallas of ragi may be got from 4 acres of land which should be most fertile land. That will be four acres at the most. Therefore, one hundred standard acres which a family may possess means nearly five hundred acres. Even in some cases when we take the fertility of the soil into consideration, to determine the standard acres, it may exceed five hundred acres. Therefore my point is this. A limitation is fixed in one way on the definition of the standard acre. On this definition af amily may possess five hundred acres. When such permissible holdings are allowed to the members of a joint family, how many tenants can have the benefit of enjoying the privileges that we may be contemplating to extend? That is my point. I may say that there may not be many persons in our State who might have got many acres of wet land. Therefore the fixation of the standard acre by itself will be of no benefit to a tenant. Here, usually, the person who has extensive lands, will have a big family. Therefore, the standard acre as defined under this Bill cannot give room for a tenant to have any benefit to take up the land for his use, nor can the tenant be engaged by the land holder. So, Sir, I am trying to point out that the very purpose of the Bill, the very force of the Bill and the very ideology implied in this Bill may not be serving the purpose for which it is brought.

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಸಲಹೆಯೇನು?

ಶ್ರೀ ಬಿ. ಟಿ. ಕೆಂಪರಾಜ್.—ಹೇಳುತ್ತೇನೆ. ಆದುದರಿಂದ ಈ ಸ್ಟಾಂಡರ್ಡ್ ಏಕರ್ ಎಂದು ಯಾವುದನ್ನು ನಮೂದಿಸಲಾಗಿದೆಯೋ ಅದರ ಪರಿಮಿತಿಯನ್ನು ಸರಿಯಾದ ರೀತಿಯಲ್ಲಿ ಗೊತ್ತು ಮಾಡಬೇಕೆಂಬುದು ನನ್ನ ಅಭಿಪ್ರಾಯ. ನನ್ನ ಅಭಿಪ್ರಾಯದ ಪ್ರಕಾರ ಈ ಸ್ಟ್ಯಾಂಡರ್ಡ್ ಏಕರ್ ಎನ್ನುವುದಕ್ಕಿಂತ ಒಂದು ಗೊತ್ತುವಳಿಯಾದ ನಿಯಮವನ್ನು ಇಡತಕ್ಕದ್ದು ಅಗತ್ಯ. ರೈತರು ವ್ಯವಸಾಯ ಮಾಡತಕ್ಕ ವ್ಯಕ್ತಿಗಳು; ಜಮೀನು ಪಡೆದಿರುವವರ ಹತ್ತಿರ ವ್ಯವಸಾಯ ಮಾಡಿಕೊಂಡಿರತಕ್ಕ ವ್ಯಕ್ತಿಗಳಿಗೆ ಒಂದು ನಿರ್ದಿಷ್ಟವಾದ ಕಾಲದಲ್ಲಿ, ತಾವು ವ್ಯವಸಾಯ ಮಾಡಿಕೊಂಡು ತಮ್ಮ ಜೀವನವನ್ನು ನಡೆಸಿಕೊಳ್ಳಬಹುದೆಂದು ಮನದಟ್ಟಾಗುವಂತೆ ನೀವು ಮಾಡಬೇಕಾದ ಪಕ್ಷದಲ್ಲಿ, permissible holding ಎಂದು ನಾವು ಒಂದು ನಿಗದಿಯನ್ನಿಟ್ಟುಕೊಂಡಿದ್ದೇವೋ ಅದು ಬಹಳ ಹೆಚ್ಚು. ಈ ರೀತಿ ಹೆಚ್ಚಾದ ವಿಸ್ತೀರ್ಣವನ್ನು ನಿಗದಿ ಮಾಡಿರುವುದರಿಂದ ಜಮೀನು ಮಾಲೀಕರು ಸ್ವತಃ ಕೂಲಿಗಾರರನ್ನಿಟ್ಟುಕೊಂಡು ವ್ಯವಸಾಯ ಮಾಡುವುದಕ್ಕೆ ಹೆಚ್ಚು ಅವಕಾಶ ಕಲ್ಪಿಸಿದಂತಾಗುತ್ತದೆ. ಏಕೆಂದರೆ, ಯಾವ ಜಮೀನು ಮಾಲೀಕನಾಗಲಿ ತನ್ನಲ್ಲಿರತಕ್ಕ ಜಮೀನನ್ನು ಅಷ್ಟು ಸುಲಭವಾಗಿ ಗುತ್ತಿಗೆಗೆ ರೈತರಿಗೆ ಕರೆದು ಕೊಡಲು ಆತನಿಗೆ ಮನಸ್ಸು ಬರುವುದಿಲ್ಲ. ಏಕೆಂದರೆ, ಒಂದು ಪರಿಮಿತಿಯಿರುವಾಗ, ಆ ಪರಿಮಿತಿಯಲ್ಲಿ ತನ್ನ ಜಮೀನನ್ನು ಸಾಗುಮಾಡಿಕೊಳ್ಳಲು, ಕೆಲಸಗಾರರನ್ನೂ ಕೂಲಿಗಾರರನಿಟ್ಟುಕೊಂಡು ವ್ಯವಸಾಯ ಮಾಡುವುದಕ್ಕೆ ಏರ್ಪಾಡು ಮಾಡುತ್ತಾನೆ. ಆದುದರಿಂದ ನಾವು ಹತ್ತು ವರ್ಷಗಳಕಾಲ ವ್ಯವಸಾಯ ಮಾಡುವ ಹಕ್ಕನ್ನು ಕಲ್ಪಿಸಲು ಹೊರಟಿದ್ದೇವೆಂದು ಹೇಳಿ, ಜಮೀನಿನ ಒಂದು ಪರಿಮಿತಿ ಇಟ್ಟು ಇಷ್ಟರವರೆಗೆ ಜಮೀನು ಮಾಲೀಕರು ಜಮೀನನ್ನುಳಿಸಿಕೊಂಡು ಉಳುಮೆ ಮಾಡಿಕೊಳ್ಳಬಹುದೆಂದು ನಿಗದಿ ಮಾಡಿರುವುದರಿಂದ, ಉಳುಮೆ ಮಾಡಿರುವ ರೈತನಿಗೆ ಒಂದು ದೃಢವಾದ ಮನಸ್ಸು, ನಂಬಿಕೆ ಬರಲು ಈ ಕಾನೂನು ಸಹಾಯ ಮಾಡುತ್ತದೆಂದು ಯೋಚಿಸುವುದು ಅಷ್ಟು

ಸಾಧುವಲ್ಲ. ಈ ಪರಿಮಿತಿಯಿಂದ ಜಮೀನಿನ ಮಾಲೀಕರು ಇಷ್ಟು ಜಮೀನನ್ನು ಹೊಂದಬಹುದು. ಇಟ್ಟುಕೊಳ್ಳಬಹುದಾದ ಜಮೀನಿನ ಪರಿಮಿತಿಯನ್ನು ಗೊತ್ತುಮಾಡಬೇಕಾದುದೇನೋ ಅಗತ್ಯ.

ಇದ್ನು ಉಳಿಯತಕ್ಕ ಜಮೀನನ್ನು ರೈತರಿಗೆ ಗುತ್ತಿಗೆಗೆ ಅಥವಾ ವಾರಕ್ಕೆ ಹತ್ತು ವರ್ಷದ ಪರಿಮಿತಿಗೆ ಕೊಡಬಹುದೆಂದು ಇದರಲ್ಲಿರುವುದು ಸಾಧುವೆಂದು ನನಗನ್ನಿಸುತ್ತದೆ. ಈಗ ತರೀ ಜಮೀನಿನ ವಿಚಾರವಾಗಿ ಒಂದಂಶವನ್ನು ಹೇಳಬೇಕೆಂದಿದ್ದೇನೆ. ಎಂಟು ಪಲ್ಲ ಬತ್ತ ಬೆಳೆಯುವುದು ಒಂದೆಕರೆಯೆಂದು ತರಿ ಜಮೀನಿನ ವಿಚಾರವಲ್ಲಿ ಹೇಳಿದೆ. ಒಂದೆಕರೆ ತರಿಯಲ್ಲಿ ಐದಾರು ಪಲ್ಲದಿಂದ ಹತ್ತು, ಹದಿನೈದು ಪಲ್ಲ ಅಥವಾ ಇಪ್ಪತ್ತು ಪಲ್ಲದವರೆಗೆ ಕೂಡ ಭತ್ತವನ್ನು ಬೆಳೆಯ ಬಹುದು, ಜಪಾನ್ ಪದ್ಧತಿಯ ಪ್ರಕಾರ ಇನ್ನೂ ಹೆಚ್ಚು ಬೆಳೆಯಬಹುದೆಂದು ಸ್ನೇಹಿತರು ಹೇಳುತ್ತಿದ್ದಾರೆ. ನೂರು ಸ್ಟಾಂಡರ್ಡ್ ಎಕರೆಗಳಷ್ಟು ಜಮೀನು ಒಂದು ಸಂಸಾರಕ್ಕೆ ಇರಬಹುದೆಂಬ ಅಂಶವನ್ನು ಇಲ್ಲಿ ಸೂಚಿಸಿದ್ದಾರೆ. ಎಂಟು ಫಲ್ಲ ಬರತಕ್ಕ ಒಂದು ಪ್ರದೇಶ ಒಂದು ಸ್ಟ್ಯಾಂಡರ್ಡ್ ಎಕರೆ. ಇಂಥ ಸ್ಟಾಂಡರ್ಡ್ ಎಕರೆಗಳನ್ನು "in a joint family, there may be 100 standard acres, the standard acre being defind that one acre should yield 8 pallas of ragi or paddy" ಎಂದು ಇದರಲ್ಲಿ ನಮೂದಿಸಿದೆ. ಇಷ್ಟು ಪರಿಮಿತಿಯನ್ನು ಇಲ್ಲಿಯೂ ಸಹ ಕಾಣಿಸಿರುವುದು ರೈತರ ಹಿತದೃಷ್ಟಿಯಿಂದ ಸಾಧುವಲ್ಲವೆಂದು ನಾನು ಭಾವಿಸಿದ್ದೇನೆ. ಸ್ವಾಮಿ, ಶ್ರೀಮಾನ್ ಎಂ. ವಿ. ರಾಮರಾಯರು ವ್ಯಕ್ತಿಗಳಿಗೆ ಸಂಬಂಧಪಟ್ಟ ಇನಾಮ್ ರದ್ದಿಯಾತಿ ಮಸೂದೆಯ ಮೇಲೆ ಮಾತನಾಡಿದ ಸಂದರ್ಭದಲ್ಲಿ ಹೇಳಿದುದು ನನಗೆ ಜ್ಞಾಪಕಕ್ಕೆ ಬರುತ್ತದೆ. ಅವರು ಆ ಸಂದರ್ಭದಲ್ಲಿ ರೈತರಿಗೆ ಜಮೀನಿನ ಒಡೆತನವನ್ನು ಕೊಡಲು ಇಷ್ಟವಿದ್ದರೆ ಆ ರೀತಿ ಒಂದು ಪ್ರತ್ಯೇಕ ಕಾನೂನನ್ನು ತರುವುದು ಸೂಕ್ತವೆಂದು ಹೇಳಿದ್ದಾರೆ, ಇದನ್ನೇ ನಾವು Socialistic Pattern of Society ಎಂದು ಒಪ್ಪಿಕೊಂಡಿದ್ದೇವೆ. ಯಾವ ತತ್ವವನ್ನು ನಾವು ಒಪ್ಪಿಕೊಂಡಿದ್ದೇವೋ ಆ ತತ್ವದ ಮೇಲೆ ಒಂದು ಕಾನೂನು ಮಾಡುವುದರಲ್ಲಿ ಏನು ಅಭ್ಯಂತರವಿದೆ ಎಂದು ಈ ಸಂದರ್ಭದಲ್ಲಿ ನಾನು ಪ್ರಶ್ನಿಸಬೇಕಾಗಿದೆ. ಆ ತತ್ವವನ್ನೊಪ್ಪಿಕೊಂಡು ಅದು ಮೋಟಕಾಗುವ ಹಾಗೆ ನಿಯಮಾವಳಿಯನ್ನು ಹಾಕಿ ಆ ತತ್ವವನ್ನು ಜಾರಿಗೆ ತರಲು ಅಡ್ಡಿಗಳನ್ನು ರೂಪಿಸಿಕೊಳ್ಳುವುದು ನ್ಯಾಯವಾಗಿ ಕಾಣುವುದಿಲ್ಲ. ಹತ್ತು ವರ್ಷದ ನಿಗದಿಯನ್ನು ಏಕೆ ಇಡಬೇಕಾಗಿತ್ತು? ಐದು ವರ್ಷದಲ್ಲಿ ಜಮೀನು ಉಳುವ ರೈತನಿಗೆ ಆ ಜಮೀನನ್ನು ಅನುಭವಿಸುವ ಒಂದು ಅವಕಾಶವನ್ನು ಕಲ್ಪಿಸುವುದರಲ್ಲಿ ಯಾವ ಅಭ್ಯಂತರವಿದೆ ಎಂದು ನಾವು ಪ್ರಶ್ನಿಸಬೇಕಾಗಿದೆ. ಮೊದಲು 1952 ರಲ್ಲಿ ಮಾಡಿದ ಕಾನೂನಿನಲ್ಲಿ ಐದು ವರ್ಷದವರೆಗೆ ಜಮೀನು ಮಾಲೀಕ ಗೇಣೀದಾರನನ್ನು ಬಿಡಿಸಬಾರದು, ಆತನು ಸರಿಯಾಗಿ ಗುತ್ತಿಗೆ ಕೊಡುತ್ತಿದ್ದ ಪಕ್ಷದಲ್ಲಿ ಎಂದಿದೆ. ಈಗ ಅದೇ ಕಾನೂನನ್ನು ತಿದ್ದುಪಡಿ ಮಾಡಿ ಹತ್ತು ವರ್ಷಗಳ ನಿಗದಿಯನ್ನು ಮಾಡಬೇಕಾದ ಅವಶ್ಯಕತೆ ಏನಿತ್ತು ಎಂದು ಕೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಹತ್ತು ವರ್ಷ ಮಾಡಬೇಡಿ, ಐದು ವರ್ಷ ಮಾಡಿ ಎಂತಲೇ ತಮ್ಮ ಅಭಿಪ್ರಾಯ?

ಶ್ರೀ ಬಿ. ಟಿ. ಕೆಂಪರಾಜ್.—ಐದು ವರ್ಷಗಳ ಪರಿಮಿತಿಯನ್ನು ಗೊತ್ತುಮಾಡುವುದರಲ್ಲಿ ಮುಖ್ಯವಾಗಿರುವ ತತ್ವ ಉಳತಕ್ಕ ರೈತನಿಗೆ ಆದಷ್ಟುಬೇಗ ಆ ಜಮೀನಿನ ಮೇಲೆ ಹಕ್ಕು ಕಲ್ಪಿಸಿಕೊಡಬೇಕೆಂಬುದು. ಈ ಒಂದು ತತ್ವ ಅದರಲ್ಲಿ ಅಡಕವಾಗಿರುವಾಗ, ಐದು ವರ್ಷ ಅವನು ಗೇಣೀದಾರನಾಗಿ ಮಾಡಿದ ಮೇಲೆ ಅವನು ಬೇಸಾಯಮಾಡತಕ್ಕ ಜಮೀನಿನಮೇಲೆ ಏಕೆ ಹಕ್ಕನ್ನು ಕಲ್ಪಿಸಬಾರದೆಂಬುದು ನನ್ನ ಪ್ರಶ್ನೆ. ಐದು ವರ್ಷವಾಗಲಿ, ಹತ್ತುವರ್ಷವಾಗಲಿ, ಇಪ್ಪತ್ತು ವರ್ಷಗಲಿ ನಾವು ಒಪ್ಪಿಕೊಂಡಿರುವ ತತ್ವದ ವಿಚಾರವನ್ನು ನಾನು ಇಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಸೋಷಿಯಲಿಸ್ಟಿಕ್ ಪ್ಯಾಟರ್ನ್ ಸೊಸೈಟಿಯ ತತ್ವವನ್ನು ನಾವು ಒಪ್ಪಿಕೊಂಡಿರುವಾಗ ಸಮಾಜದಲ್ಲಿರುವ ರೈತರಿಗೆ

5 P.M.

ಜಮೀನಿನಲ್ಲಿ ಹೆಚ್ಚು ಹೆಚ್ಚು ಹಕ್ಕನ್ನು ಕಲ್ಪಿಸಿ ಕೊಡುವುದರಿಂದ ಅವರ ಜೀವನವು ಸುಗಮವಾಗಿ ನಡೆಯಲು ಸಾಧ್ಯವಾಗುತ್ತದೆ. ಇಂಥ ಒಂದು ನಂಬಿಕೆಯನ್ನು ಹುಟ್ಟಿಸುವುದು ನಮ್ಮ ಕರ್ತವ್ಯ ಎನ್ನುವುದೇ ನನಗೆ ಅರ್ಥವಾಗಿರುವ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಸೊಸೈಟಿ.

Mr. SPEAKER.—I want to know from the Hon'ble Member how much time he requires.

Sri B. T. KEMPARAJ.—I shall continue tomorrow, Sir.

Mr. SPEAKER.—The House will rise and meet at 12 o' clock tomorrow.

The House adjourned at Two Minutes past Five of the Clock to meet again at Twelve of the Clock on Tuesday the 1st March 1955.

WD 4508—GPB—550—7-4-55